ಭಾನುವಾರ, ಆಗಸ್ಟ್ 21, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಕಟ್‌ಪುತಲಿ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ರಕುಲ್ ಪ್ರೀತ್ ಸಿಂಗ್ ಪಾಲ್ಗೊಂಡಿದ್ದರು



ಭಾನುವಾರ, ಆಗಸ್ಟ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 232 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ನೆನಪನ್ನು ಅಳಿಸಿಹಾಕುವ ಅತಿರೇಕದ ಪ್ರಯತ್ನಗಳ ನಡುವೆ ಚಾರಿತ್ರಿಕ ದಾಖಲೆಗಳನ್ನೇ ಇಟ್ಟುಕೊಂಡು ನೆಹರೂ ಅವರ ವ್ಯಕ್ತಿತ್ವ ಕಟ್ಟಿಕೊಡುವ ಯತ್ನ...



‘ಕಾಶ್ಮೀರ ಸಮಸ್ಯೆ : ಯುದ್ಧ ಆಯ್ಕೆಯಲ್ಲ’ 7

ಧರ್ಮ ವಿಭಜನೆ ಕುರಿತ ಹೇಳಿಕೆ – ಸಿದ್ದರಾಮಯ್ಯ ಸ್ಪಷ್ಟನೆ

ಮೊಟ್ಟೆ ಎಸೆತ: ಎಂಟು ಜನರ ಬಂಧನ 5

‘ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ’ 5

ಶ್ರಾವಣ.. ಇಲ್ಲಿ ಕುಣಿದ್ಹಾಂಗ ರಾವಣ, ಬದುಕೆಂಬುದು ಇಲ್ಲಿ ಕೀಲಿಲ್ಲದ ಬಂಡಿ.. ಮಳೆ ಇದರ ಸಾಹೇಬ

ನೆರೆ ಹೋದರೂ ತೀರದ ಬವಣೆ

• ರಶ್ಮಿ ಎಸ್.

ಅದೊಂದು ಕಾಲವಿತ್ತು, ಶ್ರಾವಣವೆಂದರೆ ಜಿಟಿಜಿಟಿ ಮಳೆಯಲ್ಲಿ ದೇಗುಲ ದರ್ಶನ ಮಾಡಿಕೊಂಡು, ಪ್ರವಚನ ಕೇಳಿಕೊಂಡು, ಹಬ್ಬಹರಿದಿನಗಳನ್ನು ಆಚರಿಸುತ್ತಿದ್ದರು. ಆದರೀಗ ಶ್ರಾವಣವೆಂದರೆ ರಾವಣನ ಹೆಜ್ಜೆಗಳು ನೆನಪಾಗುತ್ತವೆ... ಕಡತಗಳಲ್ಲಿ ಪರಿಹಾರ ಸಂದಾಯವಾಗಿದ್ದರೂ ಬದುಕು ಕಟ್ಟಿಕೊಳ್ಳುವುದು ಮಾತ್ರ ದೂರದ ಮಾತಾಗಿದೆ...

ಹುಬ್ಬಳ್ಳಿ: ‘ಅದ್ಯಾವ ಕಾಲದಾಗ, ಅಡಗಿಮನಿಯೊಳಗ ಚಕ್ಕಳಂಬಕ್ಕಳ ಹಾಕ್ಕೊಂಡು, ಬಿಸಿಬಿಸಿ ರೊಟ್ಟಿ ಉಂಡ್ವಿ... ಪಡಸಾಲಿಯೊಳಗ ಅಡಕಿ ಹಾಕ್ಕೊಂಡು ಮಾತಾಡ್ಕೊಂತ ಕುಂತಿದ್ವಿ? ನಮ್ಮ ಖೋಲಿಯೊಳಗ ಬೆಚ್ಚನೆಯ ಕೌದಿ ಹೊದ್ದು ಮಲಗಿದ್ವಿ..? ನೆನಪ ಆಗವಲ್ದ್ರಿ... ಎರಡು ಮೂರು ವರ್ಷ ಕಳದೇ ಹೋದ್ವು. ಈ ಶೆಡ್ಡಿನಾಗ ಚೀಟ ಸಂಸಾರ ಶುರು ಮಾಡಿ... (ಚೀಟ್ ಸಂಸಾರ: ಪುಡಿಕೆಗಳಲ್ಲಿಯೇ ಇಷ್ಟಿಷ್ಟೇ ದವಸ ಧಾನ್ಯಗಳನ್ನು ತೆಗೆದಿಟ್ಟು ಅಲೆಮಾರಿಗಳಂತೆ ಬದುಕುವುದಕ್ಕೆ ಹಾಗೆ ಕರೆಯುತ್ತಾರೆ).

ಪ್ರತಿ ಕೋಣೆಯಲ್ಲಿಯೂ ಗೋಡೆಗೆ ಕಟ್ಟಿದ ಹಗ್ಗಗಳು. ಅಲ್ಲಲ್ಲೇ ತೇಪೆ ಹಾಕಿದ, ಮಾಸಿದ ಬಟ್ಟೆಗಳು, ಮೂಲೆಯಲ್ಲಿ ಒಂದಷ್ಟು ಹಾಸಿಗೆ, ಹೊದಿಕೆ ಬಟ್ಟೆಯ ಗಂಟು, ಕಿಟಕಿ ಅಡಿಯಲ್ಲಿ ಸಣ್ಣದೊಂದು ಒಲೆ ಹೂಡಿದ್ದು, ಕರಿಮಸಿ ಬಳಿದ ಪಾತ್ರೆಗಳು. ಕೆಲವರು ಗ್ಯಾಸನ್ನೂ ಇರಿಸಿಕೊಂಡಿದ್ದಾರೆ. ಬೆರಳೆಣಿಕೆಯ ಪಾತ್ರೆಗಳಲ್ಲಿ ಇವರ ಬದುಕು ತೇಯ್ದು, ತೊಯ್ದು ಹೊರಟಿದೆ.

ಹಾವೇರಿ ತಾಲ್ಲೂಕಿನ ಹಳೆಮೇಲ್ಮುರಿ ಗ್ರಾಮಕ್ಕೆ ಬಂದರೆ, ಈ ಚಿತ್ರಣ ನಿಮಗೆ ಕಾಣಸಿಗುತ್ತದೆ. 2019ರ ಪ್ರವಾಹ ಬಂದಾಗ 31 ಕುಟುಂಬಗಳಿಗೆ ಇಲ್ಲಿ ತಾತ್ಕಾಲಿಕ ವಾಸಕ್ಕೆ ಶೆಡ್ ನಿರ್ಮಿಸಿ ನೀಡಲಾಗಿತ್ತು. ಈಗಲೂ ಹದಿನೈದು ಕುಟುಂಬಗಳು ಇಲ್ಲಿಯೇ ವಾಸವಾಗಿವೆ. ಈ ಭಾಗದ ಬಹುತೇಕ ಕುಟುಂಬಗಳಿಗೆ ಸೂರು ಕೈಗೆಟುಕದ ಕನಸಾಗಿಯೇ ಉಳಿದಿದೆ. ಕೃಷ್ಣೆ, ಕೃಷ್ಣೆಯ ಉಪನದಿಗಳಾದ ವೇದಗಂಗಾ, ದೂದ್‌ಗಂಗಾ, ಮತ್ತು ಘಟಪ್ರಭಾ, ಮಲಪ್ರಭಾ, ವರದಾ, ಕುಮದ್ವತಿ, ಭೀಮಾ ನದಿ ತೀರದ ಗ್ರಾಮಗಳಿಗೆ ತೀರದ ಸಮಸ್ಯೆಗಳು. ಅತಿವೃಷ್ಟಿ ಮತ್ತು ಪ್ರವಾಹ ಇವೆರಡೂ ಒಂದಕ್ಕೆ ಒಂದು ಬೆನ್ನಟ್ಟಿಕೊಂಡು ಬರುತ್ತವೆ. ನೆರೆಯ ಮಹಾರಾಷ್ಟ್ರವು ಈ ಗಡಿ ಭಾಗದ ಜಿಲ್ಲೆಗಳಿಗೆ ಹೊರೆಯಂತೆಯೇ ಆಗಿದೆ. ಅಲ್ಲಿ ಜೋರು ಮಳೆ ಬಂದರೂ ಇಲ್ಲಿಯ ಸೇತುವೆಗಳು, ಗ್ರಾಮಗಳು ಜಲಾವೃತ-ವಾಗುತ್ತವೆ.

ಘಟಪ್ರಭಾ, ಮಲಪ್ರಭಾ, ಕೃಷ್ಣಾ ನದಿಯೊಳಗಿನ ಏರಿಳಿತದಲ್ಲಿ ಈ ಭಾಗದವರ ಕಣ್ಣೀರು ಮತ್ತು ನಿದ್ದೆ ಎರಡೂ ಹರಿದು ಹೋಗುತ್ತವೆ. 2019ರ ನೆರೆಯಲ್ಲಿ ಮನೆ ಕುಸಿದವರಲ್ಲಿ ಬಹುತೇಕರಿಗೆ ಬಯಲು ಬದುಕಾಗಿದೆ. ಕಡತಗಳಲ್ಲಿ ಪರಿಹಾರ ಸಂದಾಯವಾಗಿದೆ. ಆದರೆ ಬದುಕು ಕಟ್ಟಿಕೊಳ್ಳಲಾಗಿಲ್ಲ. ಮನೆ ನಿರ್ಮಾಣ ಸಂಪೂರ್ಣವಾಗಿಲ್ಲ.

ತುಂಗಭದ್ರೆಯಲ್ಲಿ ಹರಿವು ಹೆಚ್ಚಾದರೆ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕತೆಯೂ ಇದೇ ಆಗುತ್ತದೆ. ಈ ತಾಲ್ಲೂಕಿನ ಹಳೆಶಿಂಗಟಾಲೂರು, ಗುಮ್ಮಗೋಳ, ಬಿದರಳ್ಳಿ ವಿಠಲಾಪೂರ ಗ್ರಾಮಗಳು ಪ್ರವಾಹಭೀತಿ ಎದುರಿಸುತ್ತವೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಹಾವೇರಿ ತಾಲ್ಲೂಕಿನ ಹಳೆಮೇಲ್ಮುರಿ ಗ್ರಾಮದ ಹದಿನೈದು ಕುಟುಂಬಗಳು ಈಗಲೂ ಈ ತಾತ್ಕಾಲಿಕ ಶೆಡ್‌ಗಳಲ್ಲಿಯೇ ವಾಸ ಮಾಡುತ್ತಿದ್ದಾರೆ. 2019ರ ಪ್ರವಾಹದ ನಂತರ ಹದಿನಾರು ಕುಟುಂಬಗಳು ಸ್ಥಳಾಂತರಗೊಂಡಿವೆ –ಪ್ರಜಾವಾಣಿ ಚಿತ್ರ

ಒಳನೋಟ

ಹಳಿಗೆ ಮರಳದ ಬದುಕು

ಪ್ರತಿಕ್ರಿಯಿಸಿ: 9606038256

feedback@prajavani.co.in

ಸ್ಥಳಾಂತರಕ್ಕೆ ಯಾಕಿಲ್ಲ ಒಲವು?

ಗ್ರಾಮಗಳ ಸ್ಥಳಾಂತರ ಅಥವಾ ಪುನರ್ವಸತಿಯಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಗ್ರಾಮಸ್ಥರಿಂದಲೇ ವಿರೋಧ ವ್ಯಕ್ತವಾಗುತ್ತದೆ.

ಇಲ್ಲಿ ಕಟ್ಟಡಗಳನ್ನಷ್ಟೇ ಅಲ್ಲ, ಬದುಕಿನ ವಿಧಾನವನ್ನೇ ಬದಲಿಸಬೇಕಾಗುತ್ತದೆ. ಹಳೆಯ ವಸ್ತಿಯಲ್ಲಿ ಜಾನುವಾರುಗಳಿಗೆ ಚಕ್ಕಡಿ ಬಂಡಿಗಳಿಗೆ ತಮ್ಮದೇ ಜಾಗ ಮಾಡಿಕೊಂಡಿರುತ್ತಾರೆ. ಮನೆಯಲ್ಲಿ, ಮನೆಯ ಅರ್ಧದಷ್ಟು ಕೊಟ್ಟಿಗೆ ಇರುತ್ತದೆ. ಹಿತ್ತಲವನ ದೈನಂದಿನ ತರಕಾರಿ ಖರ್ಚು ಕಳೆಯುವಂತೆ ಬೆಳೆಸಿಕೊಂಡಿರುತ್ತಾರೆ. ಬಣವೆ ಹಾಕಲು, ಹೂ, ತರಕಾರಿ ಬಳ್ಳಿಗಳನ್ನು ಬೆಳೆಸಿ, ಖರ್ಚು ನೀಗಿಸುವಂತೆ ಬದುಕುವುದು ಸಾಧ್ಯವಾಗಿರುತ್ತದೆ. ಸ್ಥಳಾಂತರವಾದರೆ, ಜಾನುವಾರುಗಳಿಗೆ ಕೊಟ್ಟಿಗೆ ಹೊಂದಿಸುವುದು ಹೇಗೆ? ದೇವರಿಗೆ ಏರಿಸಲು ಹೂ ಬೆಳೆಸುವುದೆಲ್ಲಿ? ಊಟಕ್ಕೆ ತರಕಾರಿಯನ್ನೂ, ಪೂಜೆಗೆ ಹೂವನ್ನು ಕೊಂಡು ತರುವುದಾದರೆ ಅಷ್ಟು ಆದಾಯ ತರುವುದು ಎಲ್ಲಿಂದ? ಜಮೀನು ಸಹ ದೂರ. ಇಂಥ ಸಮಸ್ಯೆಗಳಿಂದಾಗಿ ಹಲವು ಗ್ರಾಮಸ್ಥರು ಹಳೆಯ ವಸ್ತಿಯಿಂದ ಸ್ಥಳಾಂತರ ಆಗುವುದೇ ಇಲ್ಲ.

ಹೀಗೆ ಸ್ಥಳಾಂತರವಾಗದವರಿಗೆ ಸರ್ಕಾರದಿಂದ ಯಾವ ಸೌಲಭ್ಯವೂ ಸಿಗುವುದಿಲ್ಲ.

ವಿಟ್ಲಪಿಂಡಿ ಉತ್ಸವ

ಉಡುಪಿಯ ಕೃಷ್ಣಮಠದಲ್ಲಿ ಶನಿವಾರ ವಿಟ್ಲಪಿಂಡಿ ಉತ್ಸವದಲ್ಲಿ ನಡೆದ ಸುವರ್ಣ ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತಸಾಗರ

ಪ್ರಜಾವಾಣಿ ಚಿತ್ರ/ಉಮೇಶ್ ಮಾರ್ಪಳ್ಳಿ

ನಾರಾಯಣ ಗುರು ಹೆಸರಿನಲ್ಲಿ ನಾಲ್ಕು ಶಾಲೆ: ಸಿ.ಎಂ

ಹಿಂದುಳಿದ ವರ್ಗದ ಹಾಸ್ಟೆಲ್‌ಗಳಿಗೆ ₹ 250 ಕೋಟಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ₹ 250 ಕೋಟಿ ಮಂಜೂರು ಮಾಡಲು ಮತ್ತು ನಾರಾಯಣ ಗುರು ಹೆಸರಿನಲ್ಲಿ ತಲಾ ₹ 30 ಕೋಟಿ ವೆಚ್ಚದಲ್ಲಿ ನಾಲ್ಕು ಶಾಲೆಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ನಡೆದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 107ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಂಗಳೂರಿನ ಡಾ. ಅಣ್ಣಯ್ಯ ಕುಲಾಲ್ ಅವರಿಗೆ ಡಿ. ದೇವರಾಜ ಅರಸು ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ‘ರಾಜ್ಯದ ಎಲ್ಲ 2,439 ವಿದ್ಯಾ-ರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಾಮ-ರ್ಥ್ಯವನ್ನು ಶೇ 25ರಷ್ಟು ಹೆಚ್ಚಿಸಲು ಈ ಅನುದಾನ ಒದಗಿಸಲಾಗಿದೆ’ ಎಂದರು.

‘ಹಿಂದುಳಿದ ವಿದ್ಯಾರ್ಥಿಗಳ ಶಿಷ್ಯ-ವೇತನದಲ್ಲಿ ತಲಾ ₹ 150 ಹೆಚ್ಚಿಸಲಾಗಿದೆ. 195 ವಿದ್ಯಾರ್ಥಿನಿಲಯ-ಗಳ ಕಟ್ಟಡ ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಕನಕದಾಸರ ಹೆಸರಿನಲ್ಲಿ 50 ಹೊಸ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದೆ. ರಾಜ್ಯದ ಐದು ಶೈಕ್ಷಣಿಕ ಕೇಂದ್ರಗಳಲ್ಲಿ 1,000 ಮಕ್ಕಳಿಗೆ ಬಹುಮಹಡಿ ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ. 5 ಸಾವಿರ ಮಕ್ಕಳ ಸಾಮರ್ಥ್ಯಕ್ಕೆ ಪೂರಕವಾಗಿ ಈ ಯೋಜನೆಯನ್ನು ವಿಸ್ತರಿಸುವ ಗುರಿ ಹೊಂದಲಾಗಿದ್ದು, ಅಗತ್ಯ ಅನುದಾನ ಒದಗಿಸಲಾಗಿದೆ. ದೇವರಾಜ ಅರಸು ಅವರ ಹೆಸರಿನಲ್ಲಿ ಪಿಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಒಟ್ಟು ₹ 4 ಕೋಟಿ, ವಿದೇಶದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಶಿಷ್ಯ ವೇತನಕ್ಕೆ ₹ 10 ಕೋಟಿ, ಹಿಂದುಳಿದ ವರ್ಗದ ವಿವಿಧ ನಿಗಮ ಮಂಡಳಿಗೆ ಹೆಚ್ಚುವರಿಯಾಗಿ ಸುಮಾರು ₹ 800 ಕೋಟಿ ಅನುದಾನ ನೀಡಲಾಗಿದೆ’ ಎಂದು ತಿಳಿಸಿದರು.

‘ಶಿಕ್ಷಣ, ಉದ್ಯೋಗ ಮತ್ತು ಸಬಲೀ-ಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪ್ರತಿ ಗ್ರಾಮದಲ್ಲಿ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಸಂಘ ಸ್ಥಾಪಿಸಿ ₹ 10 ಲಕ್ಷ ಅನುದಾನ, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸ-ಲಾಗುವುದು. ಸ್ತ್ರೀ ಶಕ್ತಿ ಸಂಘಗಳಿಗೆ ಆರ್ಥಿಕ ಸೌಲಭ್ಯ, ಬ್ಯಾಂಕ್ ಜೋಡಣೆ, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ 5 ಲಕ್ಷ ಮಹಿಳೆಯರಿಗೆ ಅನುಕೂಲ ಕಲ್ಪಿಸಲಾ-ಗುತ್ತಿದೆ. ದೇವರಾಜ ಅರಸು ಅವರ ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಸಾಕಾರಗೊಳಿಸಲು ಸರ್ಕಾರ ಬದ್ಧ’ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ‘ದೇವರಾಜ ಅರಸು ಹೇಗೆ ಆಡಳಿತಾತ್ಮಕ ಶಕ್ತಿ ಕೊಟ್ಟರೋ ಅದೇ ರೀತಿ ನಮ್ಮ ಮುಖ್ಯಮಂತ್ರಿ ಕೂಡಾ ಹಿಂದುಳಿದ ವರ್ಗಗಳಿಗೆ ಶಕ್ತಿ ತುಂಬುವ ವಿಶ್ವಾಸ ಇದೆ’ ಎಂದರು.

‘ಅರಸು ಅವರು ಭೂಸುಧಾರಣೆ ಕಾಯ್ದೆ ತಂದಾಗ ವರ್ಗ ಸಂಘರ್ಷ ಆಗಿತ್ತು. ಆ ಕಾಯ್ದೆ ಮೂಲಕ ಹಿಂದುಳಿದ, ಶೋಷಿತ ವರ್ಗಗಳಿಗೆ ಅವರು ಶಕ್ತಿ ತುಂಬಿದ್ದಾರೆ’ ಎಂದ ಅವರು, ‘ಹಿಂದುಳಿದ ವರ್ಗಗಳ ಇಲಾಖೆಯಿಂದ ಉತ್ತರ ಕರ್ನಾಟಕ, ಮಂಗಳೂರು ಭಾಗದಲ್ಲಿ ಸೇನಾ ಪೂರ್ವ ತರಬೇತಿ ಶಾಲೆ ಆರಂಭಿಸಲಾಗುತ್ತಿದೆ’ ಎಂದರು.

ಚಿತ್ರ 3B

ಬಿಬಿಎಂಪಿ ಚುನಾವಣೆ: 25ಕ್ಕೆ ಕರಡು ಪಟ್ಟಿ

ಬೆಂಗಳೂರು: ಬಿಬಿಎಂಪಿ ಚುನಾವಣೆ ಸಂಬಂಧ ಆಗಸ್ಟ್ 25ರಂದು ಮತದಾರರ ಕರಡು ಪಟ್ಟಿ ಪ್ರಕಟವಾಗ-ಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ರಾಜ್ಯ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದರು.

ಆಯೋಗದ ಆಯುಕ್ತ ಬಿ.ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಕರಡು ಪ್ರಕಟಗೊಂಡ ಕೂಡಲೇ ಪಾಲಿಕೆಯ ಅಂತರ್ಜಾಲ-ದಲ್ಲಿ ಪ್ರಕಟಿಸಬೇಕು. ನೋಂದಾಯಿತ ರಾಜಕೀಯ ಪಕ್ಷಗಳ ಕಚೇರಿಗಳು ಹಾಗೂ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಿಗೆ ಪ್ರತಿಗಳನ್ನು ನೀಡಬೇಕು ಎಂದು ಅವರು ಸೂಚಿಸಿದರು.

ವಾರ್ಡ್‌ಗಳ ಸಂಖ್ಯೆ 198ರಿಂದ 243ಕ್ಕೆ ಏರಿಕೆ ಆಗಿರುವುದರಿಂದ ಮತಗಟ್ಟೆಗಳ ಪರಿಶೀಲನೆ ಆಗಬೇಕಿದೆ. ವಾರ್ಡ್ ಉಸ್ತುವಾರಿ ಅಧಿಕಾರಿಗಳನ್ನು ಗುರುತಿಸಿ ಪಟ್ಟಿ ಸಿದ್ಧಗೊಳಿಸಬೇಕು ಎಂದು ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಾಜಧಾನಿಯಲ್ಲಿ ಮತದಾನದ ಪ್ರಮಾಣ ಕಡಿಮೆ ಇರುತ್ತದೆ. ಈ ಪ್ರಮಾಣ ಹೆಚ್ಚಿಸಲು ವ್ಯಾಪಕ ಪ್ರಚಾರ ಚಟುವಟಿಕೆ ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು. ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ ಹೊನ್ನಾಂಬಾ ಇದ್ದರು.

ಗುಜರಾತ್ ವಿಧಾನಸಭೆ, 2024ರ ಲೋಕಸಭಾ ಚುನಾವಣೆ ಮೇಲೆ ಕಣ್ಣು

ಅಬಕಾರಿ ನೀತಿ: ಎಎಪಿ–ಬಿಜೆಪಿ ಕಿತ್ತಾಟ

ದೆಹಲಿ ಸರ್ಕಾರದ ‘ಅಬಕಾರಿ ನೀತಿ’ ಜಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಬಿಜೆಪಿ ಹಾಗೂ ಎಎಪಿ ನಾಯಕರ ನಡುವೆ ವಾಕ್ಸಮರ ನಡೆದಿದೆ. ಸಿಸೋಡಿಯಾ ಅವರನ್ನು ಮೊದಲ ಆರೋಪಿ ಎಂದು ಹೆಸರಿಸಿದ್ದರೂ ಕೇಜ್ರಿವಾಲ್ ಅವರೇ ಪ್ರಕರಣದ ಸೂತ್ರಧಾರ ಎಂದು ಬಿಜೆಪಿ ಆರೋಪಿಸಿದೆ. ಕೇಜ್ರಿವಾಲ್ ಬಗ್ಗೆ ಇರುವ ಭೀತಿಯಿಂದಾಗಿ ಬಿಜೆಪಿಯು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಬೆದರಿಸುವ ಯತ್ನ ಮಾಡುತ್ತಿದೆ ಎಂದು ಎಎಪಿ ಹೇಳಿದೆ

‘ಮೋದಿಗೆ ಕೇಜ್ರಿವಾಲ್ ಎದುರಾಳಿ’



ನವದೆಹಲಿ (ಪಿಟಿಐ): ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ನೇರ ಎದುರಾಳಿ ಆಗಲಿದ್ದಾರೆ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಶನಿವಾರ ಹೇಳಿದ್ದಾರೆ. ತಮ್ಮ ವಿರುದ್ಧ ಸಿಬಿಐ ಕ್ರಮ ತೆಗೆದುಕೊಂಡ ಮರುದಿನ ಈ ಹೇಳಿಕೆ ನೀಡಿರುವ ಸಿಸೋಡಿಯಾ, ಕೇಜ್ರಿವಾಲ್ ಅವರ ಬಗ್ಗೆ ಇರುವ ಭಯದಿಂದ ಕೇಂದ್ರ ಸರ್ಕಾರವು ಅವರನ್ನು ನಿಯಂತ್ರಿಸುವ ಎಲ್ಲಾ ಯತ್ನಗಳನ್ನು ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

‘ದೆಹಲಿ ಅಬಕಾರಿ ನೀತಿ’ಯನ್ನು ಸಂಪೂರ್ಣ ಪಾರದರ್ಶಕವಾಗಿ ಜಾರಿ ಮಾಡಲಾಗಿದ್ದು, ಯಾವುದೇ ಹಗರಣ ನಡೆದಿಲ್ಲ ಎಂದು ಸಿಸೋಡಿಯಾ ಸ್ಪಷ್ಟಪಡಿಸಿದ್ದಾರೆ.

6ನೇ ಪುಟ ನೋಡಿ

‘ಹಗರಣದ ಸೂತ್ರಧಾರ ಕೇಜ್ರಿವಾಲ್’

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ‘ಅಬಕಾರಿ ಹಗರಣ’ದ ಮುಖ್ಯ ಸೂತ್ರಧಾರ ಎಂದು ಬಿಜೆಪಿ ಶನಿವಾರ ಆರೋಪಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್, ತನ್ನ ನೈಜ ಮುಖ ಬಹಿರಂಗವಾಗಿದ್ದು, ಗಮನವನ್ನು ಬೇರೆಡೆ ಸೆಳೆಯಲು ಎಎಪಿ ಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಎಎಪಿ ರಾಜಕೀಯ ಬೆಳವಣಿಗೆ ಸಹಿಸದ ಬಿಜೆಪಿ, ಪಕ್ಷಕ್ಕೆ ನಿಯಂತ್ರಣ ಹೇರಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿರುವ ಆಮ್ ಆದ್ಮಿ ಪಕ್ಷಕ್ಕೆ ಠಾಕೂರ್ ತಿರುಗೇಟು ನೀಡಿದ್ದಾರೆ. ಎಎಪಿಯು ಹಲವು ಚುನಾವಣೆಗಳಲ್ಲಿ ಗೆಲ್ಲುವುದಾಗಿ ಹೇಳಿಕೊಂಡಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರ ಎದುರು ನಿಲ್ಲಲು ಆಗಿಲ್ಲ ಎಂದಿದ್ದಾರೆ.

6ನೇ ಪುಟ ನೋಡಿ

ಮುಂಬೈನಲ್ಲಿ ದಾಳಿ ಬೆದರಿಕೆ: ಒಬ್ಬನ ಬಂಧನ

ಮುಂಬೈ (ಪಿಟಿಐ): ನಗರದಲ್ಲಿ 26/11 ಮಾದರಿಯಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ. ಆರು ಮಂದಿಯ ತಂಡ ಈ ಕಾರ್ಯಕ್ಕೆ ನಿಯೋಜನೆಗೊಂಡಿದೆ ಎಂಬ ಬೆದರಿಕೆ ಸಂದೇಶಗಳನ್ನು ಮುಂಬೈ ಸಂಚಾರ ಪೊಲೀಸರ ಸಹಾಯವಾಣಿ ಸಂಖ್ಯೆಗೆ (ವಾಟ್ಸ್‌ಆ್ಯಪ್) ರವಾನಿಸಲಾಗಿದ್ದು, ಈ ಸಂಬಂಧ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ನಗರದ ವಿರಾರ್ ಪ್ರದೇಶದ ಬಳಿ ವ್ಯಕ್ತಿಯನ್ನು ಬಂಧಿಸಲಾಗಿದೆ. ಅಪರಾಧ ವಿಭಾಗದ ಸಿಬ್ಬಂದಿ ಆತನ ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಪಾಕಿಸ್ತಾನದ ‘ಕೋಡ್’ ಹೊಂದಿರುವ ದೂರವಾಣಿ ಸಂಖ್ಯೆಯಿಂದ ಸಂದೇಶಗಳು ಬಂದಿವೆ’ ಎಂದು ನಗರ ಪೊಲೀಸ್ ಕಮಿಷನರ್ ವಿವೇಕ್ ಫಣ್ಸಲ್‌ಕರ್ ಶನಿವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶುಕ್ರವಾರ ರಾತ್ರಿ 11.45ರ ಸುಮಾರಿಗೆ ಸಹಾಯವಾಣಿ ಸಂಖ್ಯೆಗೆ ಸಂದೇಶಗಳು ಬಂದಿವೆ. ಅದರಲ್ಲಿ 26/11 ಮುಂಬೈ ದಾಳಿಯ ಸಂಚುಕೋರ ಉಗ್ರ ಅಜ್ಮಲ್ ಕಸಬ್ ಹಾಗೂ ಇತ್ತೀಚೆಗೆ ಹತ್ಯೆಯಾಗಿದ್ದ ಅಲ್ ಕೈದಾ ಉಗ್ರಗಾಮಿ ಸಂಘಟನೆಯ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿ ಹೆಸರು ಪ್ರಸ್ತಾಪಿಸಲಾಗಿದೆ. ಭಾರತದಲ್ಲಿ-ರುವ ತಮ್ಮ ಸಹವರ್ತಿಗಳು ಸ್ಫೋಟಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ಉಲ್ಲೇಖಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಕರಾವಳಿ ಕಾವಲುಪಡೆಯವರೊಂದಿಗೆ ನಮ್ಮ ಸಿಬ್ಬಂದಿ ನಿರಂತರ ಸಂಪರ್ಕದಲ್ಲಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ‘ಸಾಗರ್ ಕವಚ’ ಕಾರ್ಯಾಚರಣೆ ಆರಂಭಿಸಲಾಗಿದೆ. ಬೆದರಿಕೆ ಸಂದೇಶದ ವಿಚಾರವಾಗಿ ವರ್ಲಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 506 (2) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ವಿವರಿಸಿದ್ದಾರೆ.

ಸಂದೇಶಗಳು ಉರ್ದು ಬದಲು ಹಿಂದಿ ಭಾಷೆಯಲ್ಲಿವೆ. ಕಿಡಿಗೇಡಿಗಳು ನಕಲಿ ಐಪಿ ವಿಳಾಸ ಸೃಷ್ಟಿಸುವ ಮೂಲಕ ಸಂದೇಶವು ಪಾಕಿಸ್ತಾನದ ದೂರವಾಣಿ ಸಂಖ್ಯೆಯಿಂದ ಬಂದಿರುವ ಹಾಗೆ ಬಿಂಬಿಸಿರಬಹುದೇ ಎಂಬ ಮಾಧ್ಯಮದವರ ಪ್ರಶ್ನೆಗೆ, ‘ಈ ಕುರಿತು ಈಗಲೇ ಏನನ್ನೂ ಹೇಳಲು ಆಗುವುದಿಲ್ಲ. ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ. ಅದು ಪೂರ್ಣಗೊಂಡ ನಂತರ ಸತ್ಯ ಬಹಿರಂಗವಾಗ-ಲಿದೆ’ ಎಂದಿದ್ದಾರೆ.

ಪ್ರಜಾ ಮತ

ಶಾಂತವೇರಿಯ ಮಣ್ಣಿನೊಂದಿಗೆ ಜಾಥಾ 5

ಹಠಾತ್ ಪ್ರವಾಹ: 33 ಸಾವು 6

ರಶ್ದಿ ಮೇಲೆ ದಾಳಿ: ಪುಸ್ತಕ ಓದಿ ಒಗ್ಗಟ್ಟು ಪ್ರದರ್ಶನ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

52 ಜನರ ಫಲಿತಾಂಶಕ್ಕೆ ತಡೆ: ಅಭ್ಯರ್ಥಿಗಳಿಗೆ ನೋಟಿಸ್

ಶಿಕ್ಷಕರ ನೇಮಕ ಪರೀಕ್ಷೆಯಲ್ಲೂ ಅಕ್ರಮ?

• ರಶ್ಮಿ ಬೇಲೂರು

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಿಗೆ ಶಿಕ್ಷಕರ ನೇಮಕಾತಿಗಾಗಿ ಮೇ ತಿಂಗಳಲ್ಲಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ. ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇಲೆ 52 ಅಭ್ಯರ್ಥಿಗಳ ಫಲಿತಾಂಶ ತಡೆಹಿಡಿದಿರುವ ಸಾರ್ವಜನಿಕ ಶಿಕ್ಷಣ ಇಲಾಖೆ, ಅವರ ವಿರುದ್ಧ ತನಿಖೆ ಆರಂಭಿಸಿದೆ.

ಕೈಬರಹದಲ್ಲಿ ವ್ಯತ್ಯಾಸ, ಬಳಸಲಾದ ಶಾಯಿಯಲ್ಲಿನ ವ್ಯತ್ಯಾಸ, ಒಎಂಆರ್ ಶೀಟ್‌ನಲ್ಲಿ ವೈಟ್‌ನರ್ ಬಳಸಿ ಉತ್ತರಗಳನ್ನು ತಿದ್ದಿರುವುದು ಮೌಲ್ಯಮಾಪನದ ವೇಳೆ ಕಂಡುಬಂದಿದೆ. ಅಂತಹ ಅಭ್ಯ-ರ್ಥಿಗಳಿಗೆ ನೋಟಿಸ್ ಜಾರಿಗೊಳಿಸಿದ್ದು, ಉತ್ತರ ನೀಡುವಂತೆ ಸೂಚಿಸಲಾಗಿದೆ. ತಮ್ಮನ್ನು ಪರೀಕ್ಷೆಯಲ್ಲಿ ಉತ್ತೀರ್ಣ-ಗೊಳಿಸುವಂತೆ ಕೆಲವು ಅಭ್ಯರ್ಥಿಗಳು ಉತ್ತರ ಪತ್ರಿಕೆಯಲ್ಲೇ ಕೋರಿರುವುದೂ ಕಂಡುಬಂದಿದೆ.

ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ 15,000 ಶಿಕ್ಷಕರ ಹುದ್ದೆಗಳ ಭರ್ತಿಗಾಗಿ ಮೇ ತಿಂಗಳಲ್ಲಿ ಸಿಇಟಿ ನಡೆಸಲಾಗಿತ್ತು. 1.16 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಇತ್ತೀಚೆಗಷ್ಟೆ ಫಲಿತಾಂಶ ಪ್ರಕಟವಾಗಿದ್ದು, 52,432 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ.

‘ಒಎಂಆರ್ ಶೀಟ್‌ಗಳನ್ನು ಮೌಲ್ಯ-ಮಾಪನಕ್ಕೆ ಕಳಿಸುವ ಮುನ್ನ ಸ್ಕ್ಯಾನ್ ಮಾಡಲಾಗಿದೆ. ಕೈ ಬರಹದಲ್ಲಿ ವ್ಯತ್ಯಾಸ ಇರುವುದು, ಶಾಯಿಯಲ್ಲಿ ಬದಲಾವಣೆ ಮತ್ತು ವೈಟ್‌ನರ್ ಬಳಸಿ ಉತ್ತರ ಪತ್ರಿಕೆ ತಿದ್ದಿರುವುದು ಸ್ಕ್ಯಾನಿಂಗ್ ವೇಳೆ ಪತ್ತೆಯಾಗಿದೆ’ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ-ಯೊಬ್ಬರು ತಿಳಿಸಿದರು.

ಕೆಲವು ಅಭ್ಯರ್ಥಿಗಳು ನೋಟಿಸ್‌ಗೆ ಉತ್ತರ ನೀಡಿದ್ದಾರೆ. ಅವರು ನೀಡಿರುವ ಉತ್ತರದಲ್ಲಿ ಸತ್ಯಾಂಶವಿದೆ ಎಂದು ಮನವರಿಕೆಯಾದಲ್ಲಿ ಅಂತಹವರನ್ನು ವಿಚಾರಣೆಗೆ ಕರೆಸಲಾಗುವುದು. ಕೈಬರಹದಲ್ಲಿನ ವ್ಯತ್ಯಾಸ ಮತ್ತಿತರ ಅಂಶಗಳ ಕುರಿತು ಪರಿಶೀಲಿಸಲು ಅಂತಹ ಅಭ್ಯರ್ಥಿಗಳನ್ನು ಕರೆಸಿ, ಪರೀಕ್ಷೆ ಬರೆಸಲಾಗುವುದು ಎಂದು ಹೇಳಿದರು.

52 ಅಭ್ಯರ್ಥಿಗಳು ಪರೀಕ್ಷೆ ಬರೆದಿರುವ ಎಲ್ಲ ಪರೀಕ್ಷಾ ಕೇಂದ್ರಗಳ ಸಿಸಿಟಿವಿ ದೃಶ್ಯಾವಳಿಯ ರೆಕಾರ್ಡಿಂಗ್ ಅನ್ನು ಇಲಾಖೆ ವಶಕ್ಕೆ ಪಡೆದಿದೆ. ಅವುಗಳ ಪರಿಶೀಲನೆ ನಡೆಯುತ್ತಿದೆ. ಯಾವುದೇ ಅಭ್ಯರ್ಥಿ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವುದು ದೃಢಪಟ್ಟರೆ ಅಂತಹವರನ್ನು ಶಾಶ್ವತವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಅನರ್ಹಗೊಳಿಸಲು ಇಲಾಖೆ ಮುಂದಾಗಿದೆ.

‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮ ಬಹಿರಂಗವಾದ ಬಳಿಕ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಕಟ್ಟೆಚ್ಚರ ವಹಿಸಲಾಗಿತ್ತು. ಅನ್ಯ ಇಲಾಖೆಗಳ ಅಧಿಕಾರಿಗಳನ್ನೂ ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು’ ಎಂದು ಇಲಾಖೆಯ ಮೂಲಗಳು ಹೇಳಿವೆ.

15,000 ಶಿಕ್ಷಕರ ಹುದ್ದೆಗಳ ಪೈಕಿ ಸುಮಾರು 3,000 ಹುದ್ದೆಗಳು ಭರ್ತಿಯಾಗದೇ ಉಳಿಯಬಹುದು ಎಂದು ಅಂದಾಜಿಸಲಾಗಿದೆ. ಈ ಹುದ್ದೆಗಳ ಭರ್ತಿಗೆ 2023ರ ಫೆಬ್ರುವರಿ-ಯಲ್ಲಿ ಮತ್ತೆ ಸಿಇಟಿ ನಡೆಸಲು ಇಲಾಖೆ ಸಿದ್ಧತೆ ಆರಂಭಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/51/2022 ದಿನಾಂಕ : 14-07-2022ಕ್ಕೆ ತಿದ್ದುಪಡಿ

ಮೇಲೆ ತಿಳಿಸಿದ ಟೆಂಡರ್ ಪ್ರಕಟಣೆ ಸಂಖ್ಯೆಗೆ ಸಂಬಂಧಿಸಿದಂತೆ (ಕ್ರಸಂ. 3ಕ್ಕಾಗಿ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು 29-08-2022 ರಿಂದ 12-09-2022 ರಂದು 15:00 ಗಂಟೆಗಳವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ಕಾಮಗಾರಿಗಳು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/305/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/ಇಪಿಸಿ/34/2022 ದಿನಾಂಕ : 17-06-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ ವಿಧಾನದಲ್ಲಿ ಯಶವಂತಪುರ ರೈಲ್ವೆ ನಿಲ್ದಾಣದ ಬೃಹತ್ ಉನ್ನತೀಕರಣದ ಅಭಿವೃದ್ಧಿ ಪ್ರಸ್ತಾವನೆಗಾಗಿ ಮನವಿ. (ಟೆಂಡರ್ ಉಲ್ಲೇಖ ಸಂ. ವೈಪಿಆರ್-ಎಸ್‌ಟಿಎನ್-ಮರುಅಭಿವೃದ್ಧಿ-ಇಪಿಸಿ)	ರೂ. 329.00 ಕೋಟಿ
2	ಮೈಸೂರು ವಿಭಾಗದಲ್ಲಿನ ಕೋಟೆಗಂಗೂರಿನಲ್ಲಿ ಸಿವಿಲ್, ಎಲೆಕ್ಟ್ರಿಕಲ್ ಒಳಗೊಂಡಂತೆ ಕೋಚಿಂಗ್ ಡಿಪೋದ ಅಭಿವೃದ್ಧಿ ಹಾಗೂ ಶಿವಮೊಗ್ಗ - ತಾಳಗುಪ್ಪ ಸೆಕ್ಷನ್‌ನಲ್ಲಿ ಚೈನೇಜ್ 69170 ಮತ್ತು ಚೈನೇಜ್ 71620 ನಡುವೆ ಸಿಗ್ನಲ್ ಮತ್ತು ಟೆಲಿಕಾಂ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂ. ಕೆಜಿಹೆಚ್-ಡಿಪೋ-ಎಂವೈಎಸ್-ಇಪಿಸಿ)	ರೂ. 105.40 ಕೋಟಿ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : ಕ್ರ.ಸಂ.1ಕ್ಕೆ 05-09-2022 ಮತ್ತು ಕ್ರ.ಸಂ.2ಕ್ಕೆ 15-09-2022 ರಂದು 15:00 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ಕಾಮಗಾರಿಗಳು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/306/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

‘ಸಿದ್ದರಾಮಯ್ಯಗೆ ತಪ್ಪಿನ ಅರಿವಾಗಿದೆ’

ದಾವಣಗೆರೆ: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಈಗ ತಪ್ಪಿನ ಅರಿವಾಗಿದೆ’ ಎಂದು ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ, ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

‘ಸಿದ್ದರಾಮಯ್ಯ ಪಶ್ಚಾತ್ತಾಪ ಪಟ್ಟಿದ್ದಾರೆ. ಮತ್ತೊಮ್ಮೆ ಧರ್ಮ ಒಡೆಯುವ ಪ್ರಯತ್ನಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಅವರಿಗೆ ಒಳ್ಳೆಯ ಬುದ್ಧಿ ಬಂದಿದೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಜಯಲಲಿತಾಗೆ ಚಿಕಿತ್ಸೆ ಲೋಪ ಆಗಿಲ್ಲ’

ಚೆನ್ನೈ: ತಮಿಳುನಾಡು ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರು ಕಡೆಯ ದಿನಗಳಲ್ಲಿ ಆಸ್ಪತ್ರೆಯಲ್ಲಿ ಇದ್ದಾಗ ಅವರಿಗೆ ಚಿಕಿತ್ಸೆ ನೀಡುವಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಏಮ್ಸ್‌ನ ಪರಿಣತರ ತಂಡ ಹೇಳಿದೆ.

ಜಯಲಲಿತಾ ಅವರಿಗೆ ವೈದ್ಯಕೀಯ ಕ್ರಮದ ಅನುಸಾರವೇ ಚಿಕಿತ್ಸೆ ನೀಡಲಾಗಿತ್ತು ಎಂದು ಸುಪ್ರೀಂಕೋರ್ಟ್ ನಿರ್ದೇಶನದಂತೆ ರಚನೆಯಾಗಿದ್ದ ತಂಡ ತೀರ್ಮಾನಿಸಿದೆ.

‘ನ್ಯಾಯಾಂಗ ಸೇವೆ: ಅವಕಾಶಗಳು–ಸವಾಲುಗಳು’ ವಿಚಾರ ಸಂಕಿರಣ

4 ಕೋಟಿ ವ್ಯಾಜ್ಯ ಇತ್ಯರ್ಥಕ್ಕೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಕಾನೂನು ಪದವೀಧರರಿಗೆ ಹೆಚ್ಚಿನ ಅವಕಾಶಗಳು ಲಭ್ಯವಿದ್ದು, ಕಾನೂನು ಕಾಲೇಜುಗಳಲ್ಲಿ ವೃತ್ತಿಗೆ ಬೇಕಾದ ಸೌಲಭ್ಯಗಳೂ ಸಿಗುತ್ತಿವೆ’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ತಿಳಿಸಿದರು.

ನಗರದ ಕೆಎಲ್‌ಇ ಸೊಸೈಟಿ ಕಾನೂನು ಕಾಲೇಜು ಹಾಗೂ ಸಮುತ್ಕರ್ಷ ಟ್ರಸ್ಟ್ ಶನಿವಾರ ಆಯೋಜಿಸಿದ್ದ ‘ನ್ಯಾಯಾಂಗ ಸೇವೆಗಳು: ಅವಕಾಶಗಳು ಮತ್ತು ಸವಾಲುಗಳು’ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

‘ಹಿಂದೆ ಹೆಚ್ಚುವರಿ ಪದವಿಗಾಗಿ ಕಾನೂನು ಪದವಿಗೆ ಸೇರ್ಪಡೆಗೊಳ್ಳುತ್ತಿದ್ದರು. ಈಗ ನ್ಯಾಯಾಂಗ ಕ್ಷೇತ್ರದ ಕೆಲಸ ಮಾಡಬೇಕೆಂಬ ಇಚ್ಛೆಯುಳ್ಳವರು ಮಾತ್ರ 5 ವರ್ಷದ ಪದವಿಗೆ ಸೇರುತ್ತಿದ್ದಾರೆ. ಇಂದಿನ ಕಾನೂನು ಕಾಲೇಜುಗಳಲ್ಲಿ ಕೋರ್ಟ್‌ಗಿಂತಲೂ ಹೆಚ್ಚಿನ ಸೌಲಭ್ಯಗಳಿವೆ. ಉತ್ತಮ ಉಪನ್ಯಾಸಕರು ಇದ್ದಾರೆ’ ಎಂದರು.



ವಿಚಾರ ಸಂಕಿರಣದಲ್ಲಿ ಸುಪ್ರೀಂಕೋರ್ಟ್ ನ್ಯಾ. ಅಭಯ್ ಶ್ರೀನಿವಾಸ್ ಓಕಾ (ಎಡದಿಂದ ಮೂರನೆಯವರು) ಕೆಎಲ್‌ಇ ಸೊಸೈಟಿಯ ಕಾನೂನು ಕಾಲೇಜು ಹೊರತಂದಿರುವ ಕಾನೂನು ಕೈಪಿಡಿ ಬಿಡುಗಡೆ ಮಾಡಿದರು. (ಎಡದಿಂದ) ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ಹೈಕೋರ್ಟ್ ನ್ಯಾ.ಬಿ.ವೀರಪ್ಪ, ಕರ್ನಾಟಕ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾ. ಅಲೋಕ್ ಅರಾಧೆ, ಹೈಕೋರ್ಟ್ ನ್ಯಾ. ಪಿ.ಎಸ್.ದಿನೇಶ್‌ಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮಾತನಾಡಿ, ‘ರಾಷ್ಟ್ರದಲ್ಲಿ 75 ವರ್ಷಗಳಷ್ಟು ಹಳೇ ಪ್ರಕರಣಗಳೂ ಇತ್ಯರ್ಥಕ್ಕೆ ಬಾಕಿಯಿವೆ. ಪ್ರಕರಣ ದಾಖಲಾಗಿ 30ರಿಂದ 40 ವರ್ಷಗಳಾದ ನಂತರ ತೀರ್ಪು ಪ್ರಕಟವಾಗಿ ಆರೋಪಿ ದೋಷಮುಕ್ತನಾದರೆ ಆತನ ಅಮೂಲ್ಯ ಸಮಯ ಹಾಳಾದಂತೆ ಅಲ್ಲವೇ’ ಎಂದರು.

ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಮಾತನಾಡಿ, ‘ನ್ಯಾಯದಾನದಲ್ಲಿ ತಾರತಮ್ಯ, ಜಾತೀಯತೆ, ಧರ್ಮದ ವಿಚಾರಗಳು ನುಸುಳಬಾರದು. ಸತ್ಯ ಹಾಗೂ ಸಕಾಲಿಕವಾಗಿ ತೀರ್ಪುಗಳು ಬರಬೇಕು’ ಎಂದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಮಾತನಾಡಿ, ‘ಜನಸಂಖ್ಯೆಗೆ ತಕ್ಕಂತೆ ನ್ಯಾಯಾಧೀಶರ ನೇಮಕ ಆಗುತ್ತಿಲ್ಲ. ಇದರಿಂದ ನ್ಯಾಯಾಲಯಗಳಲ್ಲಿ ತೀರ್ಪು ಬರುವುದು ತಡವಾಗುತ್ತಿದೆ. ದೇಶದಲ್ಲಿ 4.7 ಕೋಟಿ ಪ್ರಕರಣಗಳು ಬಾಕಿಯಿವೆ. 25,628 ನ್ಯಾಯಾಧೀಶರ ಮಂಜೂರಾತಿ ಹುದ್ದೆಗಳಿವೆ. ಪ್ರಸ್ತುತ 20,174 ನ್ಯಾಯಾಧೀಶರು ಕರ್ತವ್ಯ ನಿರ್ವಹಿಸುತ್ತಿದ್ದು, 2019ರ ವೇಳೆಗೆ 35,155 ಸಾವಿರಕ್ಕೆ ಏರಿಕೆ ಆಗಬೇಕಿತ್ತು. ಅದು ಸಾಧ್ಯವಾಗಿಲ್ಲ. 2040ರ ವೇಳೆಗೆ 75,595 ಸಾವಿರ ನ್ಯಾಯಾಧೀಶರ ಅವಶ್ಯಕತೆ ಇದೆ. ಪ್ರತಿವರ್ಷ 2,075 ಮಂದಿ ನೇಮಕಗೊಳ್ಳಬೇಕಿದೆ’ ಎಂದರು.

ಹೈಕೋರ್ಟ್ ಮುಖ್ಯ ನ್ಯಾ. ಅಲೋಕ್ ಅರಾಧೆ ಅವರು ಕಾನೂನು ಕೈಪಿಡಿ ಬಿಡುಗಡೆ ಮಾಡಿದರು. ಪ್ರಾಂಶುಪಾಲ ಡಾ.ಜೆ.ಎಂ.ಮಲ್ಲಿಕಾರ್ಜುನಯ್ಯ, ಸಮುತ್ಕರ್ಷ ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ಶ್ರೀಧರ್ ಪ್ರಭು ಹಾಜರಿದ್ದರು.

ಸುದ್ದಿ 2 ನಿಮಿಷ

ಕಂದಾಯಕ್ಕೆ ಕಪಿಲ್, ಪಿಡಬ್ಲ್ಯುಡಿಗೆ ಸೆಲ್ವಕುಮಾರ್ ವರ್ಗಾವಣೆ

ಬೆಂಗಳೂರು: ಏಳು ಜನ ಐಎಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದ್ದು, ಕಪಿಲ್ ಮೋಹನ್‌ಗೆ ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹಾಗೂ ಎಸ್. ಸೆಲ್ವಕುಮಾರ್‌ಗೆ ಲೋಕೋಪಯೋಗಿ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ.

ಕಪಿಲ್ ಮೋಹನ್ ಅವರು ಈ ಹಿಂದೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಜವಾಬ್ದಾರಿ ಹೊಂದಿದ್ದರು. ಸೆಲ್ವಕುಮಾರ್ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಜವಾಬ್ದಾರಿ ಜತೆಗೆ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಹೆಚ್ಚುವರಿ ಹೊಣೆ ಹೊಂದಿದ್ದರು. ಹೆಚ್ಚುವರಿ ಹೊಣೆಯನ್ನು ಮುಂದುವರಿಸಲಾಗಿದೆ.

ಎಸ್.ಆರ್. ಉಮಾಶಂಕರ್–ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ. ವಿ. ಪೊನ್ನುರಾಜ್–ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ. ಆರ್. ಗಿರೀಶ್–ಸಿಇಒ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ. ಎನ್. ಶಿವಶಂಕರ್–ನಿರ್ದೇಶಕ, ಪೌರಾಡಳಿತ ನಿರ್ದೇಶನಾಲಯ. ಎಂ.ಎಸ್. ಅರ್ಚನಾ–ಜಿಲ್ಲಾಧಿಕಾರಿ, ಹಾಸನ.

ಇಂದು ‘ಅಯೋಧ್ಯಾ ಕಾಂಡ’ ನಾಟಕ ಪ್ರದರ್ಶನ

ಬೆಂಗಳೂರು: ನವೋದಯ ಪ್ರಸ್ತುತ ಪಡಿಸುತ್ತಿರುವ ಪ್ರಸನ್ನ ನಿರ್ದೇಶನದ ‘ಅಯೋಧ್ಯಾ ಕಾಂಡ’ ನಾಟಕ ಆಗಸ್ಟ್ 21ರ (ಭಾನುವಾರ) ಸಂಜೆ 6.30ಕ್ಕೆ ದೊಮ್ಮಲೂರಿನ ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಸಿ) ಪ್ರದರ್ಶನ ಕಾಣಲಿದೆ.

ಸುಂದರೇಶ್ ದೇವಪ್ರಿಯಂ ಮತ್ತು ಅನುಶ್ ಶೆಟ್ಟಿ ಅವರು ಸಂಗೀತ ಸಂಯೋಜಿಸಿದ್ದಾರೆ. ಕಲಾವಿದರಾದ ವಿಶ್ವಾಸ್ ಕೃಷ್ಣ, ಪ್ರಶಾಂತ್ ಹಿರೇಮಠ, ಪದ್ಮಶ್ರೀ, ರಾಜಲಕ್ಷ್ಮಿ ಅಭಿನಯಿಸಲಿದ್ದಾರೆ.

Venues in Bangalore

- **Kundalahalli Gate:** S K R Convention Hall, #68, Thubarahalli, Varthur Main Road - 560 066
- **Malleswaram:** The Canara Union, No.42, 8th Main, Canara Union Road - 560 003
- **Banashankari:** Sri Panchamukhi Kalyana Mantapa, 30th Main, 5th Cross, Devegowda Petrol Bunk, Opp. KIMs College, 3rd Stage - 560 085
- **Vijay Nagar:** Five O Gallery, No.50, 17th Cross, M.C. Road, Near Vijay Nagar Bus Stop - 560 040
- **Jayanagar:** Premchandra Kalyana Mahal, T.Mariyappa Road, 2nd Block, (Near Ashoka Pillar) - 560 011
- **Rajarajeswari Nagar:** Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- **Bannerghatta Road:** Santhome Parish Church Hall, Hulimavu, Near Meenakshi Mall - 560 076
- **Koramangala:** Apoorva International, #35A, Raheja Arcade, Opp Star Box - 560 095
- **Basavanagudi:** Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

‘ಕ್ಷೇಮವನ’ ಚಿಕಿತ್ಸಾ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮನುಷ್ಯ ಪ್ರಕೃತಿಯೊಂದಿಗಿನ ತನ್ನ ಸಂಬಂಧವನ್ನು ಕಳೆದುಕೊಳ್ಳುತ್ತಿದ್ದಾನೆ. ಆದ್ದರಿಂದ, ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ತಾಲ್ಲೂಕಿನ ಮಹದೇವಪುರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಶಿಕ್ಷಣ ಸಂಸ್ಥೆ ವತಿಯಿಂದ ನಿರ್ಮಿಸಿರುವ ‘ಕ್ಷೇಮವನ’ ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಶಸ್ತ್ರಚಿಕಿತ್ಸೆ, ಔಷಧಗಳಿಲ್ಲದೆ ಪೌಷ್ಟಿಕ ಆಹಾರ, ಯೋಗ, ಧ್ಯಾನದ ಮೂಲಕ ಚಿಕಿತ್ಸೆ ನೀಡಲಾಗುವುದು ಎಂದರು.

ಮುಖ್ಯ ಆರೋಗ್ಯ ಅಧಿಕಾರಿ ಡಾ.ನರೇಂದ್ರ ಶೆಟ್ಟಿ ಅವರು ಮಾತನಾಡಿ, ‘21 ಎಕರೆ ವಿಶಾಲ ವಾತಾವರಣದಲ್ಲಿ ವಸ್ತು ಸಂಗ್ರಹಾಲಯದಲ್ಲಿನ ನಿರುಪಯುಕ್ತ ವಸ್ತುಗಳು, ಪುರಾತನ ದೇವಸ್ಥಾನಗಳ ಪಳೆಯುಳಿಕೆಗಳನ್ನು ಬಳಸಿಕೊಂಡು, ಮನಸ್ಸಿಗೆ ಶಾಂತಿ ನೆಮ್ಮದಿ ನೀಡುವಂತಹ ಪ್ರಾಚೀನ ವಾಸ್ತು ವಿನ್ಯಾಸದಲ್ಲಿ ನಿರ್ಮಿಸಿದ್ದೇವೆ. ಆಮೆ, ನಂದಿ, ಗರುಡ ಸಂಕೇತಿಸುವ ವಿನ್ಯಾಸಗಳು ಸಮುದ್ರ, ಭೂಮಿ, ಆಕಾಶ ತತ್ವದಲ್ಲಿ ಸಂರಚಿತವಾಗಿವೆ. ಇದರಲ್ಲಿ ಈಜುಕೊಳ, ಹಿಮಾಲಯದ ಗುಹೆಗಳನ್ನು ಹೋಲುವ ಧ್ಯಾನಕೇಂದ್ರ, ಪಾರ್ಶ್ವವಾಯು ಆದವರಿಗೆ ನೀರಿನ ಚಿಕಿತ್ಸೆ, ಆಯಸ್ಕಾಂತ ಚಿಕಿತ್ಸೆ, ಉಸಿರಾಟದ ಚಿಕಿತ್ಸೆ... ಹೀಗೆ 25 ಬಗೆಯ ಚಿಕಿತ್ಸೆಗಳು ಲಭ್ಯ‘ ಎಂದು ಹೇಳಿದರು.

ಒಳಮುಖವಾಗಿರುವ ಆಮೆ ಪರಿಕಲ್ಪನೆಯ ಕಟ್ಟಡ.

ಉಪಾಧ್ಯಕ್ಷ ಡಿ.ಸುರೇಂದ್ರ ಕುಮಾರ್, ಕಾರ್ಯದರ್ಶಿ ಡಿ. ಹರ್ಷೇಂದ್ರಕುಮಾರ್, ನಿರ್ದೇಶಕ ಡಿ.ಶ್ರೇಯಸ್‌ಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕಿ ಶ್ರದ್ಧಾ ಅಮಿತ್, ಜನಜಾಗೃತಿ ವೇದಿಕೆ ಅಧ್ಯಕ್ಷ ವಿ.ರಾಮಸ್ವಾಮಿ ಮತ್ತಿತರರು ಇದ್ದರು.

ಶಾಲಾ ಆಸ್ತಿ ಸಂರಕ್ಷಣೆಗೆ ಡಿಕೆಶಿ ಆಗ್ರಹ

ಬೆಂಗಳೂರು: ಸರ್ಕಾರದ ಆಸ್ತಿ, ಶಾಲೆಗಳು ಉಳಿಯಬೇಕು. ಖಾಸಗಿ ಪಾಲಾಗಲು ಬಿಡಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒತ್ತಾಯಿಸಿದರು.

ಚಿಕ್ಕಪೇಟೆ ಸರ್ಕಾರಿ ಪ್ರೌಢಶಾಲೆಗೆ ಶನಿವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಸರ್ಕಾರದ ಆಸ್ತಿ ಸಂರಕ್ಷಣೆ ವಿರೋಧ ಪಕ್ಷಗಳ ಜವಾಬ್ದಾರಿಯೂ ಆಗಿದೆ. ಅಲ್ಲಿನ ವ್ಯಾಪಾರಿಗಳ ಸಮಸ್ಯೆಯನ್ನೂ ಆಲಿಸಿದ್ದೇನೆ. ಸರ್ಕಾರ ಆಯಾ ಕಾಲಗಳಿಗೆ ಅನುಗುಣವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿರುತ್ತದೆ. ಮೊದಲು ಶಾಲೆ ಜಾಗದ ದಾಖಲೆಗಳನ್ನು ಪರಿಶೀಲಿಸಬೇಕು. ಶಾಲಾ ಆಡಳಿತ, ವರ್ತಕರ ಜತೆ ಚರ್ಚೆ ನಡೆಸಿದ ಬಳಿಕ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಶಾಲೆಯ ಪರಿಶೀಲನೆ ಬಳಿಕ, ಸ್ಥಳೀಯ ಮುಖಂಡರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಅಲ್ಲಿನ ವರ್ತಕರಿಂದ ಮಾಹಿತಿ ಪಡೆದರು.

7,405 ಪ್ರಕರಣ: 57 ಮಂದಿಗೆ ಚಿಕಿತ್ಸೆ

ಬೆಂಗಳೂರು: ನಗರದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 7,405ಕ್ಕೆ ಏರಿಕೆಯಾಗಿದೆ. ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದಾಗಿ ಕೋವಿಡ್ ಪೀಡಿತರಲ್ಲಿ 57 ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಶನಿವಾರ 965 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಸೋಂಕಿತರಲ್ಲಿ ಹೊಸದಾಗಿ 549 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 18.57 ಲಕ್ಷ ಹಾಗೂ ಸೋಂಕಿತರಲ್ಲಿ ಚೇತರಿಸಿಕೊಂಡವರ ಒಟ್ಟು ಸಂಖ್ಯೆ 18.33 ಲಕ್ಷಕ್ಕೆ ತಲುಪಿದೆ.

ಈ ತಿಂಗಳ ಮೊದಲ ವಾರ ಆಸ್ಪತ್ರೆಗಳಿಗೆ ದಾಖಲಾದವರ ಸಂಖ್ಯೆ 70ಕ್ಕೆ ತಲುಪಿತ್ತು. ಆಗ ಸಕ್ರಿಯ ಪ್ರಕರಣಗಳ ಸಂಖ್ಯೆ 8 ಸಾವಿರದಷ್ಟಿತ್ತು. ಸೋಂಕಿತರಲ್ಲಿ 46 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾರೆ. 17 ಮಂದಿ ಐಸಿಯು ಹಾಗೂ ನಾಲ್ಕು ಮಂದಿ ಎಚ್‌ಡಿಯು ಹಾಸಿಗೆಯಲ್ಲಿ ಇದ್ದಾರೆ. ಉಳಿದವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ಅಧಿಕ ಸಕ್ರಿಯ ಪ್ರಕರಣ ಹೊಂದಿರುವ ಮಹಾನಗರಗಳಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ನವದೆಹಲಿ, ಮುಂಬೈ ನಂತರದ ಸ್ಥಾನಗಳಲ್ಲಿವೆ.

ಬೆಂಗಳೂರು ನಗರದ ಮಹಿಳೆಯರಿಗಾಗಿ ಒಂದು ವಿಶೇಷ ವೇದಿಕೆ

ತಮ್ಮ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು ನಿರೀಕ್ಷಿಸುತ್ತಿರುವ ಸಮಾನ ಮನಸ್ಕ ಮಹಿಳೆಯರಿಗಾಗಿಯೇ ಸಜ್ಜಾಗಿರುವ ಒಂದು ವಿಶೇಷ ವೇದಿಕೆ – **ಭೂಮಿಕಾ ಕ್ಲಬ್**ಗೆ ಸ್ವಾಗತ. ಇಲ್ಲಿ ಹೊಸ ಸ್ನೇಹಿತರ ಸಂಗಮವಿದೆ, ಹಣಕಾಸು ಮತ್ತು ಜೀವನಶೈಲಿಯ ಉನ್ನತೀಕರಣಕ್ಕೆ ತರಬೇತಿಯಿದೆ, ಅತ್ಯಾಕರ್ಷಕ ಸ್ಪರ್ಧೆಗಳಿವೆ ಮತ್ತು ಕ್ಲಬ್‌ನ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ, ನಿಮ್ಮ ನೆಚ್ಚಿನ ಸೆಲೆಬ್ರಿಟಿಗಳೊಂದಿಗೆ ಕಾಲಕ್ಷೇಪವಿದೆ. ಇನ್ನೇಕೆ ತಡ? ಇಂದೇ ನೋಂದಾಯಿಸಿಕೊಳ್ಳಿ!

26th August, 2:30pm onwards | **Venue:** St. Joseph Management Institute, Off MG Road

ಇಲ್ಲಿ ಏನೆಲ್ಲಾ ಇವೆ?

- ಉದ್ಘಾಟನೆ: ಎಂ ಡಿ ಪಲ್ಲವಿ, ರಂಜನಿ ರಾಘವನ್
- ಆರೋಗ್ಯ ಸಮಾಲೋಚನೆ: ಡಾ॥ ಸುಚಿಸ್ಮಿತಾ ರಾಜಮಾನ್ಯ, ಮಣಿಪಾಲ್ ಆಸ್ಪತ್ರೆ
- ಕೂದಲು ಮತ್ತು ತ್ವಚೆಯ ಆರೈಕೆಯ ಸಮಾಲೋಚನೆ: ಡಾ॥ ದೀಪಾ ಕೃಷ್ಣಮೂರ್ತಿ, ಮಣಿಪಾಲ್ ಆಸ್ಪತ್ರೆ
- ವೈಯಕ್ತಿಕ ಹಣಕಾಸು ಮತ್ತು ಹೂಡಿಕೆಯ ಮಾರ್ಗದರ್ಶನ: ಮೃಣ್ ಅಗರ್ವಾಲ್, ಫಿನ್‌ಸೇಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
- ಫ್ಯಾಷನ್ ಸಲಹೆಗಳು: ಶಚಿನಾ ಹೆಗ್ಗಾರ್
- ಮೇಕಪ್ ಟಿಪ್ಸ್: ಸುಶ್ಮಾ ನಾಣಯ್ಯ
- ಅಡುಗೆ ಪಾಕವಿಧಾನಗಳು: ಶೆಫ್ ಆಂಡ್ರಿಯಾ ಜುಡಿತ್ ಡಯಾಸ್, ತಾಜ್, ಬೆಂಗಳೂರು
- ಸ್ಟ್ಯಾಂಡ್–ಅಪ್ ಕಾಮಿಡಿ: ಅಶ್ವಿನಿ ರವೀಂದ್ರ
- ಹೈ–ಟೀ ಮತ್ತು ನೆಟ್‌ವರ್ಕಿಂಗ್
- ಆಟ ಮತ್ತು ಸ್ಪರ್ಧೆಗಳು
- ಎಲ್ಲರಿಗೂ ಗಿಫ್ಟ್ ಹ್ಯಾಂಪರ್ಸ್

5 ಅದೃಷ್ಟಶಾಲಿ ನೋಂದಾಯಿತರಿಗೆ ₹15,000* ಮೌಲ್ಯದ AO ಸ್ಮಿತ್ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ*

Gift Partner SMOOR® TRUE COUVERTURE CHOCOLATES

ನೋಂದಾಯಿತರಿಗೆ ಮಾತ್ರ ಪ್ರವೇಶ

ಹೆಚ್ಚಿನ ಮಾಹಿತಿಗಾಗಿ ಮತ್ತು ನೋಂದಾಯಿಸಿಕೊಳ್ಳಲು Q R CODE ಸ್ಕ್ಯಾನ್ ಮಾಡಿ ಅಥವಾ bit.ly/pvbhumikaclub ಗೆ ಲಾಗಿನ್ ಮಾಡಿ

*ಷರತ್ತುಗಳು ಅನ್ವಯ

ಬಸವಣ್ಣ, ಕೆಂಪೇಗೌಡ ಪ್ರತಿಮೆ ಸ್ಥಾಪನೆಗೆ ನ. 1ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಈಶಾನ್ಯ ಭಾಗದ ರೋಸ್‌ಗಾರ್ಡನ್ ಸ್ಥಳದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಸ್ಥಾಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮತಿ ನೀಡಿದ್ದಾರೆ.

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಸ್ಥಾಪಿಸಲೂ ಮುಖ್ಯಮಂತ್ರಿ ಅನುಮೋದನೆ ನೀಡಿದ್ದು, ಪ್ರತಿಮೆ ಸ್ಥಾಪಿಸಲು ಸ್ಥಳ ಗುರುತಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಜವಾಬ್ದಾರಿ ನೀಡಿದ್ದಾರೆ. ಎರಡೂ ಪ್ರತಿಮೆಗಳನ್ನು ನ.1ರಂದು ಅನಾವರಣಗೊಳಿಸಲು ಸೂಚಿಸಿದ್ದಾರೆ.

ನಿಧನ ವಾರ್ತೆ

ಶಾರದಮ್ಮ ಮೂಡಿ

ಬೆಂಗಳೂರು: ಶಾರದಮ್ಮ ಶಂಕ್ರಪ್ಪ ಮಾಸ್ಟರ್ ಮೂಡಿ (87) ಅವರು ಶನಿವಾರ ನಿಧನ ಹೊಂದಿದರು.

ಇವರಿಗೆ, ಪತಿ ಶಂಕ್ರಪ್ಪ ಹಾಗೂ ಮಗ ನಿವೃತ್ತ ಎಸಿಪಿ ಎಂ.ಕೆ. ಸೊಲಭೇಶ್ವರಪ್ಪ ಇದ್ದಾರೆ. ಶಾರದಮ್ಮ ಅವರ ಅಂತ್ಯಕ್ರಿಯೆಯನ್ನು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಮೂಡಿ ಗ್ರಾಮದಲ್ಲಿ ಭಾನುವಾರ (ಆಗಸ್ಟ್ 21) ಮಧ್ಯಾಹ್ನ 1 ಗಂಟೆಗೆ ನೆರವೇರಿಸಲಾಗುವುದೆಂದು ಕುಟುಂಬದವರು ತಿಳಿಸಿದ್ದಾರೆ.

ಶಾರದಮ್ಮ

ಕೃತಕ ಅಂಗದಾನ ಶಿಬಿರ

ಬೆಂಗಳೂರು: ಭಗವಾನ್ ಮಹಾವೀರ್ ವಿಕಲಾಂಗ ಸಹಾಯತ ಸಮಿತಿ ಸಹಯೋಗದಲ್ಲಿ ಕರ್ನಾಟಕ ಮಾರ್ವಾಡಿ ಸಮಾಜವು ಕೃತಕ ಅಂಗದಾನ ಶಿಬಿರ ಹಮ್ಮಿಕೊಂಡಿದ್ದು, ಇದೇ 28ಕ್ಕೆ ಬೆಳಿಗ್ಗೆ 9ರಿಂದ ಮಧ್ಯಾಹ್ನ 2.30ರ ವರೆಗೆ ಜಯನಗರದ ಮಹಾರಾಜ ಅಗ್ರಸೇನ್ ಭವನದಲ್ಲಿ ಅಳತೆ ಶಿಬಿರ ನಡೆಯಲಿದೆ.

ಇದೇ 27ರ ವರೆಗೆ ನೋಂದಣಿಗೆ ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 01.08.2022ರಂದು ಪ್ರಕಟಗೊಂಡಿದ್ದ ಇ–ಹರಾಜು ಪ್ರಕಟಣೆ ಸಂಖ್ಯೆ : ಬೆಂಅಪ್ರಾ /ಅಸ /ಇ–ಹರಾಜು/ ಟಿ–03 / 2022–23, ದಿನಾಂಕ 14.07.2022ಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ 728 ರಿಂದ 789ರ ನಿವೇಶನಗಳ ಹರಾಜು ತಾಂತ್ರಿಕ ಕಾರಣಗಳಿಂದ ರದ್ದುಗೊಂಡಿದ್ದು, ಈ ಅನಾನುಕೂಲಕ್ಕಾಗಿ ಬಿಡಿಎ ವಿಷಾದಿಸುತ್ತದೆ. ಸದರಿ ನಿವೇಶನಗಳನ್ನು ಮರು ಹರಾಜು ಮಾಡಲಾಗುತ್ತಿದ್ದು, ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ 07.09.2022, ಸಂಜೆ 6.00 ಗಂಟೆಗೆ, ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ 08.09.2022, ಸಂಜೆ 6.00 ಗಂಟೆಗೆ, ಇತರೆ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಅಭಿಯಂತರ ಸದಸ್ಯರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/31/2022–23/995 ದಿನಾಂಕ: 18–08–2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎ. ರಮೇಶ್ ಬಾಬು ಬಿನ್ ಪಾಂಡುರಂಗಯ್ಯ	ದೇವನಹಳ್ಳಿ	ಕುಂದಾಣ	ಸಿಂಗ್ರಹಳ್ಳಿ	1/3ಬಿ1	1–08 ಮತ್ತು 05 ಗು ‘ಎ’ ಖರಾಬ್	ವ್ಯವಸಾಯ	ವಸತಿ
2	ಶ್ರೀ ಎನ್. ವಿಜಯ ಬ್ಯಾಸ್ಕರ್ ರಾಜು ಬಿನ್ ಎನ್. ವೆಂಕಟರಾಜು	ದೇವನಹಳ್ಳಿ	ಕುಂದಾಣ	ಸಿಂಗ್ರಹಳ್ಳಿ	1/4	0–12.08	ವ್ಯವಸಾಯ	ವಸತಿ
3	ಶ್ರೀ ಎ. ರಮೇಶ್ ಬಾಬು ಬಿನ್ ಪಾಂಡುರಂಗಯ್ಯ	ದೇವನಹಳ್ಳಿ	ಕುಂದಾಣ	ಸಿಂಗ್ರಹಳ್ಳಿ	1/6	0–28 ಮತ್ತು 2 ಗು ‘ಎ’ ಖರಾಬ್	ವ್ಯವಸಾಯ	ವಸತಿ
4		ದೇವನಹಳ್ಳಿ	ಕುಂದಾಣ	ಸಿಂಗ್ರಹಳ್ಳಿ	1/7	0–32.08	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ವಸತಿ ವಲಯ’** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ವಾ.ಪ್ರ/1881/ಅಡ್ವರ್ಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಗಣೇಶ ಮೂರ್ತಿ ಪ್ರತಿಷ್ಠಾಪನೆ: ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ

63 ಕಡೆ ಏಕಗವಾಕ್ಷಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಪಡೆಯಲು ಸಾರ್ವಜನಿಕರಿಗೆ ಅನುಕೂಲ ಆಗುವಂತೆ ಪಾಲಿಕೆಯ 63 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಲ್ಲಾ ವಲಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗಣೇಶ ಹಬ್ಬವನ್ನು ಪರಿಸರಸ್ನೇಹಿಯಾಗಿ ಆಚರಿಸುವ ಸಂಬಂಧ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿವಿಧ ಇಲಾಖೆ ಅಧಿಕಾರಿಗಳ ಜತೆ ಸಮನ್ವಯ ಸಭೆ ನಡೆಸಿದ ಅವರು, ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲು ತಿಳಿಸಿದರು.

ಪ್ರತಿ ವರ್ಷದಂತೆ ಸ್ಯಾಂಕಿ, ಹಲಸೂರು, ಯಡಿಯೂರು, ಹೆಬ್ಬಾಳ ಸೇರಿ ಪ್ರಮುಖ ಕೆರೆ ಮತ್ತು ಕಲ್ಯಾಣಿಗಳಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಮಾಡುವಂತೆ ಹೇಳಿದರು.

ಕೆಲ ಪ್ರದೇಶಗಳಲ್ಲಿ ಕೆರೆಗಳು ವಸತಿ ಪ್ರದೇಶದಿಂದ ದೂರ ಇರುವುದರಿಂದ ಸಾರ್ವಜನಿಕರು ಚಿಕ್ಕ ಮೂರ್ತಿಗಳನ್ನು ವಿಸರ್ಜನೆ ಮಾಡಲು ಪ್ರತಿ ವಲಯಗಳ ಪ್ರಮುಖ ಸ್ಥಳ, ಜಂಕ್ಷನ್ ಮತ್ತು ಅವಶ್ಯ ಇರುವೆಡೆ ವಾರ್ಡ್‌ವಾರು ಸಂಚಾರಿ ವಿಸರ್ಜನಾ ಘಟಕಗಳನ್ನು(ತಾತ್ಕಾಲಿಕ ಟ್ಯಾಂಕ್) ಸ್ಥಾಪಿಸಲು ಸೂಚಿಸಿದರು.

ಗಣೇಶ ಮೂರ್ತಿಗಳ ವಿಸರ್ಜನೆಗೆ ಗುರುತಿಸಿರುವ ಕೆರೆಗಳ ಸುತ್ತಮುತ್ತ ಹಾಗೂ ಕಲ್ಯಾಣಿಗಳ ಆವರಣದಲ್ಲಿ ವ್ಯವಸ್ಥಿತವಾದ ಬ್ಯಾರಿಕೇಡ್ ಅಳವಡಿಸಬೇಕು. ಪ್ರತಿ ವಿಸರ್ಜನಾ ಕೇಂದ್ರದಲ್ಲೂ ನುರಿತ 10 ಈಜುಗಾರರು ಮತ್ತು ಅಗತ್ಯ ಸಿಬ್ಬಂದಿ ನೇಮಿಸಬೇಕು. ಧ್ವನಿವರ್ಧಕ ಅಳವಡಿಸಿ ಜಾಗೃತಿ ಮೂಡಿಸಬೇಕು. ಕೆರೆಗಳ ಬಳಿ ವಿದ್ಯುತ್ ದ್ವೀಪಗಳ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ವಿಸರ್ಜನಾ ಕೇಂದ್ರಗಳಲ್ಲಿ ಸಂಗ್ರಹವಾಗುವ ತ್ಯಾಜ್ಯಗಳನ್ನು ಕಂಟೈನರ್‌ಗಳ ಮೂಲಕ ತೆರವುಗೊಳಿಸಬೇಕು. ಸ್ವಚ್ಛತಾ ಸಿಬ್ಬಂದಿ ಹಾಗೂ ಸಾಗಣೆ ವಾಹನ ಸದಾ ಸಜ್ಜಾಗಿರಬೇಕು. ವಿಸರ್ಜನೆಗೆ ಅನುಕೂಲ ವಾಗುವಂತೆ ಅಗತ್ಯವಿದ್ದಲ್ಲಿ ದೋಣಿಗಳು, ನೀರೆತ್ತುವ ಪಂಪ್‌ಗಳು, ಕ್ರೇನ್‌ಗಳ ವ್ಯವಸ್ಥೆ ಕೂಡ ಸಿದ್ಧ ಇರಬೇಕು ಎಂದು ಸೂಚಿಸಿದರು.

‘ಪರಿಸರಸ್ನೇಹಿ ಮೂರ್ತಿ ಪೂಜಿಸಿ’

‘ಬಣ್ಣದ ಮತ್ತು ಪಿಒಪಿ ಗಣಪತಿ ಮೂರ್ತಿಗಳ ಪ್ರತಿಷ್ಠಾಪನೆ ಬದಲಿಗೆ ಪರಸರ ಸ್ನೇಹಿ ಮೂರ್ತಿಗಳನ್ನು ಪೂಜಿಸಬೇಕು’ ಎಂದು ತುಷಾರ್ ಗಿರಿನಾಥ್ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ವಿಸರ್ಜನಾ ಮೆರವಣಿಗೆ ವೇಳೆ ಪಟಾಕಿ, ಸಿಡಿ ಮದ್ದು ಸಿಡಿಸದಂತೆ ನೋಡಿಕೊಳ್ಳಬೇಕು. ನಿಗದಿತ ಸ್ಥಳಗಳಲ್ಲೇ ಗಣೇಶ ಮೂರ್ತಿಗಳನ್ನು ವಿಸರ್ಜಿಸಬೇಕು. ಫ್ಲೆಕ್ಸ್, ಬ್ಯಾನರ್ ಅಳವಡಿಕೆ ಮತ್ತು ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪಿಒಪಿ ಮೂರ್ತಿ ತಯಾರಿಕೆ ವಿರುದ್ಧ ಕ್ರಮ: ‘ರಾಸಾಯನಿಕ ಬಣ್ಣಗಳು, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿಒಪಿ) ಗಣೇಶ ಮೂರ್ತಿ ತಯಾರಿಕೆ ಸಂಪೂರ್ಣ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳನ್ನು ತಯಾರು ಮಾಡುವ ಸ್ಥಳಗಳಿದ್ದರೆ ಗುರುತಿಸಿ ಕ್ರಮ ಜರುಗಿಸಬೇಕು. ವಲಯ ಜಂಟಿ ಆಯುಕ್ತರು, ಆರೋಗ್ಯ ವೈದ್ಯಾಧಿಕಾರಿಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು, ವಾರ್ಡ್‌ವಾರು ಪಟ್ಟಿ ಸಿದ್ಧಪಡಿಸಿ ಸ್ಥಳ ತನಿಖೆ ಕೈಗೊಳ್ಳಬೇಕು. ತಯಾರಿಕೆ, ಮಾರಾಟ ಮಾಡುತ್ತಿದ್ದರೆ ದಂಡ ವಿಧಿಸುವ ಜತೆಗೆ ಪ್ರಕರಣ ದಾಖಲಿಸಬೇಕು ಎಂದು ತುಷಾರ್ ತಿಳಿಸಿದರು.

ಕಲಾ ಪ್ರದರ್ಶನ ಇಂದಿನಿಂದ

ಬೆಂಗಳೂರು: ಆರ್ಟ್ ಬೇರು ಫೋರಂ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಆರು ಕಲಾವಿದರ ಕಲಾಕೃತಿಗಳ ಪ್ರದರ್ಶನವನ್ನು ಇದೇ 21ರಿಂದ 29ರವರೆಗೆ ಹಮ್ಮಿಕೊಂಡಿದೆ. ಸಂಜೆ 6 ಗಂಟೆಗೆ ಪ್ರದರ್ಶನಕ್ಕೆ ಚಾಲನೆ ಸಿಗಲಿದೆ. ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್, ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ಕಲಾ ನಿರ್ದೇಶಕ ಜೆ. ಶಿವಕುಮಾರ್, ಕಲಾವಿದರಾದ ಪಿ.ಎಸ್. ಕುಮಾರ್, ಕಲಾವಿದ ಪ್ರೊ.ಅಪ್ಪಾಜಯ್ಯ ಕೆ.ಎಸ್., ಪಾಲ್ಗೊಳ್ಳಲಿದ್ದಾರೆ.

ಕಲಾವಿದರಾದ ಗಣಪತಿ ಅಗ್ನಿಹೋತ್ರಿ, ಜಯಂತ ಬಿ. ಹುಬ್ಳಿ, ಅಶೋಕ್ ಭಂಡಾರೆ, ಎಸ್.ಎ. ವಿಮಲನಾಥನ್, ನಿರ್ಮಲಾಕುಮಾರಿ ಸಿ.ಎಸ್. ಮತ್ತು ರಂಜನಾ ಎನ್. ಅವರ ಕಲಾಕೃತಿ ಪ್ರದರ್ಶನ ಕಾಣಲಿವೆ. ಬೆಳಿಗ್ಗೆ10ರಿಂದ ಸಂಜೆ 7ರ ವರೆಗೆ ವೀಕ್ಷಣೆಗೆ ಅವಕಾಶ ಇರಲಿದೆ.

ತ್ರಿವೇಣಿ ಸಂಗಮದಲ್ಲಿ ಮೂರು ದಿನ ಮಹೋತ್ಸವ

ಅ.15ರಿಂದ ಮಹಾ ಕುಂಭಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೇಮಹದೇಶ್ವರ ಜಯಂತಿ ಮಹೋತ್ಸವ ಮತ್ತು ಮಹಾ ಕುಂಭಮೇಳವನ್ನು ಅಕ್ಟೋಬರ್ 15ರಿಂದ ಮೂರು ದಿನ ನಡೆಸಲು ಮಹೋತ್ಸವ ಸಮಿತಿ ತೀರ್ಮಾನಿಸಿದೆ.

ಆದಿಚುಂಚನಗಿರಿ ವಿಜಯನಗರ ಶಾಖೆಯಲ್ಲಿ ನಡೆದ ಸಭೆಯಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥಸ್ವಾಮೀಜಿ, ಶ್ರೀರಂಗಪಟ್ಟಣದ ಬೇಬಿಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಸಚಿವರಾದ ನಾರಾಯಣಗೌಡ, ಕೆ.ಗೋಪಾಲಯ್ಯ ಪಾಲ್ಗೊಂಡು ಮಹೋತ್ಸವದ ಬಗ್ಗೆ ಚರ್ಚಿಸಿದರು.

ಮಹದೇಶ್ವರರು ಶ್ರೀಶೈಲದಿಂದ ಬಂದು ಮೊದಲು ಪಾದಸ್ಪರ್ಶ ಮಾಡಿದ ಕೆ.ಆರ್.ಪೇಟೆ ತಾಲ್ಲೂಕಿನ ಅಂಬಿಕರಹಳ್ಳಿ–ಸಂಗಾಪುರ–ಪುರ ಗ್ರಾಮಗಳ ತ್ರಿವೇಣಿ ಸಂಗಮದಲ್ಲಿ ಇದೇ ಮೊದಲ ಬಾರಿಗೆ ಕುಂಭ ಮೇಳ ಪುಣ್ಯ ಸ್ನಾನ ನಡೆಯಲಿದೆ. ಸರ್ವಧರ್ಮ ಸಮ್ಮೇಳನ, ಧಾರ್ಮಿಕ ಕಾರ್ಯಕ್ರಮಗಳು, ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ದೇಶ ಹಲವೆಡೆಯಿಂದ ಸಾಧು ಸಂತರು, ಬಿಷಪ್‌ಗಳು, ಮೌಲ್ವಿಗಳು ಸೇರಿ 300ಕ್ಕೂ ಹೆಚ್ಚು ಧಾರ್ಮಿಕ ಗುರುಗಳು ಭಾಗವಹಿಸಲಿದ್ದಾರೆ. 3 ಲಕ್ಷಕ್ಕೂ ಹೆಚ್ಚು ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಸಭೆಯಲ್ಲಿ ಚರ್ಚೆ ನಡೆಯಿತು.

ಕುಂಭಮೇಳದ ಅಂಗವಾಗಿ ಅ.13ರಂದು ಮಲೆಮಹದೇಶ್ವರ ಬೆಟ್ಟದಿಂದ ಜ್ಯೋತಿಯಾತ್ರೆ ಹೊರಡಲಿದೆ. ಹನೂರು, ಕೊಳ್ಳೇಗಾಲ, ಮಳವಳ್ಳಿ, ಮದ್ದೂರು, ಮಂಡ್ಯ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ, ಕೆ.ಆರ್.ಎಸ್, ಕೆ.ಆರ್.ಪೇಟೆ, ಅಂಬಿಗರಹಳ್ಳಿ ಮೂಲಕ ಅ.15ರಂದು ತ್ರಿವೇಣಿ ಸಂಗಮ ತಲುಪಲಿದೆ. ಮಹೋತ್ಸವ ಮತ್ತು ಮಹಾ ಕುಂಭಮೇಳವನ್ನು ಯಶಸ್ವಿಯಾಗಿ ನಡೆಸಲು ಸಭೆ ತೀರ್ಮಾನಿಸಿತು.

ಮಲೆಮಹದೇಶ್ವರ ಜಯಂತಿ ಮತ್ತು ಮಹಾ ಕುಂಬಮೇಳ ಸಿದ್ಧತೆ ಕುರಿತ ಪೂರ್ವಭಾವಿ ಸಭೆ ಬೆಂಗಳೂರಿನ ಆದಿಚುಂಚನಗಿರಿ ವಿಜಯನಗರ ಶಾಖಾ ಮಠದಲ್ಲಿ ಶನಿವಾರ ನಡೆಯಿತು. ಕ್ರೀಡಾ ಸಚಿವ ನಾರಾಯಣಗೌಡ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀರಂಗಪಟ್ಟಣದ ಬೇಬಿಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಅಬಕಾರಿ ಸಚಿವ ಕೆ.ಗೋಪಾಲಯ್ಯ ಇದ್ದರು

‘ವಾರ್ಡ್ ವಿಂಗಡಣೆ ಆಕ್ಷೇಪ: ಸುಪ್ರೀಂಗೆ ಹೋಗಲು ಸ್ವತಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾರ್ಡ್ ಪುನರ್ ವಿಂಗಡಣೆ ಅಧಿಸೂಚನೆ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆಹೋಗಲು ಅರ್ಜಿದಾರರು ಸ್ವತಂತ್ರರು’ ಎಂದು ಹೈಕೋರ್ಟ್ ಆದೇಶ ನೀಡಿದೆ.

ಸುರೇಶ್ ಮಹಾಜನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶ ಉಲ್ಲೇಖಿಸಿ ನ್ಯಾಯಮೂರ್ತಿ ಹೇಮಂತ್ ಚಂದನಗೌಡ ಅವರು ಈ ಆದೇಶ ಹೊರಡಿಸಿದ್ದಾರೆ.

‘ಮರು ವಿಂಗಡಣೆ ಆಗಿಲ್ಲ ಎಂಬ ಕಾರಣಕ್ಕೆ ಈಗಾಗಲೇ ವಿಳಂಬವಾಗಿರುವ ಚುನಾವಣೆ ಮುಂದೂಡುವ ಅಗತ್ಯವಿಲ್ಲ’ ಎಂದು ಮಧ್ಯಪ್ರದೇಶದ ಚುನಾವಣೆ ಸಂಬಂಧದ ಸುರೇಶ್ ಮಹಾಜನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತಿಳಿಸಿತ್ತು.

‘ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 13ರ ಪ್ರಕಾರವೂ ಚುನಾಯಿತ ಸದಸ್ಯರ ಅವಧಿ ಮುಗಿಯುವ ಮೊದಲೇ ಚುನಾವಣೆ ನಡೆಯಬೇಕು. 2020ರ ಸೆಪ್ಟೆಂಬರ್ 10ರಂದೇ ಚುನಾಯಿತ ಸದಸ್ಯರ ಅವಧಿ ಮುಗಿದಿದೆ’ ಎಂದು ನ್ಯಾಯಪೀಠ ಹೇಳಿತು.

ಕ್ಷೇತ್ರ ಮರು ವಿಂಗಡಣೆಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಆ.29ಕ್ಕೆ ಮುಂದೂಡಿತು.

ನಗರದಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಶಾಸಕ ರಂಜನ್ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆಯಲು ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಬೆಂಬಲ ನೀಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಕಾರ್ಯಕರ್ತರು, ರಂಜನ್ ಅವರನ್ನು ಬಂಧಿಸುವಂತೆ ಆಗ್ರಹಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮೊಟ್ಟೆ ರವಾನೆ ಮಾಡಲಾಗುವುದು ಎಂದು ಶನಿವಾರ ನಗರದಲ್ಲಿ ನಡೆದ ಪ್ರತಿಭಟನೆ ವೇಳೆ ಕಾರ್ಯಕರ್ತರು ತಿಳಿಸಿದರು.

‘ಬಿಜೆಪಿಯ ಕೆಲವು ಗೂಂಡಾ ಪ್ರವೃತ್ತಿಯಿರುವ ವ್ಯಕ್ತಿಗಳು ಕರ್ನಾಟಕದ ಸಂಸ್ಕೃತಿಗೆ ಧಕ್ಕೆ ತರುತ್ತಿದ್ದಾರೆ. ಬಿಜೆಪಿ ಶಾಸಕರು, ಸಚಿವರೇ ವಿರೋಧ ಪಕ್ಷಗಳ ವಿರುದ್ಧ ಈ ರೀತಿಯ ಹೀನಾಯ ಕೃತ್ಯ ಎಸಗಲು ತಮ್ಮ ಕಾರ್ಯಕರ್ತರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಕೀಳುಮಟ್ಟದ ರಾಜಕೀಯ ನಡೆಸಿ ಬಿಜೆಪಿಯ ಯೋಗ್ಯತೆಯನ್ನು ಜನರ ಮುಂದೆ ಅವರೇ ಬಹಿರಂಗ ಪಡಿಸಿಕೊಂಡಿದ್ದಾರೆ’ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಹೇಳಿದರು. ಇದೇ ವೇಳೆ ಅಪ್ಪಚ್ಚು ರಂಜನ್ ಪ್ರತಿಕೃತಿ ದಹಿಸಲಾಯಿತು.

ಬೆಂಗಳೂರು ನಗರ ಪ್ರಚಾರ ಸಮಿತಿ ಅಧ್ಯಕ್ಷ ಎ.ಆನಂದ್, ಮುಖಂಡರಾದ ಸುಧಾಕರ್, ಪ್ರಕಾಶ್, ವೆಂಕಟೇಶ್, ಮಂಜುನಾಥ್, ಅನಿಲ್, ಚೇತನ್, ಚಿಕ್ಕಣ್ಣ, ಪುಟ್ಟರಾಜು, ಸುಪ್ರಜ್, ಪ್ರಶಾಂತ್ ಹಾಜರಿದ್ದರು.

ನಗರದಲ್ಲಿ ಇಂದು

ಮನೆ–ಮನಗಳ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ರೇಣುಕಮ್ಮ, ದೇವರಾಜ್, ಸ್ಥಳ: ನಂ.12 ಮಾತೋಶ್ರೀ ನಿಲಯ, 22ನೇ ಅಡ್ಡರಸ್ತೆ, ಬಾಗಲಗುಂಟೆ, ಸಂಜೆ: ಪ್ರಶಾಂತ. ಟಿ.ಎನ್., ಸ್ಥಳ: ಆಶಾ ಪ್ರಶಾಂತ ಹೋಟೆಲ್ ನಂಜುಂಡೇಶ್ವರ ಕೋಡಿಹಳ್ಳಿ ಕ್ರಾಸ್ ತಾಳಕುಂಟೆ, ಹೊಸೂರು ಮುಖ್ಯರಸ್ತೆ ಮಾಲೂರು.

ಡಿ. ದೇವರಾಜು ಅರಸು ಅವರ ಜಯಂತಿಯ ಅಂಗವಾಗಿ ರಕ್ತದಾನ ಶಿಬಿರ: ಉದ್ಘಾಟನೆ: ಯು.ಬಿ ವೆಂಕಟೇಶ್, ಆಯೋಜನೆ: ವಸಂತ ವಿಹಾರ ವಾಟರ್ ಪೋಲೊ ಕ್ಲಬ್, ಸ್ಥಳ: ವಾಸಣ್ಣ ರೆಸಿಡೆನ್ಸಿ, ತ್ಯಾಗರಾಜನಗರ, ಬೆಳಿಗ್ಗೆ 9

28ನೇ ಶ್ರಾವಣ ಸಂಭ್ರಮ: ಉದ್ಘಾಟನೆ: ಪ್ರಭಾಕರ ಸಂಗೂರಮಠ, ಅತಿಥಿಗಳು: ಎಂ. ಬಸವರಾಜಪ್ಪ, ಅಧ್ಯಕ್ಷತೆ: ಬಸವರಾಜ ಕೋಣಿ, ಆಯೋಜನೆ: ವಿದ್ಯಾರಣ್ಯಪುರ ವೀರಶೈವ ಸೇವಾ ಸಮಿತಿ, ಸ್ಥಳ: ವೀರಭದ್ರೇಶ್ವರ ದೇವಸ್ಥಾನ, ತಿಂಡ್ಲು ಗ್ರಾಮ, ವಿದ್ಯಾರಣ್ಯಪುರ, ಬೆಳಿಗ್ಗೆ 10

ರಾಗಿ ಕಣ ‘ಸಂತೆ’: ಗ್ರಾಮೀಣ ಶ್ರಮ ಜೀವಿಗಳನ್ನು ಬೆಂಬಲಿಸಿ, ಕೈ ಉತ್ಪನ್ನಗಳನ್ನು ಕೊಳ್ಳಿ, ಆಯೋಜನೆ: ರಾಗಿ ಕಣ ಸಂತೆ, ಸ್ಥಳ: ರಾಗಿಕಣ, ಬನ್ನೇರುಘಟ್ಟ ರಸ್ತೆ ಬಳಿ, ಬೆಳಿಗ್ಗೆ 10

2021–2022ನೇ ಸಾಲಿನ 50ನೇ ವಾರ್ಷಿಕ ಸಾಮಾನ್ಯ ಸಭೆ: ಅಧ್ಯಕ್ಷರು: ಎಚ್.ಎ. ಪ್ರಕಾಶ್, ಆಯೋಜನೆ: ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ., ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ಸ್ಥಳ: ನಂ.75 ದಿ ಪ್ರಿಂಟರ್ಸ್ ಪ್ರೈ.ಲಿ., ಎಂ.ಜಿ ರಸ್ತೆ, ಹಳೆಯ ಆರ್ಥಿಕ ಇಲಾಖೆ, ಬೆಳಿಗ್ಗೆ 10.30

ಶಾಂತವೇರಿ ಗೋಪಾಲಗೌಡ ಹಾಗೂ ಮಧುಲಿಮಯೆ ಜನ್ಮ ಶತಮಾನೋತ್ಸವ, ಶಾಹು ಮಹಾರಾಜ್ ಒಂದು ನೆನಪು ಕಾರ್ಯಕ್ರಮ: ಉದ್ಘಾಟನೆ: ಕಾಗೋಡು ತಿಮ್ಮಪ್ಪ, ಪ್ರಾಸ್ತಾವಿಕ ನುಡಿ: ಶ್ರೀಕಂಠಮೂರ್ತಿ, ಅತಿಥಿಗಳು: ಬಡಗಲಪುರ ನಾಗೇಂದ್ರ, ಪ್ರಕಾಶಮೂರ್ತಿ, ಅಧ್ಯಕ್ಷತೆ: ಪ್ರಕಾಶ್ ಕಮ್ಮರಡಿ, ಆಯೋಜನೆ: ಸಮಾಜವಾದಿ ವೇದಿಕೆ, ಸ್ಥಳ: ಗಾಂಧಿಭವನ, ಬೆಳಿಗ್ಗೆ 10.30

ಯಶೋಧರ ದಾಸಪ್ಪ ಪ್ರಶಸ್ತಿ ಪ್ರದಾನ, ಅಪ್ರತಿಮ ಸಮಾಜ ಸುಧಾರಕಿ ಯಶೋಧರ ದಾಸಪ್ಪ ಕೃತಿ ಬಿಡುಗಡೆ: ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಕೃತಿ ಬಿಡುಗಡೆ: ವಿಜಯಮ್ಮ, ಅಧ್ಯಕ್ಷತೆ: ಬಿ. ಜಯಪ್ರಕಾಶ್ ಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಎ. ವೆಂಕಟೇಶಮೂರ್ತಿ ಅವರ ‘ಎಲ್‌ಟಿಟಿಇ ಮೂರ್ತಿ ಕಾಲಿಂಗ್’ ಕಾದಂಬರಿ ಬಿಡುಗಡೆ: ಅತಿಥಿಗಳು: ವಸಿಷ್ಠ ಸಿಂಹ, ಆದಿತ್ಯ, ಪಿ.ಆರ್. ಜನಾರ್ದನ್, ಡಿ.ಜೆ. ಚಕ್ರವರ್ತಿ ಚಂದ್ರಚೂಡ, ಶಿವಕುಮಾರ ಮಾವಲಿ, ಆಯೋಜನೆ ಸಾವಣ್ಣ ಪ್ರಕಾಶನ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಬೆಳಿಗ್ಗೆ 10.30

ಕವಿಗೋಷ್ಠಿ ಕನ್ನಡ ಗೀತೆಗಳ ಗಾಯನ: ಉದ್ಘಾಟನೆ: ಭರತ್ ಮುನಿಯಪ್ಪ, ಅಧ್ಯಕ್ಷತೆ: ಮಂಜುಳಾ ಶಿವಾನಂದ, ಕಿರಂಗೂರು ಮಾಯಣ್ಣಸ್ವಾಮಿ, ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ತನ್ಮಯಿ ಚಂದ್ರಶೇಖರ್, ಅತಿಥಿಗಳು ರೇವತಿ ನರಸಿಂಹನ್, ರಮ್ಯಾ ಸೂರಜ್, ಆಯೋಜನೆ: ನೃತ್ಯಾರ್ಪಣಾ, ಸ್ಥಳ: ಕೆಇಎ ಪ್ರಭಾತ ಸಭಾಂಗಣ, ಬಸವೇಶ್ವರನಗರ, ಸಂಜೆ 4

ಮೋಪ್ಲಾ ಹತ್ಯಾಕಾಂಡ ಉಪನ್ಯಾಸ: ಉಪನ್ಯಾಸ: ಸಂದೀಪ್ ಬಾಲಕೃಷ್ಣ, ಅಧ್ಯಕ್ಷತೆ: ಮಂಜುನಾಥ ಅಜ್ಜಂಪುರ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ ನೃಪತುಂಗ ರಸ್ತೆ, ಬೆಳಿಗ್ಗೆ 11

ಕುವೆಂಪು ಬಡಾವಣೆ ರಸ್ತೆಗಳ ಡಾಂಬರೀಕರಣಕ್ಕೆ ಚಾಲನೆ: ಅತಿಥಿಗಳು: ಕೃಷ್ಣ ಬೈರೇಗೌಡ, ಆಯೋಜನೆ: ಕುವೆಂಪು ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಷನ್, ಸ್ಥಳ: ಕುವೆಂಪು ಬಡಾವಣೆ, ಭುವನೇಶ್ವರಿ ನಗರ, ಬೆಳಿಗ್ಗೆ 11.30

ವ್ಯಾಸರಾವ್ ನಿಂಜೂರ್ ಅವರ ಎಳೆದ ತೇರು ಮತ್ತು ಸಮಗ್ರ ಕಥೆಗಳು, ಸೇತು ಅವರ ಕಾದಂಬರಿ ಬಿಡುಗಡೆ: ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಅತಿಥಿಗಳು: ಎಂ.ಆರ್. ದತ್ತಾತ್ರಿ, ಶಶಿಧರ ಹಲಾಡಿ, ಆಯೋಜನೆ: ಅಂಕಿತ ಪುಸ್ತಕ, ಬೆಳಿಗ್ಗೆ 11ಕ್ಕೆ (ಆನ್‌ಲೈನ್)

ಎಸ್.ಎಲ್ ಭೈರಪ್ಪ ಅವರ ‘ವಂಶವೃಕ್ಷ’ ನಾಟಕ ಪ್ರದರ್ಶನ: ನಿರ್ದೇಶನ: ಅಭಿರುಚಿ ಚಂದ್ರು, ಸಂಗೀತ: ಸದಾಶಿವ ಭಟ್, ಆಯೋಜನೆ: ವಟ ಕುಟೀರ, ಸ್ಥಳ: ವಿವೇಕ ಸಭಾಂಗಣ, ಜಯನಗರ, ಬೆಳಿಗ್ಗೆ 11.30

‘Beg Borrow ಅಳಿಯ’ ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಚನೆ: ಎಂ.ಎಸ್ ನರಸಿಂಹಮೂರ್ತಿ, ಪ್ರಚಾರ ಕಲೆ: ಭವ್ಯ ಜೆ., ಚೈತ್ರ ಪ್ರವೀಣೆ, ಅಜಯ್ ಕುಮಾರ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2

‘ಬಿ ಹ್ಯಾಪಿ ಇಫ್ ಯು ಆರ್ ಡಯಾಬಿಟಿಕ್ ಮತ್ತು 105 ಸೂಪರ್ ಟೇಸ್ಟಿ ಡಯಾಬಿಟಿಕ್ ರೆಸಿಪೀಸ್’ ಪುಸ್ತಕ ಬಿಡುಗಡೆ: ಬಿಡುಗಡೆ: ವೀರೇಶಾನಂದ ಸರಸ್ವತಿ ಸ್ವಾಮೀಜಿ, ಉದ್ಘಾಟನೆ: ಎಸ್. ಟಿ ಸೋಮಶೇಖರ್, ಅಧ್ಯಕ್ಷತೆ: ಎಚ್. ಎಸ್. ಸುಧೀಂದ್ರ ಕುಮಾರ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಬ್ರಾಹ್ಮಣ ಸಭಾ, ಕೆಂಗೇರಿ ಉಪನಗರ, ಸಂಜೆ 5

ಕನಕ ಭವನ ಉದ್ಘಾಟನೆ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವಿ. ಸೋಮಣ್ಣ, ಆಯೋಜನೆ: ಕನಕಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಗಂಗೊಂಡನಹಳ್ಳಿ, ಚಂದ್ರಾ ಲೇಔಟ್, ಸಂಜೆ 5

ಶ್ರಾವಣ ಸಂಜೆ ‘ಅಂದಿನ ಹಾಡುಗಳು ಇಂದಿನ ಸಂಭ್ರಮ’: ಅತಿಥಿಗಳು: ರಮೇಶ್ ಭಟ್, ಕಲಾವಿದರು: ಬಿ.ಆರ್. ಸುಹಾಸ್, ಮೋಹನ್, ರಾಘವೇಂದ್ರ, ಬಿ.ಆರ್ ದೀಪಿಕಾ, ಶೋಭಾ ಇಂಚಗೇರಿಮಠ, ಆಯೋಜನೆ: ಬಿ.ಜಿ. ರಮೇಶ್ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಒಡಿಸ್ಸಿ ನೃತ್ಯ: ಪ್ರಸ್ತುತಿ: ಅರುಷಿ ಮುದ್ಗಲ್, ಮಧುಲಿತಾ ಮಹಾಪಾತ್ರ, ರಾಹುಲ್ ಆಚಾರ್ಯ, ಸೌರವ್ ಮೊಹಾಂತಿ, ಆಯೋಜನೆ: ನೃತ್ಯಾಂತ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್, ಸ್ಥಳ: ಎಡಿಎ ರಂಗ ಮಂದಿರ, ಜೆ.ಸಿ ರಸ್ತೆ, ಸಂಜೆ 5.30

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ಮೀನಾಕ್ಷಿ ಮೇಟಿ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಬಿ. ಶಿವಣ್ಣ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಕುಟೀರ, ಹೇರೋಹಳ್ಳಿ ಕ್ರಾಸ್, ಮಹದೇಶ್ವರನಗರ, ಸಂಜೆ 6

‘ಬರ್ಖಾ ರಿತು’ ಸಂಗೀತ ಕಾರ್ಯಕ್ರಮ: ಗಾಯನ: ಶೌನಕ್ ಅಭಿಷೇಕ್, ಆನಂದ್ ಭಾಟೆ, ಸಿತಾರ್: ಶುಜಾತ್ ಖಾನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6

ತಂದೆ ವರ್ತನೆಗೆ ಬೇಸತ್ತು ಮಗ ಆತ್ಮಹತ್ಯೆ

ಬೆಂಗಳೂರು: ಜಗಜೀವನ್ ರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ಚಂದು (19) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಸ್ಥಳೀಯ ನಿವಾಸಿ ಚಂದು, ಶುಕ್ರವಾರ ರಾತ್ರಿ ಕೊಠಡಿಗೆ ಹೋಗಿ ಮಲಗಿದ್ದರು. ಶನಿವಾರ ಬೆಳಿಗ್ಗೆ ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡು ಬಾಗಿಲು ಮೀಟಿ ತೆಗೆದು ನೋಡಿದಾಗ, ಮೃತ ದೇಹ ಕಂಡಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಂದು ಅವರ ತಂದೆ, ಮಹಿಳೆಯ ಜೊತೆ ಸಲುಗೆ ಇಟ್ಟುಕೊಂಡಿದ್ದರೆಂದು ಎನ್ನಲಾಗಿದೆ. ಇದರಿಂದ ಸಿಟ್ಟಾಗಿದ್ದ ಚಂದು, ತಂದೆಗೆ ಮಹಿಳೆ ಬಳಿ ಹೋಗದಂತೆ ತಾಕೀತು ಮಾಡಿ ದ್ದರು. ಇದೇ ವಿಚಾರವಾಗಿ ಶುಕ್ರವಾರ ರಾತ್ರಿ ತಂದೆ–ಮಗನ ನಡುವೆ ಗಲಾಟೆ ಆಗಿತ್ತು. ಇದರಿಂದ ಬೇಸತ್ತು ಚಂದು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುರಿದಿದೆ' ಎಂದೂ ಮೂಲಗಳು ತಿಳಿಸಿವೆ.

'ಮೊಬೈಲ್ ಚಾರ್ಜರ್' ಕ್ಯಾಮೆರಾದಿಂದ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದ ಯುವಕ

ನಗ್ನ ದೃಶ್ಯ ಸೆರೆ: ಪರಿಚಿತನ ಬಂಧನ

ಪ್ರಜಾವಾಣಿ ವಾರ್ತೆ

ಮಹೇಶ್

ದೃಶ್ಯ ಚಿತ್ರೀಕರಿಸಲು ಆರೋಪಿ ಬಳಸಿದ್ದ ಮೊಬೈಲ್ ಚಾರ್ಜರ್ ಮಾದರಿಯ ರಹಸ್ಯ ಕ್ಯಾಮೆರಾ

ಬೆಂಗಳೂರು: ಪರಿಚಯಸ್ಥ ಮಹಿಳೆಯ ನಗ್ನ ದೃಶ್ಯಗಳನ್ನು ರಹಸ್ಯ ಕ್ಯಾಮೆರಾ ಮೂಲಕ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ವಿ. ಮಹೇಶ್ (30) ಎಂಬುವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೈಸೂರು ಜಿಲ್ಲೆಯ ಟಿ. ನರಸೀಪುರದ ಮಹೇಶ್, ಈಶಾನ್ಯ ವಿಭಾಗ ವ್ಯಾಪ್ತಿಯಲ್ಲಿ ವಾಸವಿದ್ದ ಮಹಿಳೆಗೆ ಬ್ಲ್ಯಾಕ್ ಮೇಲ್ ಮಾಡುತ್ತಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಮೊಬೈಲ್ ಚಾರ್ಜರ್ ಮಾದರಿಯ ರಹಸ್ಯ ಕ್ಯಾಮೆರಾ, ಲ್ಯಾಪ್‌ಟಾಪ್, 2 ಮೆಮೊರಿ ಕಾರ್ಡ್, ಪೆನ್ ಡ್ರೈವ್ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆಗೆ ಪರಿಚಯಸ್ಥನಾಗಿದ್ದ ಆರೋಪಿ, ಆಗಾಗ ಮನೆಗೂ ಬಂದು ಹೋಗುತ್ತಿದ್ದ. ಮಹಿಳೆ ಜೊತೆ ಲೈಂಗಿಕವಾಗಿ ಸಲುಗೆ ಬೆಳೆಸಿಕೊಳ್ಳಲು ಮುಂದಾಗಿದ್ದ. ಆದರೆ, ಮಹಿಳೆ ನಿರಾಕರಿಸಿದ್ದರು. ಇದರಿಂದ ಸಿಟ್ಟಾದ ಆರೋಪಿ, ಮಹಿಳೆಯ ನಗ್ನ ದೃಶ್ಯಗಳನ್ನು ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಲು ಸಂಚು ರೂಪಿಸಿದ್ದ' ಎಂದು ತಿಳಿಸಿವೆ.

ಚಾರ್ಜರ್ ಮಾದರಿ ಕ್ಯಾಮೆರಾ ಖರೀದಿ: 'ಮೊಬೈಲ್ ಚಾರ್ಜರ್ ಮಾದರಿಯ ರಹಸ್ಯ ಕ್ಯಾಮೆರಾವನ್ನು ಆನ್‌ಲೈನ್‌ನಲ್ಲಿ ಖರೀದಿಸಿದ್ದ ಆರೋಪಿ, ಅದರ ಮೂಲಕವೇ ಮಹಿಳೆಯ ನಗ್ನ ದೃಶ್ಯಗಳನ್ನು ಚಿತ್ರೀಕರಿಸಲು ಸಿದ್ಧತೆ ಮಾಡಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆ ಹಾಗೂ ಅವರ ಕುಟುಂಬದವರನ್ನು ಮಾತನಾಡಿಸುವ ಸೋಗಿನಲ್ಲಿ ಆರೋಪಿ ಮನೆಗೆ ತೆರಳಿದ್ದ. ಮಹಿಳೆ ಮಲಗುತ್ತಿದ್ದ ಕೊಠಡಿ ಸ್ವಿಚ್ ಬೋರ್ಡ್‌ಗೆ ಮೊಬೈಲ್ ಚಾರ್ಜರ್ ಹಾಕಿ ವಾಪಸು ಹೋಗಿದ್ದ. ಇದೇ ಸಂದರ್ಭದಲ್ಲೇ ಮಹಿಳೆಯ ನಗ್ನ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಕೆಲ ದಿನ ಬಿಟ್ಟು ಮನೆಗೆ ಪುನಃ ತೆರಳಿದ್ದ ಆರೋಪಿ, ಚಾರ್ಜರ್ ತೆಗೆದುಕೊಂಡು ಹೋಗಿದ್ದ' ಎಂದು ತಿಳಿಸಿವೆ.

ನಕಲಿ ಖಾತೆ ತೆರೆದು ಸಂದೇಶ: 'ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ, ಮಹಿಳೆಯ ಖಾತೆಗೆ ಸಂದೇಶ ಕಳುಹಿಸುತ್ತಿದ್ದ. ಅಪರಿಚಿತನ ಖಾತೆ ಆಗಿದ್ದರಿಂದ ಮಹಿಳೆ ಬ್ಲಾಕ್ ಮಾಡಿದ್ದರು. ಆರೋಪಿಯು ಮತ್ತೊಂದು ನಕಲಿ ಖಾತೆ ತೆರೆದು ಸಂದೇಶ ಕಳುಹಿಸಲಾರಂಭಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನನ್ನ ಜೊತೆ ಲೈಂಗಿಕವಾಗಿ ಸಲುಗೆ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ, ನಿಮ್ಮ ನಗ್ನ ವಿಡಿಯೊಗಳು ನನ್ನ ಬಳಿ ಇವೆ. ಅವುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಆರೋಪಿ ಹೇಳಿದ್ದ. ಅದಕ್ಕೆ ತಲೆಕೆಡಿಸಿಕೊಳ್ಳದ ಮಹಿಳೆಯು ಸಂದೇಶಕ್ಕೆ ಉತ್ತರ ನೀಡಿರಲಿಲ್ಲ. ಇದರಿಂದ ಕೋಪಗೊಂಡ ಆರೋಪಿ, ನಗ್ನದೃಶ್ಯದ ತುಣುಕು ಕಳುಹಿಸಿದ್ದ. ಹೆದರಿದ್ದ ಮಹಿಳೆ, ಕುಟುಂಬದವರಿಗೆ ವಿಷಯ ತಿಳಿಸಿ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿವೆ.

'ಅಪರಿಚಿತ ವ್ಯಕ್ತಿ ವಿರುದ್ಧ ಮಹಿಳೆ ದೂರು ನೀಡಿದ್ದರು. ಆರೋಪಿಯನ್ನು ಪತ್ತೆ ಮಾಡಿದಾಗ, ಆತ ಪರಿಚಿತ ಎಂಬುದು ತಿಳಿಯಿತು' ಎಂದು ಹೇಳಿವೆ.

ಮನೆಗಳಲ್ಲಿ ಕಳ್ಳತನ: ಚಿನ್ನಾಭರಣ ಜಪ್ತಿ

ಬೆಂಗಳೂರು: ಎಚ್‌ಎಸ್‌ಆರ್ ಬಡಾವಣೆಯ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ₹ 37 ಲಕ್ಷ ಮೌಲ್ಯದ 700 ಗ್ರಾಂ ಚಿನ್ನಾಭರಣ ಹಾಗೂ 2 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಿದ್ದಾರೆ.

'ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನವಾಗಿತ್ತು. ತನಿಖೆ ಕೈಗೊಂಡು ಆರೋಪಿಯೊಬ್ಬನನ್ನು ಬಂಧಿಸಲಾಗಿದ್ದು, ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಅಂಗಳದಲ್ಲಿ ರಂಗೋಲಿ ಹಾಕಿರದ ಹಾಗೂ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಮನೆಗಳ ಬೀಗದ ನಕಲಿ ಕೀ ಮಾಡಿಸಿಟ್ಟುಕೊಂಡಿದ್ದ ಆರೋಪಿಗಳು, ಅವುಗಳನ್ನು ಬಳಸಿಕೊಂಡು ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಬಂಡೇಪಾಳ್ಯ, ವಿವೇಕನಗರ, ಇಂದಿರಾನಗರ, ಬನಶಂಕರಿ ಹಾಗೂ ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ದೆಹಲಿಯಿಂದ ವಿಮಾನದಲ್ಲಿ ಬಂದು ಚಿನ್ನಾಭರಣ ಕಳ್ಳತನ

ಬೆಂಗಳೂರು: ಆಭರಣ ಮಳಿಗೆಗಳಿಗೆ ಗ್ರಾಹಕರ ಸೋಗಿನಲ್ಲಿ ಭೇಟಿ ನೀಡಿ ಚಿನ್ನಾಭರಣ ಕದ್ದೊಯ್ಯುತ್ತಿದ್ದ ಆರೋಪಿ ರಾಹುಲ್ ಎಂಬುವರನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

'ದೆಹಲಿ ನಿವಾಸಿ ರಾಹುಲ್, ಬಿ.ಎಸ್ಸಿ ಪದವೀಧರ. ವಿಮಾನದ ಮೂಲಕ ಆಗಾಗ ನಗರಕ್ಕೆ ಬಂದು ಕಳ್ಳತನ ಮಾಡಿಕೊಂಡು ವಾಪಸು ಹೋಗುತ್ತಿದ್ದ. ಈತನನ್ನು ಬಂಧಿಸಿ 120 ಗ್ರಾಂ ಚಿನ್ನಾಭರಣ ಹಾಗೂ ₹7 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಹುಲ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕೆಲಸ ಹೋಗಿತ್ತು. ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಆತ, ಕಳ್ಳತನಕ್ಕೆ ಇಳಿದಿದ್ದ. ನಗರಕ್ಕೆ ಬರುತ್ತಿದ್ದ ಆರೋಪಿ, ಒಬ್ಬ ಅಥವಾ ಇಬ್ಬರು ಸಿಬ್ಬಂದಿ ಇರುವ ಮಳಿಗೆಗಳನ್ನು ಗುರುತಿಸುತ್ತಿದ್ದ. ಗ್ರಾಹಕರ ಸೋಗಿನಲ್ಲಿ ಮಳಿಗೆಗೆ ಭೇಟಿ ನೀಡಿ, ಚಿನ್ನಾಭರಣ ತೋರಿಸುವಂತೆ ಹೇಳುತ್ತಿದ್ದ. ಸಿಬ್ಬಂದಿ ಗಮನ ಬೇರೆಡೆ ಸೆಳೆದು, ಚಿನ್ನಾಭರಣ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದ' ಎಂದು ತಿಳಿಸಿವೆ.

ಪತ್ನಿ ಖಾತೆಗೆ ಹಣ ಜಮೆ: 'ಕದ್ದ ಆಭರಣಗಳನ್ನು ತ್ವರಿತವಾಗಿ ಮಾರಾಟ ಮಾಡುತ್ತಿದ್ದ ಆರೋಪಿ, ಬಂದ ಹಣವನ್ನು ಪತ್ನಿ ಖಾತೆಗೆ ಜಮೆ ಮಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನದಿಯಲ್ಲಿ ಮುಳುಗಿ ಯುವಕ ಸಾವು

ಹೊನ್ನಾಳಿ: ಬೆಂಗಳೂರಿನ 'ನಟರಾಜ್ ಎಂಟರ್‌ಟೇನರ್' ತಂಡದ ಗಿರೀಶ್ (32) ಶನಿವಾರ ನದಿಯಲ್ಲಿ ಸ್ನಾನಕ್ಕೆ ತೆರಳಿದ್ದಾಗ ನೀರಿನ ಸೆಳೆತಕ್ಕೆ ಸಿಲುಕಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕತ್ತಿಗೆ ಗ್ರಾಮದಲ್ಲಿ ಗ್ರಾಮ ವಾಸ್ತವ್ಯದ ಮುನ್ನಾ ದಿನವಾದ ಶುಕ್ರವಾರ ನೃತ್ಯ ಕಾರ್ಯಕ್ರಮ ನಡೆಸಿಕೊಡುವ ಸಲುವಾಗಿ ಗಿರೀಶ್ ಅವರು ಶುಕ್ರವಾರ ಬಂದಿದ್ದರು. ರಾತ್ರಿ ಕಾರ್ಯಕ್ರಮ ಮುಗಿಸಿದ ನಂತರ ಹೊನ್ನಾಳಿಯಲ್ಲಿರುವ ಪ್ರವಾಸಿ ಮಂದಿರದಲ್ಲಿ ತಂಗಿದ್ದರು. ಶನಿವಾರ ಮಧ್ಯಾಹ್ನ 6 ಜನರು ನದಿಗೆ ಸ್ನಾನಕ್ಕಾಗಿ ತೆರಳಿದ್ದರು. ಈ ವೇಳೆ ಗಿರೀಶ್ ಅವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಇವರ ಜತೆಗಿದ್ದ ಅರುಣ್ (21) ಅವರನ್ನು ರಕ್ಷಿಸಲಾಗಿದೆ.

ಫಲವನಹಳ್ಳಿಯಲ್ಲಿ ಶನಿವಾರ ಗ್ರಾಮ ವಾಸ್ತವ್ಯದ ನಿಮಿತ್ತ ನೃತ್ಯ, ರಸಮಂಜರಿ ನಡೆಸಿಕೊಡಬೇಕಿತ್ತು. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಪೋಷಕರು ಬಂದ ಬಳಿಕ ದೂರು ದಾಖಲಿಸಿಕೊಂಡು, ಶವವನ್ನು ಒಪ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬೆದರಿಸಿ ವೇಶ್ಯಾವಾಟಿಕೆ: ಮಹಿಳೆ ಸೆರೆ

ಪ್ರಜಾವಾಣಿ ವಾರ್ತೆ

ಎಸ್. ಮಂಜುಳಾ

ಬ್ರಹ್ಮೇಂದ್ರ

ಬೆಂಗಳೂರು: ಸಮಸ್ಯೆ ಪರಿಹರಿಸುವ ನೆಪದಲ್ಲಿ ಯುವತಿಯನ್ನು ಪರಿಚಯಿಸಿಕೊಂಡು ಕೊಲೆ ಬೆದರಿಕೆಯೊಡ್ಡಿ ವೇಶ್ಯಾವಾಟಿಕೆ ಜಾಲಕ್ಕೆ ತಳ್ಳಿದ್ದ ಆರೋಪದಡಿ ಮಧ್ಯವರ್ತಿ ಮಹಿಳೆ ಸೇರಿ ಮೂವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಸ್. ಮಂಜುಳಾ ಅಲಿಯಾಸ್ ಲಕ್ಷ್ಮಿ (37), ಬ್ರಹ್ಮೇಂದ್ರ (26) ಹಾಗೂ ಸಾಯಿ ಆರ್ಕೆಡ್ ವಸತಿಗೃಹದ ಮಾಲೀಕ ಸಂತೋಷ್ (32) ಬಂಧಿತರು. ವೇಶ್ಯಾವಾಟಿಕೆ ಜಾಲಕ್ಕೆ ಸಿಲುಕಿದ್ದ ಮಂಡ್ಯ ಜಿಲ್ಲೆಯ 25 ವರ್ಷದ ಯುವತಿಯನ್ನು ರಕ್ಷಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಾರಾಟ ಪ್ರತಿನಿಧಿ ಕೆಲಸ ಮಾಡುತ್ತಿರುವ ಯುವಕನನ್ನು ಪ್ರೀತಿಸುತ್ತಿದ್ದ ಯುವತಿ, ಅವರ ಜೊತೆ ಬೆಂಗಳೂರಿಗೆ ಬಂದಿದ್ದರು. ಕುಟುಂಬದವರ ವಿರೋಧದಿಂದ ವೈಯಕ್ತಿಕ ಸಮಸ್ಯೆಗಳು ಉಂಟಾಗಿತ್ತು. ಇವುಗಳನ್ನು ಪರಿಹರಿಸಲು ಸಹಾಯ ಮಾಡುವಂತೆ ಕೋರಿ ಹಲವರನ್ನು ಭೇಟಿಯಾಗಿದ್ದರು' ಎಂದೂ ತಿಳಿಸಿವೆ.

ವರದಿಗಾರ್ತಿ ಸೋಗಿನಲ್ಲಿ ಪರಿಚಯ: 'ತನ್ನ ಹೆಸರು ಲಕ್ಷ್ಮಿ ಎಂಬುದಾಗಿ ಹೇಳಿಕೊಂಡು ಯುವತಿಯನ್ನು ಪರಿಚಯಿಸಿಕೊಂಡಿದ್ದ ಆರೋಪಿ ಮಂಜುಳಾ, 'ನಾನು ಸುದ್ದಿ ವಾಹಿನಿಯೊಂದರ ವರದಿಗಾರ್ತಿ. ಮಾನವ ಹಕ್ಕುಗಳ ಸಂಘಟನೆಯಲ್ಲೂ ಸಕ್ರಿಯವಾಗಿದ್ದೇನೆ. ನಿನ್ನ ಸಮಸ್ಯೆಗಳನ್ನು ನಾನು ಪರಿಹರಿಸುತ್ತೇನೆ' ಎಂದಿದ್ದಳು. ಇದನ್ನು ಯುವತಿ ನಂಬಿದ್ದಳು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜಾಜಿನಗರದ ನವಭಾರತ ಸಂಘಟನೆ ಕಚೇರಿಗೆ ಯುವತಿಯನ್ನು ಕರೆದೊಯ್ದಿದ್ದ ಆರೋಪಿ, ಸಮಸ್ಯೆ ಪರಿಹಾರವಾಗುವವರೆಗೂ ಕಚೇರಿಯ ಕೊಠಡಿಯಲ್ಲೇ ಉಳಿಯುವಂತೆ ಹೇಳಿದ್ದಳು. ಅದಕ್ಕೂ ಯುವತಿ ಒಪ್ಪಿದ್ದರು. ಆಗಸ್ಟ್ 14ರಂದು ಯುವತಿಯನ್ನು ನಗರದ ಸಾಯಿ ಆರ್ಕೆಡ್ ವಸತಿಗೃಹಕ್ಕೆ ಕರೆದೊಯ್ದಿದ್ದ ಮಂಜುಳಾ, 'ನಾನು ಹೇಳಿದವರ ಜೊತೆ ಲೈಂಗಿಕವಾಗಿ ಸಹಕರಿಸಬೇಕು. ಇಲ್ಲದಿದ್ದರೆ, ಸುಮ್ಮನೇ ಬಿಡುವುದಿಲ್ಲ' ಎಂದು ಬೆದರಿಸಿದ್ದರು. ಹಲ್ಲೆ ಮಾಡಿ ಯುವತಿಯನ್ನು ಗ್ರಾಹಕರೊಬ್ಬರ ಬಳಿ ಕಳುಹಿಸಿದ್ದರು. ಬಳಿಕ ರೌಡಿಗಳು ಸೇರಿದಂತೆ ಹಲವರು, ಮೆಜೆಸ್ಟಿಕ್‌ನಲ್ಲಿರುವ ಕೆಲ ವಸತಿಗೃಹಗಳಲ್ಲಿ ಯುವತಿ ಮೇಲೆ ಅತ್ಯಾಚಾರ ಎಸಗಿರುವುದು ಗೊತ್ತಾಗಿದೆ. ಇನ್ನೊಬ್ಬ ಆರೋಪಿ ಬ್ರಹ್ಮೇಂದ್ರ, ಗ್ರಾಹಕರನ್ನು ಕರೆದುಕೊಂಡು ಬರುತ್ತಿದ್ದ. ಇಂಥ ಗ್ರಾಹಕರಿಂದ ಹಣ ಪಡೆದ ಮಂಜುಳಾ, ಯುವತಿ ಬಳಿ ಕಳುಹಿಸುತ್ತಿದ್ದಳು. ಬಂದ ಹಣವನ್ನು ಆರೋಪಿಗಳೇ ಹಂಚಿಕೊಳ್ಳುತ್ತಿದ್ದರು. ಮತ್ತೊಬ್ಬ ಆರೋಪಿ ಸಂತೋಷ್, ವಸತಿಗೃಹದಲ್ಲಿ ಕೊಠಡಿ ನೀಡಿ ಕೃತ್ಯಕ್ಕೆ ಸಹಕಾರ ನೀಡಿದ್ದ. ಮಂಜುಳಾ, ನಾನಾ ಹೆಸರು ಹೇಳುತ್ತಿದ್ದಳು. ಹಲವು ಯುವತಿಯರನ್ನು ವೇಶ್ಯಾವಾಟಿಕೆಗೆ ತಳ್ಳಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರಿಯಕರನ ಮೇಲೂ ಹಲ್ಲೆ'

'ಯುವತಿ ಮೇಲಾಗುತ್ತಿದ್ದ ದೌರ್ಜನ್ಯ ತಿಳಿದ ಪ್ರಿಯಕರ, ಆರೋಪಿಗಳನ್ನು ಪ್ರಶ್ನಿಸಿದ್ದ. ಸಿಟ್ಟಾದ ಆರೋಪಿಗಳು, ಪ್ರಿಯಕರನ ಮೇಲೂ ಹಲ್ಲೆ ಮಾಡಿದ್ದರು. ಗಾಯಗೊಂಡಿದ್ದ ಪ್ರಿಯಕರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತಿಭಟನೆ 'ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಗ್ರಾಚ್ಯುಯಿಟಿ ಸೌಲಭ್ಯಕ್ಕೆ ಅರ್ಹರೆಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಜಾರಿಗೆ ತರಬೇಕು. ಉಚಿತ ವೈದ್ಯಕೀಯ ಸೌಲಭ್ಯ, ಅವಲಂಬಿತರಿಗೆ ಉದ್ಯೋಗ ನೀಡಬೇಕು' ಎಂದು ಒತ್ತಾಯಿಸಿ ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಆಸ್ತಿಗಾಗಿ ಅಜ್ಜನನ್ನೇ ಕೊಂದ ಮೊಮ್ಮಗ

ಜಯಂತ್

ಯಾಸೀನ್

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸಿ. ಪುಟ್ಟಯ್ಯ (70) ಎಂಬುವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಮೊಮ್ಮಗ ಜಯಂತ್ ಅಲಿಯಾಸ್ ಬಳ್ಳೆ (20) ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

'ಸುರಭಿ ಬಡಾವಣೆಯ 2ನೇ ಮುಖ್ಯರಸ್ತೆಯ ನಿವಾಸಿ ಪುಟ್ಟಯ್ಯ ಅವರನ್ನು ಆಗಸ್ಟ್ 17ರಂದು ಕೊಲೆ ಮಾಡಲಾಗಿತ್ತು. ಹಣ ಹಾಗೂ ಚಿನ್ನಾಭರಣ ದೋಚಲೆಂದು ದುಷ್ಕರ್ಮಿಗಳು ಕೃತ್ಯ ಎಸಗಿರುವ ಸಂಶಯ ಆರಂಭದಲ್ಲಿತ್ತು. ತನಿಖೆ ಕೈಗೊಂಡಾಗ, ಮೊಮ್ಮಗನೇ ಕೊಲೆ ಆರೋಪಿ ಎಂಬುದು ಗೊತ್ತಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಪುಟ್ಟಯ್ಯ ಅವರ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಳ್ಳಲು ಜಯಂತ್ ಪ್ರಯತ್ನಿಸುತ್ತಿದ್ದ. ಇದಕ್ಕೆ ಪುಟ್ಟಯ್ಯ ಒಪ್ಪಿರಲಿಲ್ಲ. ಇದೇ ಕಾರಣಕ್ಕೆ ಇಬ್ಬರ ನಡುವೆ ಹಲವು ಬಾರಿ ಜಗಳವಾಗಿತ್ತು. ಇದರ ನಡುವೆಯೇ ಆರೋಪಿ ಜಯಂತ್, ಆಸ್ತಿ ಮೇಲೆ ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಮುಂದಾಗಿದ್ದ. ಅದಕ್ಕೂ ಪುಟ್ಟಯ್ಯ ಸಹಿ ಮಾಡಿರಲಿಲ್ಲ. ಅಜ್ಜ ಬದುಕಿದ್ದರೆ ತನಗೆ ಆಸ್ತಿ ಸಿಗುವುದಿಲ್ಲ ಎಂದುಕೊಂಡಿದ್ದ ಜಯಂತ್, ಹಾಸನದ ಗೊರೂರಿನ ಸ್ನೇಹಿತ ಯಾಸೀನ್ (22) ಜೊತೆ ಸೇರಿ ಕೊಲೆಗೆ ಸಂಚು ರೂಪಿಸಿ, ಪುಟ್ಟಯ್ಯ ಅವರನ್ನು ಕೊಂದು ಪರಾರಿಯಾಗಿದ್ದರು' ಎಂದು ಮೂಲಗಳು ತಿಳಿಸಿವೆ.

ಗೂಂಡಾ ಕಾಯ್ದೆ: 'ಸೂಪರ್ ಗುಂಡ' ಜೈಲಿಗೆ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜನರನ್ನು ಬೆದರಿಸುತ್ತಿದ್ದ ರೌಡಿ ರಾಕೇಶ್ ಅಲಿಯಾಸ್ ಸೂಪರ್ ಗುಂಡನನ್ನು (25) ರಾಜಗೋಪಾಲನಗರ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಿದ್ದಾರೆ.

'ಹೆಗ್ಗನಹಳ್ಳಿಯ ಐ.ಪಿ.ನಗರ ನಿವಾಸಿ ರಾಕೇಶ್ ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ. ರಾಜಗೋಪಾಲನಗರ ಠಾಣೆ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಎಚ್ಚರಿಕೆ ನೀಡಿದರೂ ಪರಿವರ್ತನೆ ಆಗಿರಲಿಲ್ಲ. ಹೀಗಾಗಿ, ಈತನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ. ಮುಂದಿನ ಒಂದು ವರ್ಷ ಈತ ಜೈಲುವಾಸ ಅನುಭವಿಸಲಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2013ರಿಂದ ಅಪರಾಧ ಕೃತ್ಯ ಎಸಗಲಾರಂಭಿಸಿದ್ದ ಈತ ಕೊಲೆ, ಸುಲಿಗೆ, ದರೋಡೆ, ಅಪಹರಣ, ಹಲ್ಲೆ, ಲೈಂಗಿಕ ದೌರ್ಜನ್ಯ ಸೇರಿದಂತೆ ಹಲವು ಕೃತ್ಯಗಳಲ್ಲಿ ಭಾಗಿಯಾಗಿದ್ದ. ಈತನ ವಿರುದ್ಧ ವಿಜಯನಗರ, ನಂದಿನಿ ಲೇಔಟ್, ಯಲಹಂಕ, ರಾಮನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದವು. ಕೆಲ ಪ್ರಕರಣಗಳಲ್ಲಿ ನ್ಯಾಯಾಲಯದ ವಿಚಾರಣೆಗೆ ಪದೇ ಪದೇ ಗೈರಾಗುತ್ತಿದ್ದ' ಎಂದು ತಿಳಿಸಿವೆ.

ಸಿ.ಎಂ ಗೃಹ ಕಚೇರಿಗೆ ನುಗ್ಗಿದ್ದ ಆರೋಪಿ ಬಂಧನ

ಪರಮೇಶ್ವರ

ಬೆಂಗಳೂರು: ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂಬುದಾಗಿ ಸುಳ್ಳು ಹೇಳಿಕೊಂಡು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗೃಹ ಕಚೇರಿ ಕೃಷ್ಣಾಗೆ ನುಗ್ಗಿದ್ದ ಆರೋಪದಡಿ ಪರಮೇಶ್ವರ (30) ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೀದರ್ ನಿವಾಸಿ ಪರಮೇಶ್ವರ, ನಕಲಿ ಗುರುತಿನ ಚೀಟಿ ತೋರಿಸಿ ಕೃಷ್ಣಾಗೆ ಅಕ್ರಮವಾಗಿ ಪ್ರವೇಶಿಸಿದ್ದ. ಅನುಮಾನಗೊಂಡ ಭದ್ರತಾ ಅಧಿಕಾರಿ ರಾಘವೇಂದ್ರ, ಹೆಚ್ಚಿನ ಪರಿಶೀಲನೆ ನಡೆಸಿದಾಗ ಆರೋಪಿ ಕೃತ್ಯ ಬಯಲಾಗಿದೆ. ರಾಘವೇಂದ್ರ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಗಸ್ಟ್ 17ರಂದು ಬೆಳಿಗ್ಗೆ ಕೃಷ್ಣಾಗೆ ಬಂದಿದ್ದ ಆರೋಪಿ ಪರಮೇಶ್ವರ, 'ನಾನು ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಕೃಷ್ಣಾದಲ್ಲಿ ನಡೆಯುವ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದೇನೆ' ಎಂದಿದ್ದ. ನಕಲಿ ಗುರುತಿನ ಚೀಟಿ ತೋರಿಸಿ, ಒಳಗೆ ಹೋಗಿದ್ದ.'

'ಸಿಬ್ಬಂದಿಗೆ ಆರೋಪಿ ನಡೆ ಬಗ್ಗೆ ಅನುಮಾನ ಬಂದಿತ್ತು. ಅವಾಗಲೇ ಹೆಚ್ಚಿನ ತಪಾಸಣೆ ನಡೆಸಿದ್ದರು. ಬಿಬಿಎಂಪಿಗೆ ಸಂಪರ್ಕಿಸಿದಾಗ ಪರಮೇಶ್ವರ ಎಂಬುವರು ಬಿಬಿಎಂಪಿಯಲ್ಲಿ ಯಾರೂ ಇಲ್ಲವೆಂದು ಅಧಿಕಾರಿಗಳು ಹೇಳಿದ್ದರು' ಎಂದು ತಿಳಿಸಿವೆ.

ವಂಚನೆ?: 'ಬಿಬಿಎಂಪಿ ಎಂಜಿನಿಯರ್ ಎಂಬುದಾಗಿ ಹೇಳಿಕೊಂಡು ಆರೋಪಿಯು ಹಲವರನ್ನು ಪರಿಚಯ ಮಾಡಿಕೊಂಡಿದ್ದ. ಮುಖ್ಯಮಂತ್ರಿ, ಸಚಿವರು ಹಾಗೂ ಅಧಿಕಾರಿಗಳು ಪರಿಚಯವೆಂದು ಹೇಳಿಕೊಂಡಿದ್ದನೆಂಬ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುಲಿಗೆಗೆ ಹೊಂಚು: ರೌಡಿ ಸೇರಿ ಮೂವರು ವಶಕ್ಕೆ

ಬೆಂಗಳೂರು: ಮಾರತ್‌ಹಳ್ಳಿ ಬಳಿಯ ದೇವರಬೀಸನಹಳ್ಳಿ ಸ್ಮಶಾನ ರಸ್ತೆಯಲ್ಲಿ ಮಾರಕಾಸ್ತ್ರ ಸಮೇತ ನಿಂತು ಸಾರ್ವಜನಿಕರ ಸುಲಿಗೆಗೆ ಹೊಂಚು ಹಾಕುತ್ತಿದ್ದ ರೌಡಿ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ರೌಡಿ ಕುಮಾರ್ ಹಾಗೂ ಆತನ ಸಹಚರರು ಶುಕ್ರವಾರ ಸಂಜೆ ಸುಲಿಗೆಗೆ ಹೊಂಚು ಹಾಕುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಲಾಗಿದೆ. ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ. ಇನ್ನೊಬ್ಬ ರೌಡಿ ಇರ್ಫಾನ್ ತಲೆಮರೆಸಿಕೊಂಡಿದ್ದಾನೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

RECRUITMENT FOR IAS ACADEMY
1. MARKETING EXECUTIVES CUM TELE CALLERS Preferably female, graduate, fluent in English, between 25 to 30 years with MS Office expertise
2. VISITING FACULTIES to teach General Studies I & II subjects and English for IAS/IPS aspirants (UPSC examination)
3. VISITING FACULTIES to teach Quantitative Aptitude, General Awareness, Reasoning & Computer Aptitude & English for Banking Competitive Examination aspirants (IBPS)
Interested candidates may send their resumes to email: ceo@vxplore.co.in before 31st August, 2022
IAS / IPS (UPSC) PRELIMS & MAINS COACHING
BANKING COMPETITIVE EXAMINATION (IBPS)
ADMISSION OPEN FOR 2023
KAS / PSI / SSC / LIC / RLY EXAMINATION COACHING
VXPLORE IAS ACADEMY
(A Unit of VXplore Consultants Pvt.Ltd)
#691, 1st Main, 11th Cross, 2nd Floor, Above Mayur Textiles Kengeri Satellite Town, Bangalore-560060
Visit website: vxploreias.in // vxplore.co.in
For more details please contact: 7259969007

REQUIREMENTS FOR the following Post Well Qualified persons in LT Control Panel field, 1). Tendering and Estimation Engineer- 1 No 2). Design Engineer-1 No. 3). Service Engineer- 1 No 4). Panel wiring Technician- 2 Nos. Contact: 9880219725

WANTED EXPERIENCED Sales Girls and Computer knowledge For Show Room, Around Rajajinagar Contact: 080- 23353406/ 9845359345

Graphic Designers

WORK FROM HOME Freshers good with canva + basic adobe photoshop, premiere and aftereffects jobs@eyesense.in

Accounts & Finance

REQD GRADUATES Fresher or Experienced Accounts and Admin. Location Bangalore. Send resume cv.goldrta@gmail.com. Immediate requirement.

WANTED: ACCOUNTANT/ Account Assistant FOR TRADING COMPANY at Jayanagar- Experience 4-7 years- Phone: 26632953/ 959/ rana@mentorsystems.co.in

WANTED CHARTERED Accountants, Commerce/Science Graduates, Auditors, Accountants and CA (Inter/ Final- Articles Completed). Apply Rangaraju and Associates, 503 & 504, Brigade Towers, Brigade Road, Bangalore. Contact: 7338454835 Email: nkrishnappa@rangaraju-associates.com, : rangaraju.associates@gmail.com

GRADUATES WITH commerce/ Science background with computer skill below 32 years. Freshers can apply. 9900263508/ 9900263509.

General

WANTED BACK OFFICE ASSISTANT With computer knowledge- F/M, FOR A CORPORATE RESELLER at Jayanagar- EXP 2-4 years- Phone- 26632953/ 959/ rana@mentorsystems.co.in

WANTED for Our Warehouse in BENGALURU
WARE HOUSE MANAGERS Any Degree with Exp. in Industrial Management for 10 years
WARE HOUSE SUPERVISOR (MALE) +2 or Any Degree with Computer Knowledge. Fresher can Apply.
ACCOUNTS ASSISTANT (Female) +2 or Any Degree with Computer Knowledge.
Kindly apply to : hr@archanastraderss.com
Call : 91500 93941

LADY ADVOCATE, Reqd. Skills: Kannada Reading, Title Verification Work, Registration, Property Law, Fresher preferred, Off: Sheshadripuram, 9:30AM to 6:30PM, Ph:080-23561811/ 9844034104/ 9141218400 (E-mail: dpshiva@gmail.com)

SHARANYA TELTRONICS requires Experienced SALES EXECUTIVES, TELEMARKETING EXECUTIVES, ACCOUNTANT and RECEPTIONIST. Call 9845010634

WANTED BSC/ DipMech/ Chemical/ Metallurgy Candidate SRI VIVEKANANDA RESEARCH Laboratories Peenya 2nd Stage: 9945371498/ 7760433054

OPPORTUNITY FOR Retired Officials,Bankers,NRI,Teachers, Professionals, Homemakers, CAs. Earn salary+ Incentives. CALL: 8095301555

Hospital & Medical Jobs

WANTED ICU Staff, OT Staff (Male) & Ward staff Nurses in Prashanth Hospital BSK 1st Stage Bengaluru-50 Cont: 080-26728862 /7619627287

Marketing & Sales

ESTABLISHED 45 year old Bangalore Engineering Sales Company in Fraser Town, with multiple imported products like Fuel Transfer pump and dispensers, Propellor Shafts, Railway Brake Cables, Slewing Rings and Spare Parts need SALES MANAGER age 45 to 52 years. To be technically and commercially experienced with ability to meet OEMs and Dealers, lead small Sales Team, generate new business, and handle correspondence. Will report to Chief Executive. Job involves travelling across India. Salary Rs.28,000 to 35,000 plus 2-wheeler allowance. Apply with details to- officestaffblr@gmail.com

EDULAMP PUBLICATIONS: Urgently Requires Business Development Executives (M/F) (Exp/ Freshers). Good Salary. Call: 9886888175, 9739736664.

SUFYAN DATES & Nuts requires Sales Managers & Sales Executive for Dry Fruits Retail Showrooms in Bangalore. Salary 12,000 to 24,000 based on experience. SSLC passed, Male/ Female, Age group 25 to 40 years. Contact: 9449507777, 8618784365

REQUIRED SALES Man/girl in Bangalore Mysore and Mangalore to Represent a Publishing Company in Mumbai. Contact 9833247045/ 8422998815/ 8097734775

WANTED MARKETING Executive fresher/ expd. with excellent communication skills in English and local languages for a company at Koramangala. Interested candidates can Contact: 9535012765. Email: conts.blr@gmail.com

BUSINESS EXECUTIVE (Male) TELECALLER (Female) with Good English, Computer Skills For Advertising Company, Basveswarnagar: 9845411113

Multiple Vacancy

WANTED 1) Marketing executive with Diploma/ B.E/ MBA 2) Accounts cum Admin Executive with BCom/ BA/ M.Com/ MBA 3) Production Engineers with BE/ ME/ MTech 4) Electrician with minimum 3 to 5 yrs experience for a Company located in Bommanahalli, near HSR Layout, Bangalore-68. Age limit: within 35 yrs. Salary Rs.25,000 to Rs.30,000. Send CV to uppbangalore@gmail.com Contact: 9449817703

COLLEGE CATERING unit in Bangalore Requires Manager, Supervisor, Kitchen Staffs, Dishwasher (Male). Contact: 9738854156 / 09566656520 Email:hr@sakthiskitchen.com

LOOKING FOR A Manager/ Cashier/ technician for a Gaming/ Arcade zone in a Reputed mall in Hoskote. Salary based on qualification and experience. Contact: 9900097681.

Engg/ Production Technical

WANTED ITI,ELECTRICIAN and FITTER with minimum 1-2 years Experience for MOTOR,GENERATOR Repair Company in Bangalore. Contact:8618806762 (10am to 6pm)

Situation Required

WANTED SALES REPRESENTATIVES (for sale of Purva Strong TMT & Purva Steel Pipes & Tubes)
OFFICE ASSISTANTS
CAR DRIVERS
Location: Bangalore
Email ID: accounts@shivaferric.com
Contact No: 9480024697

Teachers/ Professors

WANTED SOCIAL Science, Hindi, P.E.T, English Teachers and Academic Head. Primary/ High School J.P.Nagar 3rd: -9845042249, 9916454164, 080-26590773.

REQUIRED ASSOCIATE professors / Professors in Community Medicine and Obstetrics & Gynaecology (OBG) Contact : Dr. A.L. Patil - 9731612344, 9448118489 Principal / Director Anuradha Homoeopathic Medical College & Hospital, Srigandha Nagar, Near Hegganhalli Cross Bangalore- 560091

WANTED TRAINED NURSERY & COMPUTER Teachers for class 1 to 10. MOOKAMBIKA SCHOOL, NR. Colony. Email: mookambikaschool.nr@gmail.com Contact 93435-31234

SURYODAYA NATIONAL Public School Rajanukunte Yelahanka Taluk Bengaluru-560064 Requires Science teacher for high school Email- srr305@gmail.com Contact- 7888906916

URGENTLY REQUIRED experienced FEMALE-TEACHERS for all subjects except kannada for WISDOM INTERNATIONAL SCHOOL, Richmond Town. A teacher with multiple subject handling credential is preferred. Walk-in interview immediately. Contact: 7676709640, 9900723904.

WANTED TRAINED PET TEACHER, CLERK CUM RECEPTIONIST AND PART-TIME COMPUTER SCIENCE LECTURER. Contact:- PRINCIPAL 'STRACEY MEMORIAL COMPOSITE PU COLLEGE' #52, St.Mark's Road Bangalore-1 Mobile:9482557710

"WANTED LADY English, Social,Hindi, Computer Teachers,Office Staff,"Holy Faith Public School" AMS-Layout, Vidyaranyapura, Bangalore-97. 9035466569/ 8548920685"

ENGLISH, SOCIAL Science, Hindi TEACHERS middle/ high school English medium Yeshwantpur Bengaluru. WhatsApp resume: 8088201545.

SRI.RAMAKRISHNA EDUCATION Society, Halasuru Requires TEACHERS BSc/MSc (CBZ),BEd 8861248642/ 9845048824 Mail: srkes1963@gmail.com

WANTED TEACHERS for proposed Day Care/ Montessory Educational Centre Vidyaranyapura/ Jalahally/ Mathikera area. Contact 9845182814.

EDUCATION CORNER

Nursery Teacher Training Course
NTT / MTT : Nursery & Montessori Teacher Training
6 Months Course, Online & Offline Classes Available
Work in any ICSE, CBSE & State Board Schools
• Eligibility: 10th / 12th / Any graduate
• 100% Placement assistance
New Batch Starting...
Branches at Vijaynagar, Rajajinagar, Jayanagar, Indiranagar, Yelahanka, Ullal Rd., Bommasandra, Tumkuru, Doddaballapura, Channapatna
NIECCE NATIONAL INSTITUTE OF EARLY CHILD CARE & EDUCATION
9886855700 8095811112
Certificate issued by N.I.E.C.C.E. (Regd. Govt. of India)

REQUIRED
KAIRALEE NIKETHAN EDUCATION TRUST
Administrator: MBA in School Management minimum 10yrs experience in managing schools. Kannada knowledge compulsory. Retired Directors of Education/ Retired Principals can also apply. (Age limit up to 65 years)
PRIMARY SCHOOL / MIDDLE SCHOOL (Indiranagar campus)
Head Mistress: Post Graduate with B.Ed (5 to 10 years of experience)
Hindi Teacher- B.A, B.Ed
Admin Coordinator/ Office Assistant- Experience to handle School & College office work. Qualification B.Com with Computer proficiency. Knowledge of Kannada essential.
(Doddabommasandra campus, Vidyaranyapura and Indiranagar campus)
Apply within 7 days from the date of publication
To The Secretary, Kairalee Nikethan Education Trust, 5th Main, 9th Cross, Indiranagar 1st Stage, Bangalore - 560 038.
080 - 25256754/ 09535800165 knetrustinstitutions@gmail.com

WANTED TEACHERS with BA/MA (Eng, Hindi and SS) with BEd, BCA/MCA. Salary 14000 to 25000. Contact Sidhartha International School, Peenya, Dasarahalli. Contact No. 9620100046, 9964670328.

PRE-PRIMARY TRAINED TEACHERS(NTT), PRIMARY HINDI, KANNADA, ART AND CRAFT FRONT OFFICE EXECUTIVES. FRANK PUBLIC SCHOOL. 6thPhase JP.Nagar 9731910479 frankoffice127@gmail.com

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

ರೈತ ಉತ್ಪಾದಕರ ಸಂಸ್ಥೆಗಳ, ರಫ್ತುದಾರರ ಸಮಾವೇಶದಲ್ಲಿ ಸಚಿವ ಬಿ.ಸಿ. ಪಾಟೀಲ ಹೇಳಿಕೆ

ರಾಜ್ಯದ 5 ಕಡೆ ರಫ್ತು ಉದ್ಯಮ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಆದಾಯ ದ್ವಿಗುಣಗೊಳಿಸುವ ಉದ್ದೇಶದಿಂದ ರಾಜ್ಯದ ಐದು ಕಡೆ ರಫ್ತು ಉದ್ಯಮ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ಜಲಾನಯನ ಅಭಿವೃದ್ಧಿ ಇಲಾಖೆ, ಕೆಪೆಕ್ ಹಾಗೂ ಅಪೆಡಾ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ರೈತ ಉತ್ಪಾದಕರ ಸಂಸ್ಥೆಗಳ ಹಾಗೂ ರಫ್ತುದಾರರ ಸಮಾವೇಶ' ಉದ್ಘಾಟಿಸಿ ಅವರು ಮಾತನಾಡಿದರು. 'ಮೊದಲ ಹಂತದಲ್ಲಿ ವಿಜಯಪುರ ಜಿಲ್ಲೆಯ ಇಂಡಿ, ಹಾವೇರಿಯ ಹುನುಮನಮಟ್ಟಿ, ಮೈಸೂರಿನ ನಾಗೇನಹಳ್ಳಿ, ಚಿಕ್ಕಬಳ್ಳಾಪುರದ ವರದಗೇರಾ ಮತ್ತು ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಉದ್ಯಮ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದು ಮಾಹಿತಿ ನೀಡಿದರು.

ನಗರದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಸಮಾವೇಶವನ್ನು ಕೃಷಿ ಸಚಿವ ಬಿ.ಸಿ. ಪಾಟೀಲ ದೀಪ ಬೆಳಗುವ ಮುಖಾಂತರ ಉದ್ಘಾಟಿಸಿದರು. ಕೃಷಿ ಇಲಾಖೆ ಆಯುಕ್ತ ಬಿ.ಶರತ್, ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್ ರಾಜೇಂದ್ರ ಪ್ರಸಾದ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಸಿ. ಕಳಸದ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್ ಇದ್ದರು —ಪ್ರಜಾವಾಣಿ ಚಿತ್ರ

'ರಾಜ್ಯದಲ್ಲಿ 1 ಹೆಕ್ಟೇರ್‌ಕ್ಕಿಂತ ಕಡಿಮೆ ಭೂಮಿ ಹೊಂದಿರುವ 69 ಲಕ್ಷ ರೈತರಿದ್ದಾರೆ. ಅವರು ಬೆಳೆದಂತಹ ಬೆಳೆಯನ್ನು ರಫ್ತು ಮಾಡುವ ಶಕ್ತಿಯಿಲ್ಲ. ಆದ್ದರಿಂದ ರೈತರ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳಲ್ಲಿ ಸೇರಿಕೊಂಡು, ಬೆಳೆದಂತಹ ಉತ್ಪನ್ನಗಳ ಲಭ್ಯತೆ, ವಿಂಗಡಣೆ, ಶ್ರೇಣೀಕರಣ, ಮೌಲ್ಯವರ್ಧನೆ, ಮಾಡಿಕೊಂಡು ಮಾರುಕಟ್ಟೆ ಸೃಷ್ಟಿಸಿಕೊಂಡು ಹೆಚ್ಚಿನ ಆದಾಯ ಗಳಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಕೃಷಿ ಇಲಾಖೆ ಸ್ಥಾಪಿಸಿರುವ ಕೆಪೆಕ್, ರೈತರು ಮತ್ತು ಗ್ರಾಹಕರ ಮಧ್ಯ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಹಳ್ಳಿಯಲ್ಲಿ ಬೆಳೆದ ಉತ್ಪನ್ನಗಳನ್ನು ದಿಲ್ಲಿ ಸೇರಿದಂತೆ ವಿದೇಶಗಳಲ್ಲಿ ಮಾರಾಟ ಮಾಡಬಹುದು. ರಾಜ್ಯದಲ್ಲಿ 1100 ರೈತ ಉತ್ಪಾದಕ ಸಂಸ್ಥೆಗಳಿವೆ. ಇದರಲ್ಲಿ 11 ಲಕ್ಷ ರೈತರು ಸದಸ್ಯರಿದ್ದಾರೆ' ಎಂದು ಹೇಳಿದರು.

10 ಲೀಟರ್ ಡೀಸೆಲ್‌ಗೆ ₹225 ಸಬ್ಸಿಡಿ

ರೈತ ಶಕ್ತಿ ಹೆಸರಿನಲ್ಲಿ ಈ ವರ್ಷದಿಂದ ರೈತರು ಬಳಸುವ ಟ್ರ್ಯಾಕ್ಟರ್‌ಗೆ ಡೀಸೆಲ್ ಸಬ್ಸಿಡಿ ನೀಡಲಾಗುತ್ತಿದೆ. 1 ಎಕರೆಗೆ 10 ಲೀಟರ್‌ಗೆ ₹225ರಂತೆ ಐದು ಎಕರೆಗೆ ₹1,250 ರೂ ಸಬ್ಸಿಡಿ ನೀಡಲಾಗುತ್ತಿದೆ. ಐದು ಎಕರೆವರೆಗೆ ಜಮೀನು ಹೊಂದಿರುವ ರೈತರಿಗಷ್ಟೆ ಇದು ಅನ್ವಯವಾಗಲಿದೆ ಎಂದು ಪಾಟೀಲ ತಿಳಿಸಿದರು.

ಅಂಬಾನಿ, ಅದಾನಿ, ಟಾಟಾ, ಬಿರ್ಲಾ ಇವರ್‍ಯಾರಿಗೂ ಅನ್ನ ಕೊಡುವ ತಾಕತ್ತಿಲ್ಲ. ಅದು ದೇಶದ ರೈತರಿಂದ ಮಾತ್ರ ಸಾಧ್ಯ

ಬಿ.ಸಿ ಪಾಟೀಲ, ಕೃಷಿ ಸಚಿವ

'ಪ್ರಾಮಾಣಿಕರಿಗೆ ಮಾತ್ರ ಧೈರ್ಯ'

ಹೈಕೋರ್ಟ್ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಮಾಣಿಕತೆ ಹಾಗೂ ಪಾರದರ್ಶಕತೆ ಇರುವವರಿಗೆ ಅಷ್ಟೇ ಧೈರ್ಯ, ಎದೆಗಾರಿಕೆ ಇರುತ್ತದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ವತಿಯಿಂದ ಆಯೋಜಿಸಿದ್ದ ರಾಜ್ಯಸಭಾ ಸದಸ್ಯ, ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರ 'ಜಸ್ಟಿಸ್ ಫಾರ್ ದಿ ಜಡ್ಜ್' ಕೃತಿಯ ಚರ್ಚಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಂಜನ್ ಗೊಗೊಯಿ ಅವರು ಎಲ್ಲ ಒತ್ತಡಗಳನ್ನು ಸಮರ್ಥವಾಗಿ ಎದುರಿಸಿ, ಹಲವು ಐತಿಹಾಸಿಕ ಪ್ರಕರಣಗಳಲ್ಲಿ ಉತ್ತಮ ತೀರ್ಪುಗಳ ಮೂಲಕ ನ್ಯಾಯದಾನ ಮಾಡಿರುವುದು ಶ್ಲಾಘನೀಯ. ಬೆದರಿಕೆಗೆ ಅಳುಕದೆ ಧೈರ್ಯವಾಗಿ ನ್ಯಾಯ ಎತ್ತಿ ಹಿಡಿಯುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ' ಎಂದರು.

'ಶುದ್ಧವಾಗಿದ್ದರೆ ಅದ್ಭುತ ಕೆಲಸ ಮಾಡಬಹುದು. ಭ್ರಷ್ಟಾಚಾರ ಉತ್ತಮ ಆಡಳಿತವನ್ನು ಕುಗ್ಗಿಸುವುದರ ಜೊತೆಗೆ ಅದು ಕ್ಯಾನ್ಸರ್‌ಗಿಂತಲೂ ಅಪಾಯಕಾರಿ' ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ವತಿಯಿಂದ ಆಯೋಜಿಸಿದ್ದ ರಾಜ್ಯಸಭಾ ಸದಸ್ಯ, ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರ 'ಜಸ್ಟಿಸ್ ಫಾರ್ ದಿ ಜಡ್ಜ್' ಕೃತಿಯ ಚರ್ಚಾ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್, ಪ್ರೊ.ಎಸ್‌.ಎಂ.ಜಯಕರ, ಪ್ರೊ.ಕೊಟ್ರೇಶ್, ಪ್ರೊ.ಸುರೇಶ್ ವಿ. ನಾಡಗೌಡರ ಕೃತಿ ಪ್ರದರ್ಶಿಸಿದರು

ಬೆಂಗಳೂರು ವಿ.ವಿ ಕುಲಪತಿ ಪ್ರೊ. ಜಯಕರ ಮಾತನಾಡಿ, ಪ್ರಾಮಾಣಿಕತೆ ಹಾಗೂ ಧೈರ್ಯವಿದ್ದವರು ಆತ್ಮಚರಿತ್ರೆ ಸ್ಪಷ್ಟವಾಗಿ ಬರೆಯುತ್ತಾರೆ. ಈ ಪುಸ್ತಕ ಕಾನೂನು ವಿದ್ಯಾರ್ಥಿಗಳಿಗೆ, ವಕೀಲರಿಗೆ, ನ್ಯಾಯಾಧೀಶರಿಗೆ ಅನುಕೂಲ. ಪ್ರತಿಯೊಬ್ಬರೂ ಸ್ವಾರ್ಥರಹಿತವಾಗಿ ಕೆಲಸ ನಿರ್ವಹಿಸಿದರೆ ದೇಶವು ಪ್ರಗತಿ ಸಾಧಿಸಲಿದೆ ಎಂದರು.

'ನ್ಯಾಯ ಚೌತಲ್ ಸಂಘಟನೆ'ಯ ಮುಖ್ಯಸ್ಥ ರಾಘವೇಂದ್ರ ಅವರು, 'ಆಂತರಿಕ ಹಾಗೂ ಬಾಹ್ಯ ಬೆದರಿಕೆಗಳಿಗೆ ಲೆಕ್ಕಿಸದೇ ನಿಸ್ವಾರ್ಥ ತೀರ್ಪುಗಳನ್ನು ನೀಡುವುದು ಅಷ್ಟು ಸುಲಭದ ವಿಚಾರ ಅಲ್ಲ. ಅದನ್ನು ನ್ಯಾಯಮೂರ್ತಿಗಳು ಉತ್ತಮವಾಗಿ ತಮ್ಮ ನಾಯಕತ್ವದಲ್ಲಿ ನಿರ್ವಹಿಸಿರುವುದು ಶ್ಲಾಘನೀಯ' ಎಂದು ತಿಳಿಸಿದರು.

ಕುಲಸಚಿವ ಪ್ರೊ.ಕೊಟ್ರೇಶ್, ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಸುರೇಶ್ ವಿ. ನಾಡಗೌಡರ, ಪ್ರೊ.ಎನ್.ದಶರಥ್, ಸಹ ಪ್ರಾಧ್ಯಾಪಕ ಡಾ.ಎನ್. ಸತೀಶ್‌ಗೌಡ ಉಪಸ್ಥಿತರಿದ್ದರು.

ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ರಾಜ್ಯಮಟ್ಟದ ಪ್ರಶಸ್ತಿಯನ್ನು ಮಂಗಳೂರಿನ ಡಾ. ಅಣ್ಣಯ್ಯ ಕುಲಾಲ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಪ್ರದಾನ ಮಾಡಿದರು. ಶಾಸಕರಾದ ಪಿ. ರಾಜೀವ್, ಕುಮಾರ ಬಂಗಾರಪ್ಪ, ಹರತಾಳು ಹಾಲಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ತಿನ ಸದಸ್ಯೆ ಹೇಮಲತಾ ನಾಯಕ್ ಇದ್ದರು – ಪ್ರಜಾವಾಣಿ ಚಿತ್ರ

ಅರಸು ರೂಪಿಸಿದ ನೀತಿಗಳು ಅನನ್ಯ: ನರೇಂದ್ರಬಾಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಾಜ ಅರಸು ಅವರು ರೂಪಿಸಿದ ಆರ್ಥಿಕ ನೀತಿ, ಸಾಮಾಜಿಕ ನ್ಯಾಯದ ನಿಯಮಗಳು ಇಂದಿಗೂ ಪರಿಣಾಮಕಾರಿಯಾಗಿ ಮುಂದುವರಿದಿವೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ನೆ.ಲ.ನರೇಂದ್ರ ಬಾಬು ಸ್ಮರಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘ ಶನಿವಾರ ಹಮ್ಮಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೂರ ದೃಷ್ಟಿ, ಇಚ್ಛಾಶಕ್ತಿ ಹೊಂದಿದ್ದ ಅವರ ಕ್ರಾಂತಿಕಾರಕ ನಿರ್ಧಾರಗಳ ಫಲವಾಗಿ ಹಿಂದುಳಿದ ವರ್ಗಗಳ ಸಾವಿರಾರು ಜನರು ಬದುಕು ರೂಪಿಸಿಕೊಂಡಿದ್ದಾರೆ. ರಾಜಕೀಯ ಪಲ್ಲಟಗಳಲ್ಲೂ ತಮ್ಮ ದೃಢ ನಿರ್ಧಾರಗಳಿಂದ ಹಿಂದೆ ಸರಿಯಲಿಲ್ಲ ಎಂದು ಅವರ ಜತೆಗಿನ ಒಡನಾಟ ಮೆಲುಕು ಹಾಕಿದರು.

ಸಂಘದ ಅಧ್ಯಕ್ಷ ಸುರೇಶ್ ಎಂ. ಲಾತೂರ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಜೆ.ಶ್ರೀನಿವಾಸನ್, ಸಂಘದ ಪ್ರಮುಖರಾದ ಕೆ.ಜಿ. ಶಿವಣ್ಣ, ಗಣಪತಿ ನಾಯ್ಕ್ ಉಪಸ್ಥಿತರಿದ್ದರು.

'ಬಿಜೆಪಿಯಿಂದ ದೇಶ ಇಬ್ಭಾಗಕ್ಕೆ ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ದೇಶವನ್ನು ಇಬ್ಭಾಗ ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಕಾರ್ಯಕ್ರಮದ ಮೂಲಕ ದೇಶವನ್ನು ಒಗ್ಗೂಡಿಸಲು ಮುಂದಾಗಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ 21 ದಿನ ಭಾರತ್ ಜೋಡೋ ಪಾದಯಾತ್ರೆ ನಡೆಯಲಿದೆ. ಒಂದೊಂದು ಜಿಲ್ಲೆಗೆ ಒಂದೊಂದು ದಿನ ನಿಗದಿ ಮಾಡಲಿದ್ದು, ಆ ಜಿಲ್ಲೆಯವರು ರಾಹುಲ್ ಗಾಂಧಿ ಅವರ ಜತೆ ಹೆಜ್ಜೆ ಹಾಕಲಿದ್ದಾರೆ' ಎಂದರು.

'ರಾಜ್ಯದಲ್ಲಿ ದೇವರಾಜ ಅರಸು ಅವರ ಭೂ ಸುಧಾರಣಾ ಕಾಯ್ದೆ ಆಧರಿಸಿ ಇಂದಿರಾ ಗಾಂಧಿ ಅವರು ದೇಶದಲ್ಲಿ ಬಡವರಿಗೆ ಭೂಮಿ ಹಂಚಲು ನಿರ್ಧರಿಸಿದರು. ಆಗ ರಾಜ್ಯದಲ್ಲಿ ಎಂಟು ಲಕ್ಷ ಜನರಿಗೆ ಭೂಮಿ ಹಂಚಲಾಯಿತು. ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡುವ ಮೂಲಕ ದೇಶದ ಆರ್ಥಿಕತೆಗೆ ಉತ್ತೇಜನ ತುಂಬಿದರು. ಉದ್ದಿಮೆದಾರರಿಂದ ರೈತರವರೆಗೂ ಎಲ್ಲರಿಗೂ ಸಾಲ ಸೌಲಭ್ಯ ಸಿಗುತ್ತಿದೆ ಎಂದರೆ ಅದಕ್ಕೆ ಬ್ಯಾಂಕುಗಳ ರಾಷ್ಟ್ರೀಕರಣ ಕಾರಣ' ಎಂದು ಹೇಳಿದರು.

'ಮತದಾನದ ವಯಸ್ಸು ಇಳಿಕೆ ಮಾಡುವ ವಿಚಾರ ಸಂಸತ್ತಿನಲ್ಲಿ ಚರ್ಚೆಯಾಗುತ್ತಿದ್ದಾಗ ಬಿಜೆಪಿಯವರು ವಿರೋಧ ವ್ಯಕ್ತಪಡಿಸಿದ್ದರು. ಆಗ ರಾಜೀವ್ ಗಾಂಧಿ, ನಾವು 16 ವರ್ಷದ ಯುವಕರನ್ನು ಸೇನೆಗೆ ಆಯ್ಕೆ ಮಾಡಿ ಗಡಿಯಲ್ಲಿ ದೇಶದ ಗಡಿ ಕಾಯಲು ಬಂದೂಕು ಕೊಟ್ಟಿರುವಾಗ, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಅವರನ್ನು ನಂಬಬಾರದೆ? ನನಗೆ ನಮ್ಮ ಯುವಕರ ಮೇಲೆ ನಂಬಿಕೆ ಇದೆ ಎಂದಿದ್ದರು' ಎಂದರು.

ಕರ್ನಾಟಕ ಸರ್ಕಾರ ಹಾಗೂ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ

ಸನ್ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿಯಲ್ಲಿ
ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ
ನಾಗರಭಾವಿ ವಾರ್ಡ್‌ನಲ್ಲಿ
ಅಂದಾಜು ರೂ. 9 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ
"ಕನಕ ಭವನ"
ಉದ್ಘಾಟನೆ ಮತ್ತು ಅಂದಾಜು ರೂ. 6 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ
ವಿವಿಧ ಕಟ್ಟಡಗಳ
ಉದ್ಘಾಟನೆ ಹಾಗೂ ಶಂಕುಸ್ಥಾಪನೆ

ದಿವ್ಯ ಸಾನಿಧ್ಯ
ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಗಳು
ಪೀಠಾಧ್ಯಕ್ಷರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಮಠ

ಸಾನಿಧ್ಯ
ಶ್ರೀ ಶ್ರೀ ಶ್ರೀ ಈಶ್ವರಾನಂದಪುರಿ ಸ್ವಾಮೀಜಿಗಳು
ಪೀಠಾಧ್ಯಕ್ಷರು, ಹೊಸದುರ್ಗ ಶಾಖಾ ಮಠ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

2925 ಚದರ ಮೀಟರ್ ವಿಸ್ತೀರ್ಣದಲ್ಲಿ ಮೂರು ಅಂತಸ್ತಿನ ಕನಕ ಭವನವು ಸಭಾಂಗಣ ಕೊಠಡಿ, ವಿದ್ಯಾರ್ಥಿಗಳ ಕೊಠಡಿಗಳು, ಗ್ರಂಥಾಲಯ, ಸಮ್ಮೇಳನ ಸಭಾಂಗಣಗಳು, ಸಭಾ ಕೊಠಡಿ, ಉಪನ್ಯಾಸಕರ ಕೊಠಡಿಗಳು ಒಳಗೊಂಡಿವೆ.



ಅಗ್ರಹಾರ ದಾಸರಹಳ್ಳಿ ವಾರ್ಡ್‌ನಲ್ಲಿ ನಿರ್ಮಿಸಿರುವ "ಪ್ರಾಥಮಿಕ ಆರೋಗ್ಯ ಕೇಂದ್ರ"ದ ಉದ್ಘಾಟನೆ

ಚಂದ್ರಾಲೇಔಟ್ ವಾರ್ಡ್‌ನಲ್ಲಿ ನಿರ್ಮಿಸಿರುವ "ಪ್ರಾಥಮಿಕ ಆರೋಗ್ಯ ಕೇಂದ್ರ"ದ ಉದ್ಘಾಟನೆ

ನಾಯಂಡಹಳ್ಳಿ ವಾರ್ಡ್‌ನ ಪಂತರಪಾಳ್ಯದಲ್ಲಿ ನಿರ್ಮಿಸಿರುವ "ವಾರ್ಡ್ ಕಛೇರಿ" ಉದ್ಘಾಟನೆ

ಚಂದ್ರಾಲೇಔಟ್ ವಾರ್ಡ್‌ನಲ್ಲಿ "ವಸತಿ ನಿಲಯ ಕಟ್ಟಡ"ದ ಶಂಕುಸ್ಥಾಪನೆ

ಹಾಗೂ ನಾಯಂಡಹಳ್ಳಿ ವಾರ್ಡ್‌ನ ಪಂತರಪಾಳ್ಯದಲ್ಲಿ ನಿರ್ಮಿಸಿರುವ "ಅಂಗನವಾಡಿ ಕೇಂದ್ರ"ದ ಉದ್ಘಾಟನೆ

ದಿನಾಂಕ: 21ನೇ ಆಗಸ್ಟ್ 2022, ಸಂಜೆ 5.00 ಗಂಟೆಗೆ
ಸ್ಥಳ: 10ನೇ ಅಡ್ಡರಸ್ತೆ, ಚಂದ್ರಾಲೇಔಟ್ 2ನೇ ಹಂತ, ನಾಗರಭಾವಿ ವಾರ್ಡ್, ಗೋವಿಂದರಾಜನಗರ, ಬೆಂಗಳೂರು

ಉದ್ಘಾಟನೆ:
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಅಧ್ಯಕ್ಷತೆ:
ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ

ಜ್ಯೋತಿ ಬೆಳಗಿಸುವವರು
ಶ್ರೀಮತಿ ನಿರ್ಮಲಾ ಸೀತಾರಾಮನ್ — ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ — ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ
ಶ್ರೀ ಆರ್. ಅಶೋಕ್ — ಮಾನ್ಯ ಕಂದಾಯ ಸಚಿವರು
ಶ್ರೀ ಕೋಟ ಶ್ರೀನಿವಾಸ್ ಪೂಜಾರಿ — ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) — ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಬಿ.ಎ. ಬಸವರಾಜ — ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎನ್. ಮುನಿರತ್ನ — ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ಕೆ. ಗೋಪಾಲಯ್ಯ — ಮಾನ್ಯ ಅಬಕಾರಿ ಸಚಿವರು
ಶ್ರೀ ತೇಜಸ್ವಿ ಸೂರ್ಯ — ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ದಕ್ಷಿಣ ಕ್ಷೇತ್ರ

ಮುಖ್ಯ ಅತಿಥಿಗಳು
ಡಾ|| ಸಿ.ಎನ್. ಅಶ್ವತ್ಥ ನಾರಾಯಣ — ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ — ಮಾನ್ಯ ಸಹಕಾರ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್ — ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ,
ಶ್ರೀ ಎಂ. ಕೃಷ್ಣಪ್ಪ — ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಸತೀಶ್ ರೆಡ್ಡಿ — ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ — ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನಪರಿಷತ್)
ಶ್ರೀ ಜೈರಾಮ್ ರಮೇಶ್ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಗ್ಗೇಶ್ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಲೇಹರ್ ಸಿಂಗ್ ಸಿರೋಯಾ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ — ಮಾನ್ಯ ಸಂಸದರು (ರಾಜ್ಯಸಭೆ)
ಡಾ|| ಎಲ್. ಹನುಮಂತಯ್ಯ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ — ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಪುಟ್ಟಣ್ಣ — ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಟಿ.ಎ. ಶರವಣ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಕೆ. ಗೋವಿಂದರಾಜ್ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ.ಆರ್. ರಮೇಶ್ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ — ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಮುನಿರಾಜು ಗೌಡ. ಪಿ.ಎಂ (ತುಳಸಿ) — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಂ. ನಾಗರಾಜು — ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಸ್. ಕೇಶವ ಪ್ರಸಾದ್ — ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ರವರು ಅಧಿಕಾರಿಯವರೊಂದಿಗೆ ಕಾಮಗಾರಿಯ ಬಗ್ಗೆ ಚರ್ಚಿಸುತ್ತಿರುವುದು.

ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು–02

ರಾಕೇಶ್ ಸಿಂಗ್, ಭಾ.ಆ.ಸೇ
ಆಡಳಿತಾಧಿಕಾರಿ, ಬಿಬಿಎಂಪಿ

ತುಷಾರ್ ಗಿರಿ ನಾಥ್, ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

ಕಾರ್ಯಕ್ರಮ ನಡೆಯುವ ಸ್ಥಳದ ವಿಳಾಸವನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಡೆಯಬಹುದು

ನೆರೆ ಹೋದರೂ ತೀರದ ಬವಣೆ

ಒಂದನೇ ಪುಟದಿಂದ

ಹಳೆಯಿರುಬಾಲೂರು ಗ್ರಾಮ ನವನಗರಕ್ಕೆ ಸ್ಥಳಾಂತರವಾಗಿದೆ. ಆದರೆ ಈಗಲೂ ಅಲ್ಲಿಯ 13 ಕುಟುಂಬಗಳು ಸರ್ಕಾರಿ ಕಟ್ಟಡಗಳಲ್ಲಿಯೇ ವಾಸವಾಗಿವೆ. ಮನೆ ಇಲ್ಲದ ಕಾರಣ ನಿರಾಶ್ರಿತರು ಇಲಾಖೆ ಕಟ್ಟಡಗಳಲ್ಲಿ ವಾಸಿಸುತ್ತಿರುವ ಇವರು, ಗ್ರಾಮ ಪಂಚಾಯಿತಿಯವರು ಮನೆಗಳನ್ನು ನಿರ್ಮಿಸಿಕೊಟ್ಟ ತಕ್ಷಣ ಅಲ್ಲಿಗೆ ತೆರಳುವುದಾಗಿ ತಿಳಿಸುತ್ತಾರೆ. 'ಮೂರು ವರ್ಷಗಳಿಂದ ನಿರಾಶ್ರಿತರಾಗಿದ್ದೇವೆ. ಸರ್ಕಾರ ಮನೆ ನಿರ್ಮಿಸಿ ಕೊಡುವಲ್ಲಿ ವಿಳಂಬ ಮಾಡುತ್ತಿದೆ. ಮನೆ ಕಟ್ಟುವವರೆಗೂ ಸರ್ಕಾರಿ ಕಟ್ಟಡಗಳಲ್ಲೇ ವಾಸಿಸುತ್ತೇವೆ' ಎನ್ನುತ್ತಾರೆ ಶಿಂಗಟಾಲೂರ ಗ್ರಾಮದ ನಿರಾಶ್ರಿತ ಈರಣ್ಣ ಬಾಗೋಡಿ.

ಕೃಷಿಯನ್ನು ಸಂಬಂಧಿಸಿಕೊಂಡಿರುವ ಕುಟುಂಬಗಳೆಲ್ಲ ಕೂಡುಕುಟುಂಬ ದಂತೆಯೇ ಬಾಳಿದರೂ, ಒಂದೇ ಮನೆಯಲ್ಲಿ ಹಲವು ಸಂಸಾರಗಳಿರುತ್ತವೆ. ಮುಂದಿನಮನಿ, ಹಿಂದಿನ ಮನಿ, ಮ್ಯಾನಿಮನಿ, ಕೆಳಗಿನ ಮನಿ..... ಹೀಗೆ ಭಾಗವಾಗಿರುತ್ತಾರೆ. ಆದರೆ ಸರ್ಕಾರಿ ಕಡತಗಳಲ್ಲಿ ಅದು ಒಂದೇ ಮನೆ. ಒಂದು ಮನೆಗೆ ಮಾತ್ರ ಕೊಡುವ ಪರಿಹಾರ ಯಾವುದಕ್ಕೂ ಸಾಲುವುದಿಲ್ಲ.

ಪರಿಹಾರವೂ ಹಂತಹಂತವಾಗಿ ಬಿಡುಗಡೆಯಾಗುತ್ತದೆ. ಪ್ರತಿಸಲವೂ ದಾಖಲೆ ಒದಗಿಸಿ, ಪರಿಹಾರ ಪಡೆಯುವುದರಲ್ಲಿ ನಿರ್ಮಾಣ ವೆಚ್ಚ ಮುಗಿಲು ಮುಟ್ಟುತ್ತಿದೆ. ದೊರೆತ ಪರಿಹಾರದಲ್ಲಿ ಹಲವಾರು ಜನರು ಮನೆ ಕಟ್ಟುವುದನ್ನು ಬಿಟ್ಟು ತಗಡಿನ ಶೀಟುಗಳನ್ನು ಹೊದಿಸಿ ಬದುಕುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿಗೆ ಹೋದರೆ ಇಂಥ ಕತೆಗಳ ಸಾಕೆನಿಸುವಷ್ಟು ಕೇಳಿಬರುತ್ತವೆ. 'ಮನೆ ಬಿದ್ದು ಮೂರು ವರ್ಷಗಳಾದರೂ ಪರಿಹಾರ ಸಿಕ್ಕಿಲ್ಲ. ತಗಡಿನ ಶೆಡ್‌ನಲ್ಲಿ ವಾಸಿಸುತ್ತಿದ್ದೇವೆ. ಈಚೆಗೆ ಸುರಿದ ಮಳೆ–ಗಾಳಿಗೆ ತಗಡಿನ ಶೀಟುಗಳು ಹಾರಿಹೋದವು. ಈಗ ದಿಕ್ಕೇ ತೋಚದಂತಾಗಿದೆ. ಮತ್ತೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇವೆ' ಎಂದು ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಮೆಳವಂಕಿ ಗ್ರಾಮದ ಎಸ್.ಜಿ. ಹಿರೇಮಠ ಅಳಲು ತೋಡಿಕೊಂಡರು.

ಕೃಷಿ ಮತ್ತು ಕೃಷಿ ಕಾರ್ಮಿಕರಾಗಿಯೇ ಬದುಕುವ ಈ ಭಾಗದ ಜನರಿಗೆ, ಮಳೆ ಯಾವತ್ತಿಗೂ ಸಾಲದ ಸುಳಿಯಲ್ಲಿಯೇ ನೂಕುತ್ತದೆ. ಬಂದರೂ ಕಷ್ಟ, ಬಾರದಿದ್ದರೂ ಕಷ್ಟ. ಒಮ್ಮೆ ನೆರೆ ಮತ್ತು ಅತಿವೃಷ್ಟಿ ಕಾಡಿದರೆ, ಬದುಕಿನ ಗತಿ ಹತ್ತು ವರ್ಷಗಳ ಹಿಂದೆ ಹೋಗುತ್ತದೆ. ಕೆಲವು ಕುಟುಂಬದವರಂತೂ ತಲೆಮಾರು ಗಳಷ್ಟು ಹಿಂಚಲನೆಯಾಗುತ್ತದೆ.

ಸ್ವಂತದ ಮನೆ ಕಳೆದುಕೊಳ್ಳುತ್ತದೆ. ಜಮೀನಿನ ಮಣ್ಣು ಸವಳಾಗುತ್ತದೆ. ಮಣ್ಣು ಹರಿದುಹೋಗುತ್ತದೆ. ಬೆಳೆ ನೆಲಕಚ್ಚಿರುತ್ತದೆ. ಕೂಡಲೇ ಪರಿಹಾರ ಕಾರ್ಯ ಕೈಗೊಳ್ಳಬೇಕೆಂದರೆ ಅಡೆತಡೆಗಳು ಅಡಚಣೆಗಳು. ಸಮೀಕ್ಷೆ ಆಗಬೇಕು. ಫೋಟೊ ತೆಗೆಯಬೇಕು. ಅಧಿಕಾರಿಗಳು ಭೇಟಿ ನೀಡಬೇಕು. ಹಾನಿಯನ್ನು ಅಂದಾಜಿಸಬೇಕು. ಇವೆಲ್ಲ ಕ್ರಮಕೈಗೊಳ್ಳುವುದರಲ್ಲಿ, ಇವರೆಲ್ಲರ ಬದುಕು ಬೀದಿಗೆ ಬಂದಿರುತ್ತದೆ. ಇದ್ದವರು, ಹೊಲ ತೋಟದ ಮನೆಗಳಲ್ಲಿ ಆಶ್ರಯ ಪಡೆಯುತ್ತಾರೆ. ಇಲ್ಲದವರು ಶಾಲೆ, ದೇಗುಲಗಳಲ್ಲಿ ಮಲಗುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ.

ಬಾಲ್ಯವಿವಾಹಗಳು ಹೆಚ್ಚಾಗಿರುವ, ಬಾಣಂತಿ ಮತ್ತು ಶಿಶು ಮರಣದರವೂ ಹೆಚ್ಚಿರುವ ಈ ಜಿಲ್ಲೆಗಳಿಗೆ ಮಳೆಯೂ ತನ್ನ ಪಾಲಿನ ಕಷ್ಟವನ್ನು ಸುರಿಯುತ್ತಿದೆ. 'ನಮ್ಮ ಎರಡೂ ಮನೆ ಬಿದ್ದಾವ್ರಿ. ಆದ್ರೂ ಇನ್ನೂಮಟಾ ಪರಿಹಾರ ಬಂದಿಲ್ರಿ. ಹೀಂಗಾಗಿ ಇರಾಕ್ ಆಸರೆ ಇಲ್ದಂಗ್ ಆಗೇತ್ರಿ. ಇಬ್ರೂ ಹೆಣ್ಮಕ್ಕು ಹಡದಾರ್ರೀ. ಮನೀ ಬಿದ್ದ ಜಾಗದಾಗ್ ಪತ್ರಾಸ್ ಬಡಿದೇವ್ರಿ. ಹೆಣ್ಮಕ್ಕಳ್ಲ ಪತ್ರಾಸ್‌ನಲ್ಲೇ ಮಲಗತೇವ್ರಿ. ಗಂಡ್ಮಕ್ಕು ಮಲಗಾಕ ದೇವಸ್ಥಾನ, ಸಮುದಾಯ ಭವನಕ್ಕ ಹೋಗ್ತಾರ್ರೀ.. ನಮ್ಮ ಕಷ್ಟ ಯಾರ್ ಕೇಳ್ತಾರ್ರೀ. ಮತ್ತ್ ಮಳಿಗಾಲ ಬಂತ್ರಿ; ನಮ್ಗ ಪರಿಹಾರೂನ ಸಿಗಾಂಗಿಲ್ಲ. ಮನೆ ಕಟ್ಟಿಸಿಕೊಳ್ಳಾಕೂ ಆಗಂಗಿಲ್ಲ ಅನ್ನೋದು ಖಾತ್ರಿ ಆಗಿಬಿಟ್ಟೇತ್ರಿ' ಎಂದು ಹೇಳುವ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ದರೂರ ಗ್ರಾಮದ ಸವಿತಾ ಕಾಂಬಳೆ ಮಾತುಗಳು ಈ ಸಮಸ್ಯೆಗಳಿಗೆ ಕನ್ನಡಿ ಹಿಡಿಯುತ್ತವೆ.

ಪಿಶಬಿ (ಚೀಲ)ಯೊಳಗಿದೆ ಬದುಕು: ಒಮ್ಮೆ ಪ್ರವಾಹ ಏರತೊಡಗಿದರೆ, ಚೀಲಗಳಲ್ಲಿ ಅಗತ್ಯದ ಪಾತ್ರೆ, ಬಟ್ಟೆಗಳನ್ನು ತುಂಬಿಸಿಕೊಂಡು ಮನೆ ಬಿಡಬೇಕಾಗುತ್ತದೆ. 2019ರ ನೆರೆಯಲ್ಲಿ ರಾತೋರಾತ್ರಿ ಮನೆ ನೀರುಪಾಲಾಗಿತ್ತು. ಹಳೆ ಕಾಲದ ಮನೆಗಳಲ್ಲಿರುವ ಹಗೆವು (ನೆಲಮಾಳಿಗೆಯಂತಿರುವ ಧಾನ್ಯದ ಸಂಗ್ರಹಾಲಯಗಳು) ಅಲ್ಲಲ್ಲೇ ಕುಸಿದು ಬಿದ್ದಿದ್ದವು. ಉಳಿಕೆ, ಗಳಿಕೆಗಳೆಲ್ಲವೂ ನೀರುಪಾಲಾಗಿತ್ತು. ಕಾಗದ ಪತ್ರಗಳೂ ಉಳಿದಿರಲಿಲ್ಲ. ಬದುಕಿಗೆ ಅಗತ್ಯವಾದ ಯಾವ ದಾಖಲೆಗಳೂ ಇಲ್ಲದೆ ಅದೆಷ್ಟೋ ಕುಟುಂಬಗಳು ಪರಿಹಾರ ವಂಚಿತರಾದವು. ಬದುಕನ್ನರಸಿ ಗುಳೆ ಹೊರಟವು.

ಸಾಲಿ ಪಡಸಾಲಿ: ಇದೊಂದು ಮಾತು ಇಲ್ಲಿ ಜನಜನಿತ. ಶಾಲೆಗಳೆಲ್ಲ ಪಡಸಾಲೆಗಳಾಗಿ ಬದಲಾಗುತ್ತವೆ. ಬಹುತೇಕ ಶಾಲೆಗಳು ಕಾಳಜಿಕೇಂದ್ರಗಳಾಗಿ ಬದಲಾಗುತ್ತವೆ. ವಸತಿಶಾಲೆಗಳದ್ದೂ ಇದೇ ಕತೆ. ವರ್ಷದಲ್ಲಿ ಆರಂಭದ ಮೂರು ತಿಂಗಳು ಇದೇ ಪರಿಸ್ಥಿತಿ. ಶಾಲೆಯ ಹಜಾರಗಳಲ್ಲಿ, ತರಗತಿಗಳಲ್ಲಿ ತಾತ್ಕಾಲಿಕ ಸಂಸಾರ ಹೂಡುವಂತಾಗುವುದರಿಂದ ಸಾಲಿ–ಪಡಸಾಲಿ ಅನ್ನುವ ಮಾತು ಸರಳವೆಂಬಷ್ಟು ಸಹಜವಾಗಿದೆ.

ಕೃಷ್ಣೆಯ ತೀರದ ಬಾಗಲಕೋಟೆಯ ಜಿಲ್ಲೆಗಂತೂ ಈ ಮಾತು ಅಕ್ಷರಶಃ ಅನ್ವಯಿಸುತ್ತದೆ. ಜಿಲ್ಲೆಯಲ್ಲಿ 1334 ಮನೆಗಳಿಗೆ ಹಾನಿಯಾಗಿದೆ. 1,200 ಮನೆಗಳವರಿಗೆ ಪರಿಹಾರ ನೀಡಲಾಗಿದೆ. 89 ಶಾಲಾ ಕೊಠಡಿಗಳು, 60 ಅಂಗನವಾಡಿ ಕಟ್ಟಡಗಳಿಗೆ ಹಾನಿಯಾಗಿದೆ. ಅತಿವೃಷ್ಟಿಯಿಂದಾಗಿ ₹160 ಕೋಟಿ ಹಾನಿಯಾಗಿದೆ.

2019ರಿಂದ 22ರವರೆಗೂ ಆದ ಮಳೆ, ಪ್ರವಾಹಗಳಿಂದಾಗಿ ಈಗಲೂ ಐನೂರು ಕೊಠಡಿಗಳ ನಿರ್ಮಾಣ ಆಗಬೇಕಿದೆ. ಮೂರು ವರ್ಷಗಳಲ್ಲಿ 462 ಶಾಲಾ ಕೊಠಡಿಗಳನ್ನು ಹೊಸದಾಗಿ ಕಟ್ಟಿದ್ದೇವೆ. 484 ಕೊಠಡಿಗಳನ್ನು ದುರಸ್ತಿ ಮಾಡಿದ್ದೇವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀಶೈಲ ಬಿರಾದಾರ ಹೇಳುತ್ತಾರೆ.

ಅನುದಾನದ ಕೊರತೆ, ಗುತ್ತಿಗೆದಾರರ ವಿಳಂಬಗತಿಯ ಕಾರ್ಯವೈಖರಿಯಿಂದಾಗಿ ಮಕ್ಕಳು ಈಗಲೂ ತಾತ್ಕಾಲಿಕ ಶೆಡ್‌ಗಳಲ್ಲಿ ಅಕ್ಷರಾಭ್ಯಾಸ ಮಾಡಬೇಕಿದೆ. ಮೇ ತಿಂಗಳಲ್ಲಿಯೇ ಶಾಲೆ ಆರಂಭಿಸಿದಾಗ ಸೂರ್ಯನ ತಾಪ, ನೆಲದ ಧಗೆ ತಡೆಯದೆ ಬಳಲುವಂತಾಗಿದ್ದೂ ಮರೆಯುವಂತಿಲ್ಲ. ಶಿಕ್ಷಣದಲ್ಲಿ ಈ ಜಿಲ್ಲೆಗಳು ಹಿಂದುಳಿಯಲು ಹೀಗೆ ಮಳೆರಾಯನೂ ಕಾರಣನಾಗುತ್ತಿದ್ದಾನೆ.

ಪೂರಕ ಮಾಹಿತಿ: ಬಸವರಾಜ ಹವಾಲ್ದಾರ್, ವೆಂಕಟೇಶ್ ಜಿ.ಎಚ್, ಕೆ.ಎಂ.ಸತೀಶ್ ಬೆಳ್ಳಕ್ಕಿ, ಸಿದ್ದು ಆರ್.ಜಿ. ಹಳ್ಳಿ, ಸಂತೋಷ ಚಿನಗುಡಿ, ಇಮಾಮ್‌ಹುಸೇನ್ ಗೂಡುನವರ

ಯಾವ ಜಿಲ್ಲೆಗಳಲ್ಲಿ ಎಷ್ಟು ಪರಿಹಾರ?

ಗದಗ

- ಗದಗ ಜಿಲ್ಲೆಯಲ್ಲಿ ಈ ವರ್ಷ 1233 ಮನೆಗಳಿಗೆ ಹಾನಿಯಾಗಿದ್ದು, ಈ ಪೈಕಿ 963 ಮನೆಗಳಿಗೆ ಪರಿಹಾರ ನೀಡಲಾಗಿದೆ.

ಹಾವೇರಿ

- ಹಾವೇರಿ ಜಿಲ್ಲೆಯಲ್ಲಿ ಕಳೆದ ವರ್ಷ (2021) ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ 8,268 ಮನೆಗಳಿಗೆ ಹಾನಿಯಾಗಿತ್ತು. ಒಟ್ಟಾರೆ ₹72.50 ಕೋಟಿ ಪರಿಹಾರ ನೀಡಲಾಗಿದೆ.
- ಈ ವರ್ಷ ಹಾವೇರಿ ಜಿಲ್ಲೆಯಾದ್ಯಂತ 1,402 ಮನೆಗಳಿಗೆ ಹಾನಿಯಾಗಿದ್ದು, ಈ ಪೈಕಿ 26 ಮನೆಗಳು ಪೂರ್ಣ ಪ್ರಮಾಣದಲ್ಲಿ ಹಾನಿಯಾಗಿದೆ. ₹3.89 ಕೋಟಿ ಪರಿಹಾರ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಮಾಹಿತಿ ನೀಡಿದ್ದಾರೆ.

ಬೆಳಗಾವಿ

- 2019ನೇ ಸಾಲಿನಲ್ಲಿ 46,959 ಮನೆಗಳಿಗೆ ಹಾನಿಯಾಗಿದ್ದು ₹828.67 ಕೋಟಿ ಪರಿಹಾರ ನೀಡಲಾಗಿದೆ. ಪರಿಹಾರ ನೀಡುವ ಯಾವುದೇ ಮನೆ ಬಾಕಿ ಉಳಿದಿಲ್ಲ.
- 2020ರಲ್ಲಿ 5,372 ಮನೆಗಳಿಗೆ ಹಾನಿಯಾಗಿದ್ದು, ₹70.44 ಕೋಟಿ ಪರಿಹಾರ ನೀಡಲಾಗಿದೆ. ಪರಿಹಾರ ನೀಡುವ ಯಾವುದೇ ಮನೆ ಬಾಕಿ ಉಳಿದಿಲ್ಲ.
- 2021ನೇ ಸಾಲಿನಲ್ಲಿ 14,545 ಮನೆಗಳಿಗೆ ಹಾನಿಯಾಗಿದ್ದು, ₹115 ಕೋಟಿ ಪರಿಹಾರ ನಿಡಲಾಗಿದೆ. ಯಾವುದೇ ಪರಿಹಾರ ನೀಡುವ ಬಾಕಿ ಇಲ್ಲ.
- ಪ್ರಸಕ್ತ (2022) ವರ್ಷ ಆಗಸ್ಟ್ 15ರವರೆಗೆ 800 ಮನೆಗಳು ಹಾನಿಯಾಗಿದ್ದು, ಈ ಪೈಕಿ 276 ಮನೆಗಳಿಗೆ ₹1.94 ಕೋಟಿ ಪರಿಹಾರ ನೀಡಲಾಗಿದೆ. ಇನ್ನೂ 524 ಮನೆಗಳಿಗೆ ಪರಿಹಾರ ನೀಡುವುದು ಬಾಕಿ ಇದೆ

ಗದಗಿಗೆ ಜಲದಿಗ್ಬಂಧನ

ಮಲಪ್ರಭೆ ಉಕ್ಕಿ ಹರಿದ ಪರಿಣಾಮ ಎರಡು ವರ್ಷಗಳ ಹಿಂದೆ ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಕೊಣ್ಣೂರ, ಕಪಲಿ, ವಾಸನ, ಬೂದಿಹಾಳ ಸೇರಿದಂತೆ ಮಲಪ್ರಭೆ, ಬೆಣ್ಣೆಹಳ್ಳದ ದಡದಲ್ಲಿ ಇರುವ ಗ್ರಾಮಗಳು ಪ್ರವಾಹಕ್ಕೆ ತುತ್ತಾದವು. ಅನೇಕ ಸಂತ್ರಸ್ತರು ಮನೆ ಕಳೆದುಕೊಂಡರೆ, ಕೆಲವರ ಮನೆಗಳು ಭಾಗಶಃ ಬಿದ್ದು ಹೋದವು.

ತಾಲ್ಲೂಕು ಆಡಳಿತ ಕೊಣ್ಣೂರಿನಲ್ಲಿ 121, ವಾಸನದಲ್ಲಿ 42 ಹಾಗೂ ಕಪಲಿ ಗ್ರಾಮದಲ್ಲಿ 30 ಸೇರಿದಂತೆ ಒಟ್ಟು 193 ಶೆಡ್‌ಗಳನ್ನು ನಿರ್ಮಿಸಿತು. ಇವುಗಳಲ್ಲಿಯೇ ಸಂತ್ರಸ್ತರು ಮತ್ತು ಸಂತ್ರಸ್ತರಲ್ಲದವರು ಕೂಡ ವಾಸಿಸುತ್ತಿದ್ದಾರೆ. ಕೆಲವರಿಗೆ ಪರಿಹಾರ ದೊರೆತರೂ ಶೆಡ್ ಬಿಟ್ಟಿಲ್ಲ. ಸಂಪೂರ್ಣ ಮನೆ ಬಿದ್ದವರ ಮನೆ ನಿರ್ಮಾಣ ಕೊನೆ ಹಂತದಲ್ಲಿವೆ.

ಬೆಳಗಾವಿ ಜಿಲ್ಲೆಯ ಪ್ರವಾಹದ ಸಂಗ್ರಹ ಚಿತ್ರ
ಚಿತ್ರ ಮಂಜುನಾಥ ಗೋಡೆಪ್ಪನವರ್

ಹಾವೇರಿಯಲ್ಲಿ ವರದೆಯ ಹಾವು ಏಣಿ ಆಟ

ವರದಾ ಮತ್ತು ಕುಮುದ್ವತಿ ಎರಡೂ ನದಿಗಳು ಹಾವೇರಿ ಜಿಲ್ಲೆಯಲ್ಲಿ ಹರಿಯುತ್ತವೆ. ವರದಾ ಮಾತ್ರ ಬದುಕಿಗೆ ವರದಾನವಾಗುವುದರ ಜೊತೆಗೆ ಒಂದಷ್ಟು ಬಲಿದಾನವನ್ನೂ ಬೇಡುವ ನದಿ. ಈ ಭಾಗದಲ್ಲಿ 19 ಗ್ರಾಮಗಳು ಸ್ಥಳಾಂತರವಾಗಬೇಕಿವೆ.

ಹಾವೇರಿ ತಾಲ್ಲೂಕಿನ ಗುಯಿಲಗೊಂದಿ, ಮೇಲ್ಮುರಿ, ನಾಗನೂರು, ಸವಣೂರು ತಾಲ್ಲೂಕಿನ ಮಂಟಗಣಿ, ಚಿಕ್ಕಮುಗದೂರು, ಕಲಕೋಟಿ, ಅರಳಿಹಳ್ಳಿ, ನದಿನೀರಲಗಿ, ಡೊಂಬರಮತ್ತೂರು, ಹಳೇಹಲಸೂರ, ಕುಣಿಮೆಳ್ಳಹಳ್ಳಿ, ಮನ್ನಂಗಿ, ಮೆಳ್ಳಾಗಟ್ಟಿ, ಹಾನಗಲ್ ತಾಲ್ಲೂಕಿನ ಲಕ್ಮಾಪುರ (ಮ) ಆಡೂರು, ಅಲ್ಲಾಪುರ, ಶೀಗಿಹಳ್ಳಿ, ಹರವಿ, ಬಸಾಪುರ, ನಿಡಸಂಗಿ, ಕೂಡಲ (ಹಳೇ ಗ್ರಾಮ) ಈ 19 ಗ್ರಾಮಗಳಲ್ಲಿರುವ ಜನರು ಇಂದಿಗೂ ಮಳೆಗಾಲದಲ್ಲಿ ಆತಂಕದಲ್ಲೇ ಜೀವನ ಸಾಗಿಸುತ್ತಿದ್ದಾರೆ.

ಪದೇ ಪದೇ ಪ್ರವಾಹಕ್ಕೆ ತುತ್ತಾಗುವ 19 ಗ್ರಾಮಗಳಲ್ಲಿ (ಹಾವೇರಿ ತಾಲ್ಲೂಕಿನ 11 ಮತ್ತು ಸವಣೂರು ತಾಲ್ಲೂಕಿನ 8 ಗ್ರಾಮಗಳು) 'ಶಾಶ್ವತ ತಡೆಗೋಡೆ' ನಿರ್ಮಿಸಲು ಹಾವೇರಿ ಜಿಲ್ಲಾಡಳಿತ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಗ್ರಾಮಗಳ ಸ್ಥಳಾಂತರ ಮತ್ತು ತಡೆಗೋಡೆ ನಿರ್ಮಾಣಕ್ಕೆ ಕೆಲವು ಗ್ರಾಮಸ್ಥರಿಂದಲೇ ವಿರೋಧ ವ್ಯಕ್ತವಾದ್ದರಿಂದ ಯೋಜನೆಗಳು ನನೆಗುದಿಗೆ ಬಿದ್ದಿವೆ ಎನ್ನಲಾಗುತ್ತಿದೆ.

'1104 ಕೊಠಡಿಗಳ ದುರಸ್ತಿಗೆ ವಿಪತ್ತು ಪರಿಹಾರ ನಿಧಿಯಿಂದ ₹9.62 ಕೋಟಿ ಬಿಡುಗಡೆಗೆ ಜಿಲ್ಲಾಧಿಕಾರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ. ಶಿಥಿಲವಾಗಿರುವ ಕೊಠಡಿಗಳಿಂದ ಮಕ್ಕಳನ್ನು ಲಭ್ಯವಿರುವ ಸುಸಜ್ಜಿತ ಕೊಠಡಿಗಳಿಗೆ ಸ್ಥಳಾಂತರ ಮಾಡಿ ತರಗತಿ ನಡೆಸುತ್ತಿದ್ದೇವೆ' ಎಂದು ಡಿಡಿಪಿಐ ಜಗದೀಶ್ವರ ತಿಳಿಸಿದರು.

ಊಟಕ್ಕಿಲ್ಲ ರೊಟ್ಟಿ, ತೋಳುಗಳಿಲ್ಲ ಗಟ್ಟಿ

ಜೋಳ ತಿಂದವ ತೋಳನಾದ, ರೊಟ್ಟಿ ತಿಂದವ ಗಟ್ಟಿಯಾದ ಎನ್ನುವ ಮಾತು ಈ ಕಡೆ ಊಟಕ್ಕೆ ಕುಳಿತಾಗಲೆಲ್ಲ ಹೇಳುತ್ತಾರೆ. ಬೆಲೆ ಏರಿಕೆಯ ಈ ದಿನಗಳಲ್ಲಿ ಬಿಳಿಜೋಳದ ಬೆಲೆ ಸರಾಸರಿ 30–40 ರೂಪಾಯಿವರೆಗೂ ಇದೆ. ಪಡಿತರದಲ್ಲಿ ಅಕ್ಕಿ ಮಾತ್ರ ನೀಡುತ್ತಾರೆ. ದವಸಗಳ ಪ್ಯಾಕೇಟುಗಳನ್ನು ನೀಡಿದಾಗಲೂ, ಅಕ್ಕಿ, ಬೇಳೆ, ಎಣ್ಣೆ, ಸಕ್ಕರೆ, ಖಾರದ ಪುಡಿ, ಅರಿಶಿಣ, ಸಾಸಿವೆ, ಜೀರಿಗೆ ಮತ್ತು ಉಪ್ಪನ್ನು ನೀಡುತ್ತಾರೆ.

ಈ ವರ್ಷದ ಸುತ್ತೋಲೆಯ ಪ್ರಕಾರ, ಮೂವರು ಇರುವ ಕುಟುಂಬದ ಘಟಕಕ್ಕೆ ಪಡಿತರ ಪ್ಯಾಕೇಜುಗಳನ್ನು ನೀಡಲಾಗುತ್ತಿದೆ. ಈ ಭಾಗದಲ್ಲಿ ಅನಾರೋಗ್ಯ ಪೀಡಿತರಾದಾಗ, ಜ್ವರ ಬಾಧೆ ಇರುವಾಗ ಅನ್ನ ಉಂಡು ಅಭ್ಯಾಸವಿತ್ತು. ಪ್ರತಿದಿನವೂ ಜೋಳದ ರೊಟ್ಟಿ ಸೇವಿಸುವ ಈ ಭಾಗದವರಿಗೆ ಹೊಟ್ಟೆ ತುಂಬ ಊಟ ಮಾಡುವುದೂ ಕಷ್ಟವಾಗಿದೆ. ಬಿಸಿರೊಟ್ಟಿಯೊಟ್ಟಿಗೆ ಹಸಿ-ತರಕಾರಿಗಳ ಪಚಡಿ ಉಣ್ಣುವ, ಮೊಳಕೆ ಕಾಳಿನ ಉಸುಳಿ ಉಣ್ಣುವ ಅಭ್ಯಾಸ ಇರುವವರಿಗೆ ರೊಟ್ಟಿಯೂಟವೇ ಇದೀಗ ಹಬ್ಬದೂಟದಂತಾಗಿದೆ.

ಕಳೆದ ಮೂರು ವರ್ಷಗಳಿಂದ ದ್ವಿದಳ ಧಾನ್ಯಗಳ ದಾಸ್ತಾನು ಸಹ ಇಲ್ಲದಂತಾಗಿದೆ. ಮಳೆ ಬಂದು ಮನೆಯನ್ನಷ್ಟೇ ಅಲ್ಲ, ಇವರ ಜೀವನಶೈಲಿಯೇ ಏರುಪೇರು ಆಗಿದೆ.

ಭೀಮೆಯೂ ನಿಷ್ಕರುಣಿ

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ 180 ಕಿಲೋಮೀಟರ್ ವ್ಯಾಪ್ತಿಯಲ್ಲಿ ಭೀಮಾ ನದಿ ಹರಿಯುತ್ತದೆ. ಭೀಮಾನದಿಗೆ 4 ಬ್ಯಾರೇಜುಗಳನ್ನು ನಿರ್ಮಿಸಲಾಗಿದೆ.

ಮಹಾರಾಷ್ಟ್ರದ ಉಜನಿ ಜಲಾಶಯ ಮತ್ತು ವೀರ ಭಟ್ಕಲ್ ಸೇರಿ ವಿವಿಧ ಜಲಾಶಯಗಳಿಂದ ಭೀಮಾ ನದಿಗೆ 4 ಲಕ್ಷ ಕ್ಯುಸೆಕ್ ನೀರು ಹರಿ ಬಿಟ್ಟಾಗ, ತಾಲ್ಲೂಕಿನಲ್ಲಿ ಭೀಮಾ ನದಿ ದಡದ 40 ಗ್ರಾಮಗಳಿಗೆ ತೊಂದರೆ ಆಗುತ್ತದೆ.

ಅಫಜಲಪುರ ತಾಲ್ಲೂಕಿನ ಬಳ್ಳುಂಡಗಿ, ಅಳ್ಳಗಿ (ಕೆ), ಅಳ್ಳಗಿ, (ಬಿ) ಬಂಕಲಗಿ,ದುದ್ದನಿಗಿ, ಮಂಗಳೂರು, ಹಿರಿಯಾಳ ಹಾಗೂ ಸಿಂದಗಿ ತಾಲ್ಲೂಕಿನ ತಾರಾಪುರರ, ತಾವರಖೇಡ, ಬ್ಯಾಡಗಿ ಹಾಳ ಮತ್ತು ಮಡನಹಳ್ಳಿ ಗ್ರಾಮಗಳು ಪ್ರವಾಹ ಸ್ಥಿತಿಯನ್ನು ಎದುರಿಸುತ್ತವೆ.

ಭೀಮಾ ಬ್ಯಾರೇಜ್‌ನ ಹಿನ್ನೀರಿನಿಂದ 11 ಗ್ರಾಮಗಳು ಪ್ರವಾಹದ ಪರಿಸ್ಥಿತಿ ಎದುರಿಸುತ್ತವೆ. ಬೇರೆಡೆ ಸ್ಥಳಾಂತರ ಆಗುವಂತೆ ಸರ್ಕಾರವು ಸೂಚಿಸಿದರೂ ಗ್ರಾಮಸ್ಥರು ಹೋಗುತ್ತಿಲ್ಲ. ಹಳೆಯ ಗ್ರಾಮವನ್ನೂ ಬಿಡುತ್ತಿಲ್ಲ. ಹಳೆಯ ಗ್ರಾಮದ ಮನೆಗಳ ಮೌಲ್ಯವನ್ನು ಲೆಕ್ಕ ಹಾಕಿ, ಗ್ರಾಮಸ್ಥರಿಗೆ ಹಣ ನೀಡಲಾಗಿದೆ. ಆದರೂ ಜನರು ಅಲ್ಲಿಂದ ಹಳೆಯ ಗ್ರಾಮ ಬಿಡುತ್ತಿಲ್ಲ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ವೈಜನಾಥ ಬಿರಾದಾರ
ಚಿತ್ರನಟ
ಸೆಲೆಬ್ರಿಟಿ LIVE
ಕಲಾ ಯಾನ
ಬೆಳಿಗ್ಗೆ 11 ರಿಂದ 12

ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಯಡಿಯೂರಪ್ಪಗೆ ಉನ್ನತ ಸ್ಥಾನ ರಾಜಕೀಯ ಪರಿಣಾಮವೇನು?
ಭಾಗವಹಿಸುವವರು:
ಅರುಣ್ ಶಹಾಪುರ, ಬಿಜೆಪಿ ನಾಯಕ
ಲಾವಣ್ಯ ಬಲ್ಲಾಳ್, ಎಐಸಿಸಿ ವಕ್ತಾರೆ
ದೇವರಾಜ್, ಜೆಡಿಎಸ್ ವಕ್ತಾರ
ಸಂವಾದ
ಮಧ್ಯಾಹ್ನ 12 ರಿಂದ 1

'ಗುಡಿಸಲು ಕೊಚ್ಚಿಹೋಯ್ತು, ಕಿನ್ನರಿ ಹಾಳಾಯ್ತು'

ಪ್ರಜಾವಾಣಿ ವಾರ್ತೆ

ಮುನಿಸ್ವಾಮಿ

ಬೆಂಗಳೂರು: 'ಗಾಳಿ-ಮಳೆಗೆ ಗುಡಿಸಲು ಕೊಚ್ಚಿಹೋಯಿತು ಸ್ವಾಮಿ. ಕಿನ್ನರಿಯೂ ಹಾಳಾಯಿತು. ಆದರೆ, ನಾನು ಇರುವವರೆಗೂ ಕುಲಕಸುಬನ್ನು ಉಳಿಸಿಕೊಂಡು ಹೋಗ್ತೇನೆ ಸ್ವಾಮಿ' ಎಂದು ಜಾನಪದ ಕಲಾವಿದ ಮುನಿಸ್ವಾಮಿ ಮನದಾಳ ಹಂಚಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಹಮ್ಮಿಕೊಂಡ 225ನೇ 'ಮನೆ-ಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗ ವಹಿಸಿ, ಜೀವನಾನುಭವವನ್ನು ಹಂಚಿಕೊಂಡರು.

ಅವರು ಹೇಳಿದ್ದು: 'ನಾವು ಕಿನ್ನರಿ ನುಡಿಸ್ತಾ ದಕ್ಕಲ ಜಾಂಬವ ಪುರಾಣ ಹಾಡ್ತೇವೆ. ಪ್ರತಿವರ್ಷ ಶಿವರಾತ್ರಿಯಿಂದ ಬಿತ್ತನೆ ಮಾಡೋ ಕಾಲದವರೆಗೆ ವರ್ತನೆಗೆ ಹೋಗ್ತೀವಿ. ಶಿವಾಸನ ಹಾಸಿ, ವಿಭೂತಿ ಧಾರಣೆ ಮಾಡಿ, ಇಡೀ ರಾತ್ರಿ ಪುರಾಣ ಹೇಳ್ತೀವಿ. ಕಥೆ ಕೇಳಿಸಿಕೊಂಡವರು ಅಷ್ಟೋ ಇಷ್ಟೋ ಕಾಣಿಕೆ ಕೊಡ್ತಾರೆ. ಅದರಾಗೆ ಜೀವನ ನಡಿಬೇಕು ಸ್ವಾಮಿ'

'ಆದಿ ಜಾಂಬವ ಪುರಾಣ ಕಥೆಗಳನ್ನ ಹೇಳುವವರಲ್ಲಿ ನಾನೇ ಕೊನೆ ನೋಡಿ. ಎಂತೆಂಥ ದೊಡ್ಡ ಕಲಾವಿದರು ನನ್ ಕಣ್ಣೆದ್ರು ಹೊರಟುಹೋದ್ರು. ನಾನೂ ಇನ್ನು ಹೆಚ್ಚು ದಿನ ಇರೋನ್ ಅಲ್ಲ. ಅಷ್ಟರಾಗೇ ಏನಾರ ಮಾಡ್ಬೇಕು'

'ಈ ಕಲೆಯನ್ನ ಕಲಿಯಾಕ ಮಕ್ಕಳು ಮುಂದೆ ಬರ್ತಿಲ್ಲ. ಹಿರಿಯರಿಂದ ಬಂದಿರುವ ಕಸುಬನ್ನ ಬಿಡಬಾರದೆಂದು ಮುಂದುವರ್ಸಕಂಡು ಹೋಗ್ತಿವ್ನಿ. ಉಳೀಲಿಕ್ಕೆ ಸರ್ಯಾದ ಸೂರಿಲ್ಲ. ದಕ್ಕಲಿಗರಿಗೆ ಸರ್ಕಾರದಿಂದ ಸ್ಥಳಾವಕಾಶ ಮಾಡ್ಸಿ ಕೊಡಿ. ನಮ್ಮ ಕುಲಕಸುಬಲ್ಲಿ ಸಂತೋಷ ಇದೇ. ನಾವು ಭಿಕ್ಷೆ ಪಡಿತಾ ಇಲ್ಲ, ಗೌರವ ಸಂಭಾವನೆ ಅಂತ ಪಡೆಯೋದು. ನಾವು ಯಾವ ಊರಲ್ಲಿ ಇರ್ತೆವ್ಯೋ ಅದೇ ನಮ್ಮೂರು''

ಇದಕ್ಕೂ ಮೊದಲು ಮುನಿಸ್ವಾಮಿ ಅವರು 'ಆದಿ ಜಾಂಬವ ಪುರಾಣ' ಹೇಳಿದರು. ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಇದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.07	6,547	4,921
ಹಾರಂಗಿ	2,859	2,857.20	2,396	1,300
ಕಬಿನಿ	2,284	283.46	4,753	2,000
ಹೇಮಾವತಿ	2,922	2,922	5,872	5,872
ಲಿಂಗನಮಕ್ಕಿ	1,819	1,813.10	9,658	5,998
ಸೂಪಾ (ಮೀ)	564	548.60	7,128	2,284
ಮಾಣಿ	594	587.99	943	771
ತುಂಗಭದ್ರಾ	1,633	1632.99	31,286	30,717
ಮಲಪ್ರಭಾ	2079.5	2,077.60	4,369	994
ಘಟಪ್ರಭಾ	2175	2,173.31	14,611	13,186
ಭದ್ರಾ	186	184.1	6,939	5,145
ಆಲಮಟ್ಟಿ (ಮೀ)	519.60	519.49	1,23,472	1,00,000
ನಾರಾಯಣಪುರ (ಮೀ)	492.25	491.70	1,00,000	98,905

* ನೆಲಮಟ್ಟದಿಂದ

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 21-8-1997

● **ಪ್ರತಿಪಕ್ಷಗಳ ಧರಣಿ, ಸಭಾತ್ಯಾಗ**

ಬೆಂಗಳೂರು, ಆಗಸ್ಟ್ 20– ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ (ಎಪಿಎಂಸಿ) ತಲಾ ಮೂವರು ಸದಸ್ಯರನ್ನು ನಾಮಕರಣ ಮಾಡಲು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳುವುದಿಲ್ಲ ಹಾಗೂ ಯಾವುದೇ ವಿಧದ ತಿದ್ದುಪಡಿ ತರುವುದಿಲ್ಲ ಎಂಬ ಸರ್ಕಾರದ ನಿಲುವನ್ನು ವಿರೋಧಿಸಿ ವಿಧಾನಸಭೆಯಲ್ಲಿ ಇಂದು ಕಾಂಗ್ರೆಸ್ ಸದಸ್ಯರು ಧರಣಿ ಹೂಡಿದರೆ, ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಈ ಹಂತದಲ್ಲಿ ಸರ್ಕಾರ ಹಾಗೂ ವಿರೋಧ ಪಕ್ಷಗಳ ನಾಯಕರ ಜತೆಗೆ ಸಂಧಾನ ನಡೆಸಲು ಸಭಾಧ್ಯಕ್ಷ ರಮೇಶ್ ಕುಮಾರ್ ಅವರು ಅರ್ಧ ಗಂಟೆ ಕಾಲ ಸದನವನ್ನು ಮುಂದೂಡಿದರು.

50 ವರ್ಷಗಳ ಹಿಂದೆ — ಸೋಮವಾರ, 21-8-1972

● **ರಾಜ್ಯ ಸಂಪುಟದಲ್ಲಿ ಸ್ವಲ್ಪವೂ ಒಡಕಿಲ್ಲ: ಅರಸು ಸ್ಪಷ್ಟನೆ**

ಬೆಂಗಳೂರು, ಆಗಸ್ಟ್ 20– ರಾಜ್ಯ ಸಚಿವರೂ ಸೇರಿ ತಮ್ಮ ಸಚಿವ ಸಹೋದ್ಯೋಗಿಗಳು ಒಗ್ಗಟ್ಟಿನಿಂದ ಇದ್ದಾರೆ. ಯಾವುದೇ ಸಂದರ್ಭದಲ್ಲೂ ಸಂದೇಹಪಡಲು ತಮಗೆ ಕಾರಣವೇ ಇಲ್ಲವೆಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಸ್ಪಷ್ಟಪಡಿಸಿದರು.

'ರಾಜಕೀಯ ಶುದ್ಧೀಕರಣ' ಚಳವಳಿ ಆರಂಭಿಸಲಿರುವ ಕೆಂಗಲ್ ಹನುಮಂತಯ್ಯ ಅವರನ್ನು ಶಾಸಕರು, ಕೆಲ ಸಚಿವರೂ ಬಂದು ನೋಡಿದ್ದಾರೆ ಎಂದು ಹೇಳಿರುವುದನ್ನು ವರದಿಗಾರರು ಪ್ರಸ್ತಾಪಿಸಿದಾಗ 'ಸಚಿವರು ಹನುಮಂತಯ್ಯ ಅವರನ್ನು ಹೋಗಿ ನೋಡಿಲ್ಲ ಎಂದು ಹೇಳುವುದಿಲ್ಲ. ಹೋಗಿರಬಹುದು' ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಆಗಸ್ಟ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದಶಮಿ ಗಂ. 27-36 ನಕ್ಷತ್ರ: ಮೃಗಶಿರ ಅಹೋರಾತ್ರ ಯೋಗ: ಹರ್ಷಣ ಗಂ. 22-38, ಕರಣ: ವಣಿಜ ಗಂ. 14-22, ಸಿಂಹ ಮಾಸದ 04 ನೇ ದಿನ. ರಾಹುಕಾಲ : ಸಾಯಂಕಾಲ 04:30–06:00 ಸೂರ್ಯೋದಯ : 06-22 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 22 ಮೊಹರಮ್ ದಿನ ವಿಶೇಷ : ಖೋರ್ದಾದ್ ಸಾಲ್ (ಪ್ರೊಫೆಟ್ ಜರ್ತೋಸ್ತ್ರ ವರ ಜನ್ಮದಿನ) - ಪಾರ್ಸಿ
ಅದೃಷ್ಟ ಸಂಖ್ಯೆ : 1, 7

ಮೇಷ: ಚಿನ್ನ, ಬೆಳ್ಳಿ ಮತ್ತು ರಾಸಾಯನಿಕ ವಸ್ತುಗಳ ಮಾರಾಟಗಾರಾರಿಗೆ ಅಧಿಕ ಲಾಭ. ನಿಮಗೆದುರಾಗುವ ಸುವರ್ಣ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ಗಮನಹರಿಸಿ. ಮನೆಯ ಪರಿಸ್ಥಿತಿ ಸುಧಾರಿಸಲಿದೆ.

ವೃಷಭ: ಮಕ್ಕಳೊಂದಿಗೆ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಭೇಟಿ ಕೊಡುವಂತಾಗಬಹುದು. ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರಿಗೆ ಲಾಭದ ನಿರೀಕ್ಷೆಯಲ್ಲಿ ಅಲ್ಪ ಮಟ್ಟದ ವ್ಯತ್ಯಾಸಗಳಾಗುವುದು.

ಮಿಥುನ: ಮನಃಶಾಸ್ತ್ರಜ್ಞರಿಗೆ ಬೇಡಿಕೆ ಹೆಚ್ಚಾಗುವುದು. ಸಂಘ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಸ್ವಯಂ ಪ್ರೇರಿತರಾಗಿ ಅಧಿಕ ಕೆಲಸ ಅಥವಾ ಹಣಕಾಸಿನ ಜವಾಬ್ದಾರಿ ತೆಗೆದುಕೊಳ್ಳುವುದು ಸಮಸ್ಯೆಯನ್ನು ಎಳೆದುಕೊಂಡಂತಾಗುತ್ತದೆ.

ಕರ್ಕಾಟಕ: ನೇರ ನಡೆ ನುಡಿಯಿರುವವರೊಂದಿಗೆ ಮಾತ್ರ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ತೀರ್ಮಾನ ತೆಗೆದುಕೊಳ್ಳುವಂತಾಗಲಿದೆ. ಆಫೀಸಿನ ಲೆಕ್ಕ ಪತ್ರದ ದೋಷಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಗಮನಹರಿಸಿ.

ಸಿಂಹ: ಕೆಲಸ ಕಾರ್ಯಗಳ ಬಗ್ಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಮಗನ ವ್ಯವಹಾರಕ್ಕೆ ಸಂಬಂಧಿಸಿದ ಶುಭ ಸುದ್ದಿ ಬರಲಿದೆ. ಹೆಚ್ಚಿನ ಬಂಡವಾಳ ತೊಡಗಿಸುವ ವಿಚಾರ ಸದ್ಯಕ್ಕೆ ಮುಂದೂಡುವುದು ಒಳ್ಳೆಯದು.

ಕನ್ಯಾ: ಅತಿಯಾದ ಭಯ ಕೆಲಸಕ್ಕೆ ಅಡ್ಡಿಯನ್ನು ಉಂಟುಮಾಡುವುದು. ಅವಶ್ಯಕತೆ ಇರುವ, ನಿಮಗೆ ಇಷ್ಟವಾಗುವ ವಸ್ತುಗಳನ್ನು ಖರೀದಿಸುವ ಯೋಗವಿದೆ. ಸಂಪಾದನೆಯ ಮೊತ್ತಕ್ಕಿಂತ ಖರ್ಚಿನ ಲೆಕ್ಕ ದೊಡ್ಡದಾಗಲಿದೆ.

ತುಲಾ: ಕುಟುಂಬಕ್ಕೆ ನವ ಶಿಶುವಿನ ಆಗಮನದಿಂದಾಗಿ ಮನೆಯವರಿಗೆಲ್ಲಾ ಅಪರಿಮಿತ ಸಂತೋಷ ಉಂಟಾಗುವುದು. ಅಗತ್ಯವಿಲ್ಲದ ವಿಚಾರಗಳ ಬಗ್ಗೆ ಮಾತನಾಡುವುದಾಗಲೀ ಅಥವಾ ಸಲಹೆ ನೀಡುವುದಾಗಲೀ ಸರಿಯಲ್ಲ.

ವೃಶ್ಚಿಕ: ನಿಮ್ಮ ದುಡುಕು ಸ್ವಾಭಾವದಿಂದಾಗಿ ಅಣ್ಣತಮ್ಮಂದಿರ ಬಾಂಧವ್ಯಕ್ಕೆ ಹಾನಿಯಾಗಬಹುದು. ಎಚ್ಚರವಿರಲಿ. ಹೊಸ ಉದ್ಯಮ ಪ್ರಾರಂಭಿಸಲು ಆಲೋಚನೆಗಳು ಬರಲಿದೆ. ಆದರೆ ನೀವು ಯೋಚಿಸಿದಷ್ಟು ಸುಲಭವಲ್ಲ.

ಧನು: ಬಹಳ ದಿನಗಳ ನಂತರ ಮನಸ್ಸಿಗೆ ಹಿತವಾದ ಅನುಭವ ಸಿಗಲಿದೆ. ವಾದ-ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ. ತಂದೆ-ತಾಯಿಯವರ ಆರೋಗ್ಯ ಸ್ಥಿತಿ ಉತ್ತಮವಾಗಿರುತ್ತದೆ.

ಮಕರ: ಎಲ್ಲಾ ಕಿರಿಕಿರಿಗಳನ್ನೂ, ತೊಂದರೆ ತಾಪತ್ರಯಗಳನ್ನೂ ಶಾಂತ ರೀತಿಯಿಂದ ಎದುರಿಸುವಿರಿ. ಎಂತಹ ದುಸ್ಥಿತಿಯಿಂದಲೂ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ. ಯಾವ ಪರಿಸ್ಥಿತಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ.

ಕುಂಭ: ರಾಜಕೀಯ ರಂಗಕ್ಕೆ ಸಂಬಂಧಿಸಿದಂತೆ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರುವುದು. ವೃತ್ತಿ ಜೀವನ, ದಿನಚರಿಯು ಎಂದಿನಂತೆಯೇ ವ್ಯವಸ್ಥಿತವಾಗಿರುವುದು. ಜಗದ್ಗುರುಗಳ ಸ್ಮರಣೆಯು ಚೈತನ್ಯ ನೀಡುವುದು.

ಮೀನ: ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳ ಬೇಕಿದ್ದರೆ ಅವಿರತ ಶ್ರಮ ಅಗತ್ಯ. ಯಾವುದೇ ಕೆಲಸವನ್ನು ಗುತ್ತಿಗೆಯನ್ನು ನೀಡುವ ರೀತಿಯಲ್ಲಿ ತೀರ್ಮಾನಿಸ ಬೇಡಿ. ಸ್ಟೇಷನರಿ ಮತ್ತು ಫ್ಯಾನ್ಸಿ ವಸ್ತುಗಳ ಹೆಚ್ಚಿನ ಮಾರಾಟ ಇರುವುದು.

ಪದಬಂಧ 5056 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾಹನದವರೆಗೂ ಬಂದಿರುವ ನೆರೆ! (3)
3.ಕೆನ್ನೆಗೆ ಹೊಡೆಯುವ ಏಟು (4)
5.ವಿಷಯದಲ್ಲಿರುವ ನಂಜು! (2)
6.ಮೃತರಾದವರಿಗಾಗಿ ಮಾಡುವ ಅಪರ ಕ್ರಿಯೆ (4)
7.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (7)
10.ವಾರದ ಕೊನೆಗೆ ಬಂದಿರುವ ಗ್ರಾಮ ರಕ್ಷಕ (4)
11ಸನಿಹದಲ್ಲಿರುವ ತೊಟ್ಟು! (2)
13.ಕೆತ್ತನೆ ಕೆಲಸ ಮಾಡುವವನು (4)
14.ಮರಮುಟ್ಟು ಇತ್ಯಾದಿಗಳನ್ನೆಲ್ಲಾ ನಾಶಮಾಡುವ ಕೀಟ (3)

ಮೇಲಿಂದ ಕೆಳಕ್ಕೆ
1.ಪ್ರತಿಭೆಯಲ್ಲಡಗಿದ ಕಾಂತಿ ಕಾಣುತ್ತಿದೆಯೇ? (2)
2.ವಿರಳವಾಗಿರುವ ಹರ್ಷ (3)
4.ದೇವತೆಗಳ ಒಂದು ವರ್ಗ (3)
5.ರೀತಿಯು ಈ ವಿಧವಾಗಿ ಬಂದಿದೆ (3)
6.ಧಾನ್ಯ ಸಂಗ್ರಹಿಸುವ ಸ್ಥಳ (3)
8.ಪುಷ್ಕರಿಣಿ ಹತ್ತಿರ ಹೂಡಿದ ಸಂಪು! (3)
9.ಬಂಗಾರ ಇಲ್ಲಿದೆ (3)
10.ತರಗುಟ್ಟುತ್ತಿರುವವನ ಹತ್ತಿರವಿರುವ ಒಣಗಿದ ವಸ್ತು (3)
11.ಹಲವು ಗೆಳೆಯರು ನೀಡಿದ ಮರದ ಹಾಳೆ! (3)
12.ರುಮಾಲು ಧರಿಸಿ ತಂದಿರುವ ಸರಕು (2)



5055ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾಜಿತ 3.ವಿದ್ಯಾಲಯ
5.ಕವಿ 7.ಕೆರಸಿ
8.ನಳ 10.ಮಾತ್ರೆ
11.ಸಂಭ್ರಮ 13.ಕರ
15.ತತ್ವಜ್ಞಾನ 16.ಕರಂಡಕ

ಮೇಲಿಂದ ಕೆಳಕ್ಕೆ:
1.ಪದಕ 2.ತಡಿಕೆ
3.ವಿಲಾಸಿ 4.ಯಮಳ
6.ವಿಜಯಯಾತ್ರೆ 8.ನಯವಂಚಕ
10.ಮಾರುತ 11.ಸಂಧಾನ
12.ಮರುಕ 14.ರಸಿಕ

ಸುಡೊಕು 5442

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5441 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಪತ್ ಕಾಂಗ್ರೆಸ್ ಸದಸ್ಯ– ಶಾಸಕ ಅಪ್ಪಚ್ಚು • ನಿಮಗ್ಯಾಕೆ ಆತನ ರಕ್ಷಣೆ ಉಸಾಬರಿ– ಕಾಂಗ್ರೆಸ್ ಪ್ರಶ್ನೆ

ಮೊಟ್ಟೆ ಎಸೆತ: ಎಂಟು ಜನರ ಬಂಧನ

ಪ್ರಜಾವಾಣಿ ವಾರ್ತೆ

ಸಂಪತ್

ಮಡಿಕೇರಿ: ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಕಾರಿಗೆ ಕುಶಾಲನಗರದ ಗುಡ್ಡೆಹೊಸೂರು ಬಳಿ ಕೋಳಿಮೊಟ್ಟೆ ಎಸೆದಿದ್ದ ಆರೋಪದಡಿ ಆರೋಪಿ ಸಂಪತ್ ಎಂಬಾತನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಡಿಕೇರಿಯಲ್ಲೂ 7 ಮಂದಿಯನ್ನು ಬಂಧಿಸಿದ್ದು, ಒಟ್ಟು ಬಂಧಿತರ ಸಂಖ್ಯೆ 17ಕ್ಕೆ ಏರಿದೆ. ಈ ಮಧ್ಯೆ, ಈ ಪ್ರಕರಣ ಕುತೂಹಲಕಾರಿ ತಿರುವು ಪಡೆಯುತ್ತಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಮುತ್ತಿಗೆಗೆ ಕಾಂಗ್ರೆಸ್ ಕರೆ ನೀಡಿರುವ ಆಗಸ್ಟ್ 26ರಂದೇ ಬಿಜೆಪಿಯೂ ಜನಜಾಗೃತಿ ಸಮಾವೇಶ ಏರ್ಪಡಿಸಿದೆ.

'ಮೊಟ್ಟೆ ಎಸೆದ ದಿನವೇ ಆರೋಪಿಯನ್ನು ಠಾಣೆಗೆ ಕರೆತರಲಾಗಿತ್ತು. ಆರೋಗ್ಯ ಸಮಸ್ಯೆಗಳ ಕಾರಣಕ್ಕೆ ಮಡಿಕೇರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಆತ ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದ. ಮಾಧ್ಯಮದವರು ಎಂದು ಹೇಳಿಕೊಂಡ ಕೆಲವರಿಗೆ ಕುಶಾಲನಗರದಲ್ಲಿ ಹೇಳಿಕೆ ಕೊಡುತ್ತಿದ್ದಾಗ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಸಂಪತ್ ಕಾಂಗ್ರೆಸ್ ಬಾವುಟ, ಶಾಲು ಹಾಕಿಕೊಂಡು ನಿಂತಿರುವ ಚಿತ್ರವು ನನ್ನ ಬಳಿ ಇದೆ. ಆತ ಬಿಜೆಪಿ ಸದಸ್ಯತ್ವ ಪಡೆದಿಲ್ಲ. ಸದಸ್ಯತ್ವ ಪಡೆದಿದ್ದರೆ ಕೂಡಲೇ ಪಕ್ಷದಿಂದ ಉಚ್ಚಾಟಿಸಲಾಗುವುದು. ಮೊಟ್ಟೆ ಎಸೆದವರು ಬಿಜೆಪಿ ಕಾರ್ಯಕರ್ತರೆಂಬ ಪುರಾವೆಗಳಿದ್ದರೆ ಪೊಲೀಸರಿಗೆ ನೀಡಬಹುದು' ಎಂದು ಶಾಸಕಅಪ್ಪಚ್ಚುರಂಜನ್ ಹೇಳಿದ್ದಾರೆ.

ಸಚಿವರಿಗೆ ಕಪ್ಪುಬಾವುಟ ಪ್ರದರ್ಶನ: (ಮೈಸೂರು ವರದಿ): ಮೊಟ್ಟೆ ಎಸೆದಿರುವುದನ್ನು ಖಂಡಿಸಿ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಇಲ್ಲಿ ಸಚಿವ ಎಸ್.ಟಿ.ಸೋಮಶೇಖರ್‌ಗೆ ಶನಿವಾರ ಕಪ್ಪುಬಾವುಟ ಪ್ರದರ್ಶಿಸಿ, ಘೋಷಣೆ ಕೂಗಿದರು.

ಜಾಮೀನು ಮಂಜೂರು: ಮುಖ್ಯ ಆರೋಪಿ ಸಂಪತ್ ಸೇರಿದಂತೆ ಎಲ್ಲ 17 ಆರೋಪಿಗಳಿಗೂ ಕೋರ್ಟ್ ಜಾಮೀನು ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಟ್ಟೆ ಎಸೆದವರ ಮೇಲೆ ಸರ್ಕಾರ ಕ್ರಮಕೈಗೊಳ್ಳಲಿದೆ. ಇದನ್ನೇ ಮುಂದಿಟ್ಟು ಕಾಂಗ್ರೆಸ್‌ನವರು ಜನರ ಪ್ರಚೋದಿಸುವುದು ಸರಿಯಲ್ಲ

ಡಾ.ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

ಕಾಂಗ್ರೆಸಿಗನಾಗಿದ್ದರೆ ಬಿಡುಗಡೆ ಮಾಡಿಸಿದ್ದೇಕೆ?: ಸಿದ್ದರಾಮಯ್ಯ

ಬೆಂಗಳೂರು: 'ಮೊಟ್ಟೆ ಎಸೆದ ವ್ಯಕ್ತಿ ಕಾಂಗ್ರೆಸ್ ಕಾರ್ಯಕರ್ತನಾಗಿದ್ದರೆ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ರಾತ್ರೋರಾತ್ರಿ ಪೊಲೀಸ್ ಠಾಣೆಗೆ ಹೋಗಿ ಬಿಡಿಸಿಕೊಂಡು ಯಾಕೆ ಬರಬೇಕಾಗಿತ್ತು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಕಾಂಗ್ರೆಸ್‌ನವನೆಂದು ಹೇಳಿಕೊಂಡರೆ ಮಾತ್ರ ಪೊಲೀಸರಿಂದ ಬಿಡಿಸ್ತೇನೆ ಎಂದು ಷರತ್ತು ಹಾಕಿ ಬಿಡುಗಡೆ ಮಾಡಿದಿರಾ' ಎಂದು ಬಿಜೆಪಿ ನಾಯಕರನ್ನು ಕೆಣಕಿದ್ದಾರೆ.

'ಆಪರೇಷನ್ ಕಮಲ' ಎಂದರೆ ಶಾಸಕರಿಗೆ ಮಾತ್ರ ಎಂದು ತಿಳಿದುಕೊಂಡಿದ್ದೆವು. ಈಗ ಬೀದಿ ಪುಂಡರ 'ಆಪರೇಷನ್ ಕಮಲ' ಕೂಡಾ ಬಿಜೆಪಿ ನಡೆಸುತ್ತದೆ ಎನ್ನುವುದು ಮಡಿಕೇರಿಯಲ್ಲಿ ಸಾಬೀತಾಗಿದೆ. ಬಿಜೆಪಿಯ ಇಂತಹ ನಾಟಕಗಳೆಲ್ಲ ಹಳತಾಗಿದೆ. ಮೊಟ್ಟೆ ಎಸೆದವ ಕಾಂಗ್ರೆಸ್ ಪಕ್ಷದವನಾಗಿದ್ದರೆ ಅವನನ್ನು ಮೊದಲು ಜೈಲಿಗೆ ಕಳುಹಿಸಿ. ನಿಮಗ್ಯಾಕೆ ಅವನ ಹಿತರಕ್ಷಣೆಯ ಉಸಾಬರಿ' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿಕೆಶಿಯೇ ಮೊಟ್ಟೆ ಹೊಡೆಸಿರಬಹುದು: ಕಟೀಲ್

ಬೆಂಗಳೂರು: 'ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಹೊಡೆಸಿದ ಘಟನೆ ಹಿಂದೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ಇರಬಹುದು. ಈ ಬಗ್ಗೆಯೂ ತನಿಖೆಯಾಗಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವುದಾಗಿ ಕಾಂಗ್ರೆಸ್ ಕಾರ್ಯಕರ್ತನೇ ಒಪ್ಪಿಕೊಂಡಿದ್ದಾನೆ. ಅವರು ಈಗ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧವೇ ಮಡಿಕೇರಿಗೆ ಪಾದಯಾತ್ರೆ ಮಾಡುತ್ತಾರಾ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರು ಹಿಂದೂ ಧರ್ಮವನ್ನು ಅವಹೇಳನ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾದ ಸಾವರ್ಕರ್ ಅವರನ್ನೂ ಅಪಮಾನಿಸಿದ್ದಾರೆ. ಈ ಎರಡನ್ನೂ ಕಾಂಗ್ರೆಸ್‌ನವರೇ ವಿರೋಧಿಸುತ್ತಿರುವುದು ಈಗ ಸ್ಪಷ್ಟವಾಗಿದೆ' ಎಂದರು.

ಮೈಸೂರು ಭಾಗದಲ್ಲಿ ನಿಲ್ಲದ ಪ್ರತಿಭಟನೆ

ಮೈಸೂರು: ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದ ಘಟನೆ ವಿರೋಧಿಸಿ ಮೈಸೂರು, ಕೊಡಗು, ಹಾಸನ, ಚಾಮರಾಜನಗರ, ಮಂಡ್ಯ ಜಿಲ್ಲೆಯಲ್ಲಿ ಶನಿವಾರವೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಮೊಟ್ಟೆ ಎಸೆದ ನಿಮಗೆ ಸಗಣಿ ಎರಚುತ್ತೇವೆ' ಎಂದು ಮಂಡ್ಯ ಜಿಲ್ಲೆ ಕಿಕ್ಕೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖಂಡರಾದ ಕೋಡಿಮಾರನಹಳ್ಳಿ ದೇವರಾಜು ಹೇಳಿದರು.

ಹಾಸನ ಜಿಲ್ಲೆ ಚನ್ನರಾಯಪಟ್ಟಣ, ಬೇಲೂರು ತಾಲ್ಲೂಕಿನ ಹಗರೆಯಲ್ಲಿ ಮನವಿ ಸ್ವೀಕರಿಸಲು ತಡವಾಗಿ ಬಂದರು ಎಂದು ತಹಶೀಲ್ದಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೊಡಗಿನ ಕುಶಾಲನಗರ ಮತ್ತು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆಯಲ್ಲಿ ಜಾಥಾ ನಡೆಯಿತು.

'ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ'

ಧರ್ಮ ವಿಭಜನೆ ಕುರಿತ ಹೇಳಿಕೆ – ಸಿದ್ದರಾಮಯ್ಯ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಮೀಜಿ ಎದುರು ಯಾವ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸಿಲ್ಲ. ಆಗ ಏನೇನು ನಡೆಯಿತು ಎಂಬುದನ್ನಷ್ಟೇ ಹೇಳಿದ್ದೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಹಿಂದೂ ಧರ್ಮ ಒಡೆಯುವ ಪ್ರಯತ್ನ ನಡೆಸಿದ್ದಕ್ಕಾಗಿ ಸಿದ್ದರಾಮಯ್ಯ ಪಶ್ಚಾತ್ತಾಪ ವ್ಯಕ್ತಪಡಿಸಿದರು' ಎಂಬ ರಂಭಾಪುರಿ ಮಠದ ಪ್ರಸನ್ನ ವೀರಸೋಮೇಶ್ವರ ಸ್ವಾಮೀಜಿ ಹೇಳಿಕೆ ಕುರಿತು ಶನಿವಾರ ಪ್ರತಿಕ್ರಿಯಿಸಿದ ಅವರು, 'ಧರ್ಮ ಒಡೆಯುವ ಉದ್ದೇಶ ನಮಗೆ ಇರಲಿಲ್ಲ. ಶಾಮನೂರು ಶಿವಶಂಕರಪ್ಪ, ಮಾತೆ ಮಹಾದೇವಿ ಪತ್ರ ನೀಡಿ ಪ್ರತ್ಯೇಕ ಧರ್ಮ ಸ್ಥಾನಮಾನ ನೀಡುವಂತೆ ಕೋರಿದ್ದರು. ಆ ಬಳಿಕ ಏನೇನು ಆಯಿತು ಎಂಬುದನ್ನು ಸ್ವಾಮೀಜಿಗೆ ವಿವರಿಸಿದ್ದೆ ಅಷ್ಟೆ' ಎಂದರು.

ನಾಗಮೋಹನದಾಸ್ ಸಮಿತಿ ವರದಿ ಹಾಗೂ ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಿದ ವಿಚಾರದ ಹಿಂದೆ ಯಾವ ಧರ್ಮ ಒಡೆಯುವ ಉದ್ದೇಶವೂ ಇರಲಿಲ್ಲ ಎಂಬುದನ್ನು ಅವರಿಗೆ ತಿಳಿಸಲಾಗಿದೆ. ನೋವು ತೋಡಿಕೊಂಡಿದ್ದು, ಪಶ್ಚಾತ್ತಾಪ ವ್ಯಕ್ತಪಡಿಸಿದ್ದು ಏನೂ ಆಗಿಲ್ಲ ಎಂದು ಹೇಳಿದರು.

'ಪಶ್ಚಾತ್ತಾಪದ ಕುರಿತ ಸ್ವಾಮೀಜಿ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ಇದರಲ್ಲಿ ಯಾವ ವಿವಾದವೂ ಇಲ್ಲ. ನೀವೇ ವಿವಾದ ಸೃಷ್ಟಿಸುತ್ತಿದ್ದೀರಿ' ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಪ್ರತಿಕ್ರಿಯೆಗೆ ರಂಭಾಪುರಿಶ್ರೀ ನಕಾರ

ಚಿಕ್ಕಮಗಳೂರು: 'ರಂಭಾಪುರಿ ಪೀಠಕ್ಕೆ ಭೇಟಿ ನೀಡಿದಾಗ ನೋವು ತೋಡಿಕೊಂಡಿಲ್ಲ, ಪಶ್ಚಾತ್ತಾಪಪಟ್ಟಿಲ್ಲ, ಆಗಿರುವುದನ್ನು ವಿವರಿಸಿ ಹೇಳಿದ್ದೇನೆ ಅಷ್ಟೆ' ಎಂದು ವಿಧಾನಸಭೆ ವಿರೋಧ ಸಿದ್ದರಾಮಯ್ಯ ಹೇಳಿರುವುದಕ್ಕೆ ಪ್ರತಿಕ್ರಿಯಿಸಲು ರಂಭಾಪುರಿಶ್ರೀ ನಿರಾಕರಿಸಿದರು.

ಸುದ್ದಿಗಾರರು ಸ್ವಾಮೀಜಿ ಅವರ ಪ್ರತಿಕ್ರಿಯೆ ಪಡೆಯಲು ಮಠಕ್ಕೆ ಶನಿವಾರ ಹೋಗಿದ್ದರು. ಆದರೆ, ಅವರು ಪ್ರತಿಕ್ರಿಯೆ ನೀಡಲಿಲ್ಲ.

ಸಿದ್ದರಾಮಯ್ಯನವರು ಶುಕ್ರವಾರ ಮಠಕ್ಕೆ ಭೇಟಿ ನೀಡಿ ತೆರಳಿದ ಬಳಿಕ ಮಾಧ್ಯಮದವರ ಜತೆ ಮಾತನಾಡಿದ್ದ ಶ್ರೀಗಳು, 'ಧರ್ಮ ಒಡೆಯುವ ಪ್ರಯತ್ನ ಮಾಡಿರಲಿಲ್ಲ. ಕೆಲವರು ನನ್ನನ್ನು ದಾರಿ ತಪ್ಪಿಸಿದ್ದರು. ಅದರಿಂದಾಗಿ ಪಶ್ಚಾತ್ತಾಪವಾಗಿದೆ ಎಂದು ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ' ಎಂದು ತಿಳಿಸಿದ್ದರು.

ಸ್ವಾಮೀಜಿ ಹೇಳಿಕೆ ಬಳಿಕ ಸಿದ್ದರಾಮಯ್ಯ ಕೂಡ ಮಾತನಾಡಿದ್ದಾರೆ. ಈ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದರೆ, ಆ ಸಂದರ್ಭದಲ್ಲಿ ಏನು ನಡೆಯಿತು ಎಂಬ ಸತ್ಯ ಎಲ್ಲರಿಗೂ ಗೊತ್ತಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಿದ್ದರಾಮಯ್ಯ ಕುರಿತ ಸ್ವಾಮೀಜಿ ಹೇಳಿಕೆ ಬಗ್ಗೆ ನಾನೇನೂ ಪ್ರತಿಕ್ರಿಯಿಸುವುದಿಲ್ಲ. ಅವರ ಸ್ವಭಾವ ಏನು ಎಂಬುದು ಎಲ್ಲರಿಗೂ ಗೊತ್ತಿದೆ

ಬಿ.ಎಸ್. ಯಡಿಯೂರಪ್ಪ ಬಿಜೆಪಿ ಶಾಸಕ

ತಪ್ಪೊಪ್ಪಿಕೊಂಡಿದ್ದಾರೆ ಎಂದು ವರದಿಯಾದ 12 ಗಂಟೆಗಳ ಒಳಗೆ ಸಿದ್ದರಾಮಯ್ಯ 'ಯೂ ಟರ್ನ್' ಹೊಡೆದಿದ್ದಾರೆ. ಮುಂದೆ ಯಾವ 'ಟರ್ನ್' ಹೊಡೆಯುತ್ತಾರೋ ಕಾದು ನೋಡಬೇಕಿದೆ

ಸಿ.ಸಿ. ಪಾಟೀಲ, ಸಚಿವ

ತಪ್ಪು ಒಪ್ಪಿಕೊಳ್ಳುವುದು ತಪ್ಪಲ್ಲ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ನಾವೇನೂ ದೇವರಲ್ಲ. ತಪ್ಪು ಮಾಡಿದ್ದರೆ ಅದನ್ನು ಒಪ್ಪಿಕೊಳ್ಳುವುದು ತಪ್ಪಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ರಂಭಾಪುರಿ ಶ್ರೀಗಳ ಹೇಳಿಕೆ ಕುರಿತು ಶನಿವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಮತ್ತು ಸ್ವಾಮೀಜಿ ನಡುವೆ ಏನು ಸಂಭಾಷಣೆ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ' ಎಂದರು.

'ಆಗ ನಾನು ಸಂಪುಟದಲ್ಲಿದ್ದೆ. ಲಿಂಗಾಯತ ಧರ್ಮದ ವಿಚಾರದಲ್ಲಿ ಸಾಕಷ್ಟು ವಿರೋಧ ಮಾಡಿದ್ದೆ. ಬಹಿರಂಗವಾಗಿಯೇ ಕ್ಷಮೆ ಕೇಳಿದ್ದೆ. ಈ ವಿಚಾರದಲ್ಲಿ ನಾವು ಕೈ ಹಾಕಬಾರದಿತ್ತು ಎಂದಿದ್ದೆ' ಎಂದು ಹೇಳಿದರು.

'ಕಾಂಗ್ರೆಸ್ ಹಿಂದುತ್ವ ಒಪ್ಪಿಕೊಳ್ಳಲಿ' ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಹಿಂದುತ್ವ ಬಿಜೆಪಿಯವರ ಅಪ್ಪನ ಆಸ್ತಿಯೇನೂ ಅಲ್ಲ. ಶಿವನ ಮಗ ಕುಮಾರ ಎಂಬುದು ನನ್ನ ಹೆಸರು. ವಿರೋಧ ಪಕ್ಷದ ನಾಯಕರಿಗೆ ಸಿದ್ದರಾಮಯ್ಯ ಎಂಬ ಹೆಸರಿದೆ. ಕಲ್ಲು, ಮಣ್ಣು ಎಂದು ಹೆಸರಿಟ್ಟುಕೊಂಡಿದ್ದೇವೆಯೆ? 25 ವರ್ಷಗಳ ಹಿಂದೆ ಯುಗಾದಿ ಹಬ್ಬದ ದಿನ ಸೋನಿಯಾ ಗಾಂಧಿಯವರ ಮನೆಗೆ ಹೋಗಿದ್ದೆವು. ಅವರು ಆಗ ಯುಗಾದಿ ಹಬ್ಬ ಆಚರಣೆ ಮಾಡುತ್ತಿದ್ದರು' ಎಂದರು.

ತೀರ್ಥಹಳ್ಳಿ ತಾಲ್ಲೂಕಿನ ಶಾಂತವೇರಿ ಮಣ್ಣನ್ನು ಶಾಂತವೇರಿ ಗೋಪಾಲಗೌಡರ ಜನ್ಮಶತಾಬ್ದಿ ಜಾಥಾ ಸಂಚಾಲಕರಿಗೆ ಸ್ಥಳೀಯರು ಶನಿವಾರ ಹಸ್ತಾಂತರಿಸಿದರು

ಶಾಂತವೇರಿಯ ಮಣ್ಣಿನೊಂದಿಗೆ ಜಾಥಾ

ತೀರ್ಥಹಳ್ಳಿ: ಸಮಾಜವಾದಿ ಹೋರಾಟಗಾರಶಾಂತವೇರಿಗೋಪಾಲಗೌಡರಜನ್ಮ ಶತಾಬ್ದಿ ಅಂಗವಾಗಿ ಅವರ ಹುಟ್ಟೂರು ಶಾಂತವೇರಿಯಿಂದ ಬೆಂಗಳೂರಿಗೆ ಶನಿವಾರ ಜಾಥಾ ಹೊರಟಿತು.

ಜನ್ಮಶತಾಬ್ದಿ ಜಾಥಾ ಸಮಿತಿಯ ಸದಸ್ಯರು, ಶಾಂತವೇರಿಯ ಮಣ್ಣು ತೆಗೆದುಕೊಂಡು ಬೆಂಗಳೂರಿಗೆ ಹೊರಟರು. ಈ ಮಣ್ಣನ್ನು ಬೆಂಗಳೂರಿನ ಗಾಂಧಿಭವನ ಆವರಣದ ಗಿಡಗಳಿಗೆ ಭಾನುವಾರ (ಆ.21) ಸಮರ್ಪಿಸಲಾಗುತ್ತದೆ.

ಅವರ ಜನ್ಮಸ್ಥಳ ಅಭಿವೃದ್ಧಿಪಡಿಸುವ ಬೇಡಿಕೆಯೊಂದಿಗೆ ಜಾಥಾ ನಡೆಯುತ್ತಿದೆ. ಜಾಥಾ ಶಿವಮೊಗ್ಗ, ಭದ್ರಾವತಿ, ತರೀಕೆರೆ, ಅರಸೀಕೆರೆ, ಗುಬ್ಬಿ, ತುಮಕೂರು ಮಾರ್ಗವಾಗಿ ಬೆಂಗಳೂರಿನ ಗಾಂಧಿ ಭವನ ತಲುಪಲಿದೆ. ಜನ್ಮಶತಾಬ್ದಿ ಜಾಥಾ ಸಮಿತಿ ಸಂಚಾಲಕರಾದ ಎನ್.ಶಿವಾನಂದ ಕುಗ್ವೆ, ಎನ್.ಡಿ. ವಸಂತ್ ಕುಮಾರ್ ನೇತೃತ್ವ ವಹಿಸಿದ್ದಾರೆ.

ಕೊನೆಗೂ ಪಠ್ಯಕ್ಕೆ 'ಸಂವಿಧಾನ ಶಿಲ್ಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಷ್ಕೃತ ಪಠ್ಯಪುಸ್ತಕದಲ್ಲಿನ ಕೆಲವು ಲೋಪಗಳನ್ನು ಸರಿಪಡಿಸಿರುವ ಸರ್ಕಾರ ತಿದ್ದುಪಡಿ ಸುತ್ತೋಲೆ ಹೊರಡಿಸಿದ್ದು, ಪ್ರತಿ ಶಾಲೆಗೂ ತಲಾ ಒಂದು ತಿದ್ದುಪಡಿ ಪುಸ್ತಕ ಕಳುಹಿಸಿದೆ.

ಪಠ್ಯಪುಸ್ತಕಗಳ ಪರಿಷ್ಕರಣೆ ಹೆಸರಿನಲ್ಲಿ ತಪ್ಪು ಮಾಹಿತಿಗಳನ್ನು ಸೇರಿಸಲಾಗಿದೆ ಎಂಬ ಆಪಾದನೆಯನ್ನು ಸರ್ಕಾರ ಹೊತ್ತುಕೊಂಡಿತ್ತು. ಯಾವುದೇ ತಪ್ಪು ಆಗಿಲ್ಲ ಎಂದು ಶಾಲಾ ಶಿಕ್ಷಣ ಸಚಿವರೇ ಪ್ರತಿಪಾದಿಸಿದ್ದರು. ಸಾರ್ವಜನಿಕ ವಲಯದಲ್ಲಿ ಆಕ್ರೋಶ ತೀವ್ರಗೊಂಡ ಬಳಿಕ ತಪ್ಪನ್ನು ಒಪ್ಪಿಕೊಂಡಿದ್ದ ಸರ್ಕಾರ, ಕೊನೆಗೂ ಕೆಲವು ಪಾಠಗಳನ್ನು ತಿದ್ದುಪಡಿ ಮಾಡಿದೆ.

ಮರು ಪರಿಷ್ಕೃತಗೊಂಡು ಈಗಾಗಲೇ ಶಾಲೆಗಳಿಗೆ ಸರಬರಾಜು ಮಾಡಲಾಗಿರುವ ಪುಸ್ತಕಗಳಲ್ಲಿ ಈ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಬೋಧನೆ, ಕಲಿಕೆ, ಮೌಲ್ಯಮಾಪನಗಳಲ್ಲಿ ಅಳವಡಿಸಿಕೊಳ್ಳುವಂತೆ ಕರ್ನಾಟಕ ಪಠ್ಯಪುಸ್ತಕ ಸಂಘ ಶಿಕ್ಷಕರಿಗೆ ಸೂಚಿಸಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರಿನ ಮುಂದಿದ್ದ 'ಸಂವಿಧಾನ ಶಿಲ್ಪಿ' ಪದವನ್ನು ಮರು ಪರಿಷ್ಕೃತ ಪಠ್ಯದಲ್ಲಿ ಕೈಬಿಡಲಾಗಿತ್ತು. ಇದಕ್ಕೆ ಸಾರ್ವಜನಿಕರು, ಪ್ರಗತಿಪರರು, ದಲಿತ ಸಂಘಟನೆಗಳಿಂದ ಭಾರಿ ಆಕ್ಷೇಪಕ್ಕೆ ವ್ಯಕ್ತವಾಗಿತ್ತು. 9ನೇ ತರಗತಿಯ ಸಮಾಜ ವಿಜ್ಞಾನದ 'ನಮ್ಮ ಸಂವಿಧಾನ' ಪಾಠದಲ್ಲಿ ಮತ್ತೆ ಸೇರಿಸಲಾಗಿದೆ.

'ಭಕ್ತಿಪಂಥ ಹಾಗೂ ಸೂಫಿ ಪರಂಪರೆ' ಪಾಠವನ್ನು 7ನೇ ತರಗತಿಯ ಸಮಾಜ ವಿಜ್ಞಾನದಿಂದ ತೆಗೆಯಲಾಗಿತ್ತು. ಈ ಪಾಠವನ್ನು 2022–23ನೇ ಸಾಲಿನಿಂದಲೇ ಬೋಧಿಸಲು ಸೂಚಿಸಲಾಗಿದೆ. 6ನೇ ತರಗತಿಯ 'ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ' ಪಾಠದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿರುವ ಮಠಗಳ ಪಟ್ಟಿಯಲ್ಲಿ ತುಮಕೂರಿನ ಸಿದ್ದಗಂಗಾ ಮಠದ ಹೆಸರು ಬಿಟ್ಟುಹೋಗಿತ್ತು. ತಿದ್ದುಪಡಿಯಲ್ಲಿ ಸಿದ್ಧಗಂಗಾ ಮಠದ ವಿವರ ಸೇರಿಸಲಾಗಿದೆ.

ಮತ್ತೆ ಬಸವಣ್ಣಗೆ 'ವಿಶ್ವಗುರು' ಸ್ಥಾನ

9ನೇ ತರಗತಿಯ 'ಭಾರತದ ಮತ ಪ್ರವರ್ತಕರು' ಪಾಠದಲ್ಲಿ ಬಸವೇಶ್ವರರಿಗೆ ಇದ್ದ 'ವಿಶ್ವಗುರು' ವಿಶೇಷಣವನ್ನು ಕೈಬಿಡಲಾಗಿತ್ತು. ಹಿಂದಿನ ಪಠ್ಯದಲ್ಲಿದ್ದ 'ಬ್ರಾಹ್ಮಣರ ಪದ್ಧತಿಯಂತೆ ಉಪನಯನ ಸಂಸ್ಕಾರ ನಡೆಯುವಾಗ ತನ್ನ ತಾಯಿ, ಸಹೋದರಿ, ಇತರೆ ಗೆಳೆಯರಿಗೆ ಇಲ್ಲದ ಉಪನಯನ ತನಗೂ ಬೇಡವೆಂದು ಜನಿವಾರ ತಿರಸ್ಕರಿಸಿ, ಕೂಡಲಸಂಗಮಕ್ಕೆ ನಡೆದರು' ಎಂಬ ವಿವರಗಳನ್ನು ತಿರುಚಿ ಬ್ರಾಹ್ಮಣ ಪದ್ಧತಿ, ಜನಿವಾರ ತಿರಸ್ಕಾರ ಪದಗಳನ್ನು ಕೈಬಿಟ್ಟು, ಉಪನಯನದ ನಂತರ ಕೂಡಲ ಸಂಗಮಕ್ಕೆ ನಡೆದರು ಎಂದು ಪರಿಷ್ಕರಣೆ ಮಾಡಲಾಗಿತ್ತು. ಈಗ ಹಿಂದಿನಂತೆ ಮತ್ತೆ ಎಲ್ಲ ಅಂಶಗಳನ್ನೂ ಸೇರಿಸಲಾಗಿದೆ.

ಕೋರ್ಟ್‌ಗೆ ಕರೆತಂದಿದ್ದ ಆರೋಪಿ ಲಾಡ್ಜ್‌ನಲ್ಲಿ

ಬಚ್ಚಾ ಖಾನ್

ಧಾರವಾಡ: ಕೊಲೆ ಪ್ರಕರಣದ ವಿಚಾರಣೆಗೆ ಬಿಗಿ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಕರೆತರಲಾಗಿದ್ದ ಆರೋಪಿಯು, ಸಮೀಪದ ಸತ್ತೂರಿನ ಲಾಡ್ಜ್‌ನಲ್ಲಿ ಯುವತಿ ಜೊತೆಗಿದ್ದ ಪ್ರಕರಣ ನಡೆದಿದೆ. ಲಾಡ್ಜ್ ಮೇಲೆ ದಾಳಿ ನಡೆಸಿದ ಪೊಲೀಸರು ಆತನ ವಶಕ್ಕೆ ಪಡೆದರು.

ಫ್ರೂಟ್ ಇರ್ಫಾನ್ ಕೊಲೆ ಪ್ರಕರಣದ ಆರೋಪಿ ಬಚ್ಚಾ ಖಾನ್‌ನನ್ನು ಬಳ್ಳಾರಿ ಕಾರಾಗೃಹದಲ್ಲಿ ಇಡಲಾಗಿತ್ತು. ವಿಚಾರಣೆಗೆ ಆತನನ್ನು ಇಲ್ಲಿನ ನ್ಯಾಯಾಲಯಕ್ಕೆ ಶನಿವಾರ ಕರೆತಂದ ವೇಳೆ ಸತ್ತೂರು ಬಳಿಯ ಲಾಡ್ಜ್‌ನಲ್ಲಿ ಯುವತಿಯೊಂದಿಗೆ ಖಾಸಗಿ ಸಮಯ ಕಳೆಯಲು ಪೊಲೀಸರೇ ಆತನಿಗೆ ವ್ಯವಸ್ಥೆ ಮಾಡಿಕೊಟ್ಟಿರುವುದು ಈಗ ಬೆಳಕಿಗೆ ಬಂದಿದೆ.

'ಬಚ್ಚಾ ಖಾನ್ ಬರುವ ಮೊದಲೇ ಯುವತಿ ಲಾಡ್ಜ್ ಕೋಣೆಯೊಳಗಿದ್ದಳು. ಪೊಲೀಸರು ಆತನನ್ನು ಅಲ್ಲಿಗೆ ಕರೆತಂದು ಬಿಟ್ಟರು. ಈ ಖಚಿತ ಮಾಹಿತಿ ಆಧರಿಸಿ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಲಾಭೂರಾಮ್ ಮತ್ತು ಇತರ ಅಧಿಕಾರಿಗಳು ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಯನ್ನು ವಿದ್ಯಾಗಿರಿ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಪ್ರತಿ ಬಾರಿ ವಿಚಾರಣೆಗೆ ಬರುವಾಗ ಈತ ನಗರದ ಸುತ್ತಮುತ್ತಲಿನ ಲಾಡ್ಜ್‌ಗಳನ್ನು ಮೊದಲೇ ಕಾಯ್ದಿರಿಸಿ, ಖಾಸಗಿ ಸಮಯ ಕಳೆಯುತ್ತಿದ್ದ ಎಂಬ ಮಾಹಿತಿಯನ್ನೂ ಪೊಲೀಸರು ಕಲೆ ಹಾಕಿದ್ದಾರೆ.

'ಮೀಸಲಾತಿ ಬೇಡಿಕೆ ಚುನಾವಣೆ ನಂತರ ಚರ್ಚೆ'

ಹುಬ್ಬಳ್ಳಿ: 'ವೀರಶೈವ, ಲಿಂಗಾಯತ ಸೇರಿ 99 ಒಳ ಪಂಗಡಗಳಿಗೆ ಮೀಸಲಾತಿ ದೊರಕಿಸಿ ಕೊಡುವ ವಿಚಾರ ಕೈಬಿಟ್ಟಿಲ್ಲ. ಏನು ಮಾಡಬೇಕು ಎಂದು ಚುನಾವಣೆ ಬಳಿಕ ಚರ್ಚಿಸಲಾಗುವುದು' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಶನಿವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಂಚ ಪೀಠಾಧಿಪತಿಗಳು, ವೀರಶೈವ ಮಠಾಧೀಶರು, ಲಿಂಗಾಯತ ಸ್ವಾಮೀಜಿಗಳು ಸೇರಿದಂತೆ ಎಲ್ಲ ಉಪಪಂಗಡಗಳ ಮುಖಂಡರ ಜತೆ ಚರ್ಚಿಸಲಾಗುವುದು ಎಂದರು.

'ಕಳೆದ ಬಾರಿ ವಿಸ್ತೃತ ಚರ್ಚೆ ನಡೆಯಲಿಲ್ಲ. ಒಮ್ಮತದ ಅಭಿಪ್ರಾಯ ಪಡೆದೇ ಮುಂದಿನ ಹೆಜ್ಜೆ ಇಡಲಾಗುವುದು' ಎಂದರು.

ಶಿರಾಡಿ: ಭಾರಿ ವಾಹನಕ್ಕೆ ಅವಕಾಶ

ಹಾಸನ: ದೋಣಿಗಲ್ ಬಳಿ ಭೂಕುಸಿತದಿಂದ ಸಂಚಾರ ಸ್ಥಗಿತಗೊಳಿಸಲಾಗಿದ್ದ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಈಗ ಬದಲಿ ರಸ್ತೆ ಅಭಿವೃದ್ಧಿಪಡಿಸಲಾಗಿದ್ದು, ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಬದಲಿ ಮಾರ್ಗದಲ್ಲಿ ಮಂಗಳೂರಿನಿಂದ ಬೆಂಗಳೂರು ಕಡೆಗೆ ಹೋಗುವ ವಾಹನಗಳು ಬೆಳಿಗ್ಗೆ 6ರಿಂದ ಬೆಳಿಗ್ಗೆ 8 ಹಾಗೂ ಮಧ್ಯಾಹ್ನ 12ರಿಂದ ಮಧ್ಯಾಹ್ನ 3ರವರೆಗೆ ಸಂಚರಿಸಬಹುದು. ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ವಾಹನಗಳು ಬೆಳಿಗ್ಗೆ 9ರಿಂದ 11 ಹಾಗೂ ಮಧ್ಯಾಹ್ನ 3ರಿಂದ ಸಂಜೆ 6 ಗಂಟೆವರೆಗೆ ಸಂಚರಿಸಬೇಕು ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕಂದಾಯ ಗ್ರಾಮಗಳಾಗಿ 453 ತಾಂಡಾಗಳು

ಕಲಬುರಗಿ: 'ಎರಡು ತಿಂಗಳಲ್ಲಿ ಜಿಲ್ಲೆಯಲ್ಲಿ 453 ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮವಾಗಿ ಘೋಷಿಸಿ, ಹಕ್ಕುಪತ್ರ ವಿತರಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ಘೋಷಿಸಿದರು.

ಸೇಡಂ ತಾಲ್ಲೂಕಿನ ಆಡಕಿ ಗ್ರಾಮದಲ್ಲಿ ಶನಿವಾರ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅವರು, 'ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ಪೈಲಟ್ ಯೋಜನೆಯಾಗಿ ಕಲಬುರಗಿ ಜಿಲ್ಲೆ ಆಯ್ಕೆ ಮಾಡಲಾಗಿದೆ' ಎಂದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಇಂಜನಿಯರ್ (ವಿ)ರವರ ಕಛೇರಿ, ಕಾರ್ಯ ಮತ್ತು ಪಾಲನಾ ವೃತ್ತ ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು. ದೂರವಾಣಿ ಸಂಖ್ಯೆ : 0821–2462131, 2462132

ಸಂಖ್ಯೆ:SEE/EE(O)/AEE(O)/F-72/2022-23/4975 ದಿನಾಂಕ: 20.08.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಅಧೀಕ್ಷಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು ಚಾವಿಸನಿನಿ ವತಿಯಿಂದ ದಸರಾ–2022 ಹಬ್ಬದ ಪ್ರಯುಕ್ತ ಮೈಸೂರು ನಗರದ ಮುಖ್ಯ ರಸ್ತೆ, ವೃತ್ತ ಮತ್ತು ವಿವಿಧ ಪ್ರತಿಕೃತಿಗಳಿಗೆ ತಾತ್ಕಾಲಿಕ ವಿದ್ಯುತ್ ದೀಪಾಲಂಕಾರ ಕಾಮಗಾರಿಗಳನ್ನು ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಬಾಡಿಗೆ ಆಧಾರದ ಮೇಲೆ ಪೂರ್ಣಗುತ್ತಿಗೆಯಡಿಯಲ್ಲಿ ನಿರ್ವಹಿಸಲು ಅಲ್ಪಾವದಿ ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಕಾಮಗಾರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **http://eproc.karnataka.gov.in**ನಲ್ಲಿ **ದಿನಾಂಕ: 22.08.2022 16:00 ಗಂಟೆ** ನಂತರ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **ಹೆಲ್ಪ್‌ಲೈನ್ +91–8046010000 & +91–8068948777** ಗೆ ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ಸಹಿ/–

ಅಧೀಕ್ಷಕ ಇಂಜನಿಯರ್(ವಿ)

ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ ಮೈಸೂರು.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

DIPR/MYS/KAVITA/394/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 5 ದಿನಾಂಕ: 20/08/2022

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು /ಮಾಡಲು/ ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**https://eproc.karnataka.gov.in**) ಮೂಲಕ (ಪೂರ್ವ ಅರ್ಹತೆ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ / ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ. ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @17.00 ಗಂಟೆ
ಜಿ–25/22–23	ಆಟೋಮೋಟಿವ್ ಲ್ಯೂಬ್ರಿಕೆಂಟ್ಸ್‌ಗಳ ಖರೀದಿ	15.00	22/09/2022
ಜಿ–26/22–23	ಆಟೋಮೋಟಿವ್ ಗ್ರೀಸ್‌ಗಳ ಖರೀದಿ	7.00	22/09/2022
ಜಿ–27/22–23	ಇ.ಟಿ.ಎಂ ಮಿಷಿನ್‌ಗಳಿಗೆ ಜಂಬೋ ಥರ್ಮಲ್ ರೋಲ್‌ಗಳ ಖರೀದಿ	3.50	22/09/2022
ಜಿ–28/22–23	ಅಲ್ಯೂಮಿನಿಯಂ ಸಾಕೆಟ್ಸ್ & ಡೈ ಕಾಸ್ಟಿಂಗ್ಸ್‌ಗಳ ಖರೀದಿ	0.50	22/09/2022
ಜಿ–29/22–23	ಪ್ರಿಂಟಿಂಗ್ ಆಂಡ್ ಸಪ್ಲೈ ಆಫ್ ಸಾರಿಗೆ ಸಂಪದ ನಿಯತಕಾಲಿಕೆ	0.12	22/09/2022
ಜಿ–30/22–23	ನ್ಯೂಮ್ಯಾಟಿಕ್ ಡೋರ್ ಅಸೆಂಬ್ಲಿಗಳ ಖರೀದಿ	0.30	22/09/2022
ಜಿ–31/22–23	ಪ್ರಿಕ್ಯೂಡ್ ಟ್ರೆಡ್ ರಬ್ಬರ್ ಮತ್ತು ಪೂರಕ ಸಾಮಗ್ರಿಗಳ ಖರೀದಿ	35.00	22/09/2022
ಜಿ–32/22–23	ಥರ್ಮಾಕೋಲ್‌ಗಳ ಖರೀದಿ	0.47	22/09/2022
ಜಿ–33/22–23	ಪಿ ಯು ಅಡೇಸ್ವಿ ಸೀಲೆಂಟ್‌ಗಳ ಖರೀದಿ	2.10	22/09/2022
ಜಿ–34/22–23	ಯೂ ಪಿ ಎಸ್ ಬ್ಯಾಟರಿಗಳ ಖರೀದಿ	3.00	22/09/2022
ಎ–08/22–23	ಡ್ಯಾಶ್ ಬೋರ್ಡ್ ಇನ್‌ಸ್ಟ್ರುಮೆಂಟ್ಸ್/ ಉಪಕರಣಗಳು/ ಸಾಧನಗಳು	4.50	22/09/2022
ಅಲ್ಪಾವಧಿ ಟೆಂಡರ್			
ಜಿ–35/22–23	ಸಪ್ಲೈ, ಇನ್ಸ್ಟಲೇಶನ್ ಮತ್ತು ಕಮೀಶನಿಂಗ್ ಆಫ್ ಡೀಸಲ್ ಸ್ಮೋಕ್ ಮೀಟರ್ ವಿತ್ ಎಂಜಿನ್ ಆರ್.ಪಿ.ಎಂ & ಆಯಿಲ್ ಟೆಂಪರೇಚರ್ ಗೇಜ್/ಸೆನ್ಸಾರ್ (ಟರ್ನ್‌ಕೀ ಆಧಾರದ ಮೇಲೆ)	0.40	05/09/2022
ಜಿ–36/22–23	ಹೈಡ್ರಾಲಿಕ್, ಮೆಕ್ಯಾನಿಕಲ್ ಜಾಕ್ಸ್ ವಿತ್ ಟಾಮಿ ಬಾರ್ ಆಂಡ್ ವ್ಹೀಲ್ ಸ್ಪಾನರ್ ಖರೀದಿ	1.50	05/09/2022
ಎ–09/22–23	ಎನ್ ಆರ್ ಸಿ ಇಂಜಿನ್ ಸ್ಪೇರ್ಸ್ ಖರೀದಿ	6.00	05/09/2022
ಎ–10/22–23	ಎನ್ ಆರ್ ಸಿ ಚಾಸಿಸ್ ಸ್ಪೇರ್ಸ್ ಖರೀದಿ	2.00	05/09/2022

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು. **ಸೂಚನೆ:–** ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ:**080–22230960/22234115,** ಕರೆಮಾಡಿ / **eprocurementhelpdesk@gmail. com,** ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತದೆ. ಬಿಡ್ಡುದಾರರಿಗೆ ಕರಾರಸಾನಿಗಮದಿಂದ ಸಹಾಯದ ಅಗತ್ಯವಿದ್ದರೆ **cosp@ksrtc.org,** ನಲ್ಲಿ ಸಂಪರ್ಕಿಸಬಹುದು, (**ಸಂಪರ್ಕಿಸಿ 7760990225,7760990224**).

ಸಹಿ/–, ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು

(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಎಲ್‌ಸಿ/1882/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆರ್‌ಜೆಡಿ ಸಚಿವರಿಗೆ ನೀತಿ ಸಂಹಿತೆ

ಪಟ್ನಾ (ಪಿಟಿಐ): ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಪ್ರಸಾದ್ ಯಾದವ್ ಶನಿವಾರ ಆರ್‌ಜೆಡಿ ಪಕ್ಷದ ಸಂಪುಟ ಸಚಿವರಿಗೆ ನೀತಿ ಸಂಹಿತೆ ಜಾರಿ ಮಾಡಿದ್ದಾರೆ. ಈ ಮೂಲಕ, ಆರ್‌ಜೆಡಿಯ ಹಲವು ಸಚಿವರು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ಬಗ್ಗೆ ಟೀಕೆ ವ್ಯಕ್ತವಾಗುತ್ತಿರುವ ನಡುವೆಯೇ ಪಕ್ಷದ ವರ್ಚಸ್ಸು ಹೆಚ್ಚಿಸಲು ಯತ್ನಿಸಿದ್ದಾರೆ.

ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಪಕ್ಷದ ಸಚಿವರು ಅನುಸರಿಸಬೇಕಾದ ನೀತಿಸಂಹಿತೆಗಳನ್ನು ತೇಜಸ್ವಿ ಯಾದವ್ ತಿಳಿಸಿದ್ದಾರೆ. ಸಚಿವರು ಹೊಸ ಕಾರುಗಳನ್ನು ಖರೀದಿಸಬಾರದು, ಕಾರ್ಯಕರ್ತರು ಕಾಲು ಮುಟ್ಟಿ ನಮಸ್ಕರಿಸಲು ಅವಕಾಶ ನೀಡಬಾರದು ಎಂದು ತಿಳಿಸಿದ್ದಾರೆ.

ಭೇಟಿ ವೇಳೆ ನಮಸ್ತೆ ಹೇಳಬೇಕು, ಧರ್ಮ, ಜಾತಿಯನ್ನು ಎಣಿಸದೆ ಬಡವರಿಗೆ ನೆರವಾಗಬೇಕು, ಹೂಗುಚ್ಛದ ಬದಲಿಗೆ ಪುಸ್ತಕ ಪೆನ್ನುಗಳನ್ನು ನೀಡಲು ಉತ್ತೇಜನ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ಮಥುರಾದಲ್ಲಿ ನೂಕುನುಗ್ಗಲು: ಇಬ್ಬರ ಸಾವು

ಮಥುರಾ: ಇಲ್ಲಿನ ವೃಂದಾವನದ ಬಾಂಕೆ ಬಿಹಾರಿ ಮಂದಿರದಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಣೆ ವೇಳೆ ನೂಕುನುಗ್ಗಲು ಸಂಭವಿಸಿ ಶನಿವಾರ ಮುಂಜಾನೆ ಇಬ್ಬರು ಭಕ್ತರು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಅಮರ ಜೀವಿಗೆ ಗೌರವಪೂರ್ವಕ ನಮನ
ಲೆ. ಕರ್ನಲ್ ಸಿ. ರಾಮ್‌ಪ್ರಸಾದ್
(ಜನರಲ್ ಮ್ಯಾನೇಜರ್, ಇಂಜಿನಿಯರಿಂಗ್ ವಿಭಾಗ, ಬೆಂಗಳೂರು, ಕರ್ನಾಟಕ ಇಂಡಿಯನ್ ಆಯಿಲ್ ಕಾರ್ಪೋರೇಶನ್)
(15 ಫೆಬ್ರವರಿ 1964 – 9 ಆಗಸ್ಟ್ 2022)
ಶ್ರೀ ರಾಮ್‌ಪ್ರಸಾದ್ ರವರು ದಿನಾಂಕ 9-08-2022, ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆದರ್ಶ ನಮಗೆ ದಾರಿ ದೀಪವಾಗಿರುತ್ತದೆ.
ಮೃತರ ಆತ್ಮಕ್ಕೆ ಶಾಂತಿಕೋರಲು 13ನೇ ದಿನದ ಸಂತಾಪ ಸೂಚಕ ಸಭೆಯನ್ನು
ದಿನಾಂಕ 21-08-2022 (ಭಾನುವಾರ) ಮಧ್ಯಾಹ್ನ 11.00 ರಿಂದ 3.00 ರವರೆಗೆ
ಕೃಷ್ಣ ಮಹಲ್ ವುಡ್‌ಲ್ಯಾಂಡ್ ಹೋಟೆಲ್
ನಂ.5, ರಾಜಾರಾಮ್‌ಮೋಹನ್ ರಾಯ್ ರಸ್ತೆ, ಸಂಪಂಗಿ ರಾಮನಗರ ಬೆಂಗಳೂರು – 25.
ಇಲ್ಲಿ ಏರ್ಪಡಿಸಲಾಗಿದೆ ನಂತರ ಭೋಜನವಿರುತ್ತದೆ.
ತಾವು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು,
ನೀಲ ಶಶಿಪ್ರಸಾದ್ (ಧರ್ಮಪತ್ನಿ)
ರಾಹುಲ್ ಪ್ರಸಾದ್ (ಮಗ), ಡಾಕ್ಟರ್ ರಕ್ಷಾಪ್ರಸಾದ್ (ಮಗಳು) ಮತ್ತು ಕುಟುಂಬಸ್ಥರು
Ph: +91-7829601916 | +91-9353987627

ಹಿಮಾಚಲ ಪ್ರದೇಶ, ಉತ್ತರಾಖಂಡ, ಜಾರ್ಖಂಡ್‌ನಲ್ಲಿ ಭೂಕುಸಿತ

ಹಠಾತ್ ಪ್ರವಾಹ: 33 ಸಾವು

ಹಠಾತ್ ಪ್ರವಾಹದ ಬಳಿಕ ಹಿಮಾಚಲ ಪ್ರದೇಶದ ಧರ್ಮಶಾಲಾ ಬಳಿ ಚಕ್ಕಿ ನದಿ ಮೇಲೆ ನಿರ್ಮಿಸಲಾಗಿರುವ ರೈಲ್ವೆ ಸೇತುವೆ ಕುಸಿದಿರುವುದು —ಪಿಟಿಐ ಚಿತ್ರ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ಸೇರಿ ನಾಲ್ಕು ರಾಜ್ಯಗಳಲ್ಲಿ ಭಾರಿ ಮಳೆಯಿಂದ ಉಂಟಾದ ಹಠಾತ್ ಪ್ರವಾಹ ಮತ್ತು ಭೂಕುಸಿತದಿಂದಾಗಿ ಒಟ್ಟು 33 ಮಂದಿ ಮೃತಪಟ್ಟಿದ್ದಾರೆ.

‘ಹಿಮಾಚಲ ಪ್ರದೇಶದಲ್ಲಿ ಉಂಟಾದ ಪ್ರವಾಹದಲ್ಲಿ 22 ಮಂದಿ ಸಾವಿಗೀಡಾಗಿದ್ದು, 10 ಮಂದಿ ಗಾಯಗೊಂಡಿದ್ದಾರೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ನಿರ್ದೇಶಕ ಸುದೇಶ್ ಕುಮಾರ್ ಮೊಖ್ತಾ ಶನಿವಾರ ತಿಳಿಸಿದ್ದಾರೆ.

‘ಭಾರಿ ಮಳೆಗೆ ಹಿಮಾಚಲ ಪ್ರದೇಶದ ಕಾಂಗ್ರಾ ಜಿಲ್ಲೆಯ ಚಕ್ಕಿ ಸೇತುವೆ ಕುಸಿದ ಹಿನ್ನೆಲೆ ಯಲ್ಲಿ ಪಠಾಣ್ ಕೋಟ್ ಮತ್ತು ಜೋಗಿಂದರ್‌ನಗರ ನಡುವಿನ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರವಾಹ, ಭೂಕುಸಿತ ಮತ್ತು ಮನೆಕುಸಿತ ಪ್ರಕರಣಗಳಲ್ಲಿ ಉತ್ತರಾಖಂಡ ಮತ್ತು ಒಡಿಶಾದಲ್ಲಿ ತಲಾ ನಾಲ್ವರು, ಜಾರ್ಖಂಡ್‌ನಲ್ಲಿ ಮೂವರು ಮೃತಪಟ್ಟಿದ್ದಾರೆ.

‘ಉತ್ತರಾಖಂಡದ ವಿವಿಧ ಭಾಗಗಳಲ್ಲಿ ಶನಿವಾರ ಬೆಳಿಗ್ಗೆ 2:15ಕ್ಕೆ ಮೇಘಸ್ಫೋಟ ಸಂಭವಿಸಿದ್ದು ಡೆಹ್ರಾಡೂನ್‌ನಲ್ಲಿ ನಾಲ್ವರು ಸಾವಿಗೀಡಾಗಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈಷ್ಣೋದೇವಿ ದೇಗುಲ ಪುನರಾರಂಭ (ಜಮ್ಮು ಮತ್ತು ಕಾಶ್ಮೀರ): ‘ಭಾರಿ ಮಳೆಯ ಕಾರಣದಿಂದ ಶುಕ್ರವಾರ ಸಂಜೆ ತಾತ್ಕಾಲಿಕವಾಗಿ ಸ್ಥಗಿತ ಗೊಂಡಿದ್ದ ಪ್ರಸಿದ್ಧ ಮಾತಾ ವೈಷ್ಣೋದೇವಿ ದೇವಾಲಯವು, ಶನಿವಾರ ಬೆಳಿಗ್ಗೆಯಿಂದ ಪುನರಾರಂಭಗೊಂಡಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ಅಸ್ಸಾಂನಲ್ಲಿ ಮನೆಗಳಿಗೆ ಹಾನಿ (ಗುವಾಹಟಿ ವರದಿ): ಈ ವರ್ಷ ದಲ್ಲಿ ಅಸ್ಸಾಂನಲ್ಲಿ ಸಂಭವಿಸಿದ ಪ್ರವಾಹ ದಿಂದಾಗಿ 2.04 ಲಕ್ಷಕ್ಕೂ ಅಧಿಕ ಮನೆಗಳು ಹಾನಿಗೀಡಾಗಿದ್ದು, 309 ಕುಟುಂಬಗಳ ಮನೆಗಳು ಸಂಪೂರ್ಣವಾಗಿ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ.

ಮನೆ ಕಳೆದುಕೊಂಡವರು ಪುನಃ ಮನೆ ನಿರ್ಮಿಸಲು, ಅಸ್ಸಾಂ ಸರ್ಕಾರವು ಫಲಾನುಭವಿ ಕುಟುಂಬಗಳಿಗೆ ಹಣಕಾಸಿನ ನೆರವು ವಿತರಿಸಿತು.

ಪರಿಹಾರ ವಿತರಣಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಹಿಮಾಂತ ಬಿಸ್ವ ಶರ್ಮಾ ಅವರು ಉದ್ಘಾಟಿಸಿ ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

ಕೇಂದ್ರ ಆರ್ಥಿಕ ನೆರವು ನೀಡಲಿ:ಸಿಜೆಐ

ಅಮರಾವತಿ (ಪಿಟಿಐ): ‘ಇಬ್ಭಾಗದ ನಂತರ ಆಂಧ್ರಪ್ರದೇಶವು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದು, ಕೇಂದ್ರ ಸರ್ಕಾರವು ಈ ರಾಜ್ಯಕ್ಕೆ ಹೆಚ್ಚಿನ ಹಣಕಾಸಿನ ನೆರವು ಒದಗಿಸಬೇಕು’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಶನಿವಾರ ಹೇಳಿದ್ದಾರೆ.

ವಿಜಯವಾಡದಲ್ಲಿ ನ್ಯಾಯಾಲಯ ಸಂಕೀರ್ಣ ಉದ್ಘಾಟಿಸಿ ಅವರು ಮಾತನಾಡಿದರು.

ರೈತರ ಮುಷ್ಕರ ಅಂತ್ಯ

ಲಖೀಂಪುರ ಖೇರಿ, ಉತ್ತರ ಪ್ರದೇಶ: ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ವಜಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು ಇಲ್ಲಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಕೈಬಿಟ್ಟಿರುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ಶನಿವಾರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳು ಪ್ರತಿಭಟನಕಾರರನ್ನು ಭೇಟಿಯಾಗಿ ಮನವಿ ಸ್ವೀಕರಿಸಿದ ಕಾರಣ ಪ್ರತಿಭಟನೆಯನ್ನು ನಿಲ್ಲಿಸಲಾಗಿದೆ. ಸೆಪ್ಟೆಂಬರ್ ಮೊದಲ ವಾರದಲ್ಲಿ ರೈತರ ಜೊತೆ ಸಭೆ ನಡೆಸಲಾಗುವುದು ಎಂದು ಪ್ರತಿಭಟನಕಾರರಿಗೆ ಜಿಲ್ಲಾಧಿಕಾರಿ ಭರವಸೆ ನೀಡಿದ್ದಾರೆ.

ವಿವಾಹಿತ ಮಹಿಳಾ ಕೈದಿಗಳಿಗೆ ‘ತಾಳಿ’ ಧರಿಸಲು ಅವಕಾಶ

ಲಖನೌ (ಪಿಟಿಐ): ಉತ್ತರ ಪ್ರದೇಶದ ನೂತನ ಜೈಲು ಕೈಪಿಡಿ ಪ್ರಕಾರ, ವಿವಾಹಿತ ಮಹಿಳಾ ಕೈದಿಗಳು ಮಂಗಳಸೂತ್ರವನ್ನು ಧರಿಸಲು ಮತ್ತು ಕರ್ವಾಚೌತ್ ಮತ್ತು ತೀಜ್‌ನಂಥ ಹಬ್ಬಗಳನ್ನು ಆಚರಿಸಲು ಶೀಘ್ರವೇ ಅವಕಾಶ ನೀಡಲು ತೀರ್ಮಾನಿಸಲಾಗಿದೆ.

1941ರ ವಸಹಾತುಶಾಹಿ ಕಾನೂನಿಗೆ ತಿದ್ದುಪಡಿ ತಂದ ನೂತನ ಜೈಲು ಕೈಪಿಡಿಗೆ ರಾಜ್ಯ ಸಚಿವ ಸಂಪುಟ ಇತ್ತೀಚೆಗೆ ಅನುಮೋದನೆ ನೀಡಿದೆ. ಇದಕ್ಕೂ ಮೊದಲು ಬಳೆ, ಮೂಗುತಿ, ಕಾಲ್ಗೆಜ್ಜೆ ಧರಿಸಲು ಮಾತ್ರ ಅವಕಾಶ ನೀಡಲಾಗುತ್ತಿತ್ತು.

10 ವರ್ಷದ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿದ್ದ ಅವಘಡ

ಅಪಘಾತದಲ್ಲಿ ಕಾಲು ತುಂಡಾಗಿದ್ದ ಬಾಲಕಿಗೆ ₹ 53.7 ಲಕ್ಷ ಪರಿಹಾರ: ‘ಸುಪ್ರೀಂ’ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಹತ್ತು ವರ್ಷಗಳ ಹಿಂದೆ ಕರ್ನಾಟಕದ ಬಳ್ಳಾರಿಯ ಕುಡುತಿನಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಆರು ವರ್ಷದ ಬಾಲಕಿಯ ಮೇಲೆ ಲಾರಿ ಹರಿದು ಕಾಲು ತುಂಡಾದ ಪ್ರಕರಣದಲ್ಲಿ ಬಾಲಕಿಗೆ ₹ 53.07 ಲಕ್ಷ ಪರಿಹಾರವನ್ನು ಹೆಚ್ಚಿಸಿ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

‘ಅಪಘಾತದಿಂದಾಗಿ ಬಾಲಕಿಯ ಒಂದು ಕಾಲು ತುಂಡಾಗಿದೆ. ಆಕೆಯ ಸೊಂಟದ ಕೆಳಭಾಗದಲ್ಲಿ ಗಂಭೀರ ಗಾಯಗಳಾಗಿವೆ. ಆಕೆ ಜೀವನ ಪರ್ಯಂತ ಶಾಶ್ವತವಾದ ಅಂಗವೈಕಲ್ಯಕ್ಕೊಳಗಾಗಿದ್ದಾಳೆ. ಭವಿಷ್ಯದಲ್ಲಿ ಗಳಿಕೆ ಮತ್ತು ಮದುವೆಯ ನಿರೀಕ್ಷೆಯನ್ನೂ ಕೈಬಿಟ್ಟಿದ್ದಾಳೆ. ವೈದ್ಯಕೀಯ ವೆಚ್ಚ ಭರಿಸುವ ಜತೆಗೆ ನೋವು ಮತ್ತು ಸಂಕಟಕ್ಕೀಡಾಗಿದ್ದಾಳೆ. ಹಾಗಾಗಿ, ಅಪಘಾತ ಪರಿಹಾರದ ಮೊತ್ತವನ್ನು ₹ 53.07 ಲಕ್ಷ ಹೆಚ್ಚಿಸಬೇಕು’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಅಪಘಾತ ಸಂಭವಿಸಿದ ಹತ್ತು ವರ್ಷಗಳ ಬಳಿಕ ಪರಿಹಾರ ಮೊತ್ತವನ್ನು ಹೆಚ್ಚಳ ಮಾಡಿ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿಕ್ರಮ್ ನಾಥ್ ಅವರನ್ನೊಳಗೊಂಡ ನ್ಯಾಯಪೀಠವು ಆದೇಶ ಪ್ರಕಟಿಸಿದೆ.

ಅರ್ಜಿದಾರಳಾದ ಬಾಲಕಿ ರೂಪಾ ಅವರ ಪರ ವಕೀಲರಾದ ಸಂಜಯ್ ಎಂ. ನುಲಿ ಅವರು ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು.

ಕರ್ನಾಟಕ ಹೈಕೋರ್ಟ್, ಮೋಟಾರ್ ಅಪಘಾತ ಕ್ಲೇಮ್ಸ್ ಟ್ರಿಬ್ಯೂನಲ್ ನೀಡಿದ್ದ ಪರಿಹಾರ ಮೊತ್ತವನ್ನು ₹ 8.9 ಲಕ್ಷದಿಂದ ಶೇ 6ರ ಬಡ್ಡಿಯನ್ನೊಳಗೊಂಡಂತೆ ₹ 13.65 ಲಕ್ಷಕ್ಕೆ ಹೆಚ್ಚಿಸಿತ್ತು.

ಅರ್ಜಿದಾರರ ಪರ ವಕೀಲರು ಅಪಘಾತದಲ್ಲಿ ಕಾಲು ತುಂಡಾಗಿದ್ದರ ಪರಿಣಾಮ ಬಾಲಕಿಯು ಅನುಭವಿಸುತ್ತಿರುವ ದೈಹಿಕ– ಮಾನಸಿಕ ನೋವು ಹಾಗೂ ಭಾವನಾತ್ಮಕ ಸಂಕಟವನ್ನು ತೋರಿಸುವ ಚಿತ್ರಗಳನ್ನು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

‘ಬಾಲಕಿಯು ಬೆಳೆದಂತೆ ಮತ್ತೊಂದು ಕಾಲು ಕೂಡಾ ಆಕೆಗೆ ಆಧಾರವಾಗುತ್ತಿಲ್ಲ. ಆಕೆ ಕೃತಕವಾದ ಅಂಗವನ್ನೂ ಬಳಸಲು ಸಾಧ್ಯವಾಗುತ್ತಿಲ್ಲ. ಆಕೆ ತನ್ನ ನಿತ್ಯದ ದಿನಚರಿಗೆ ಮತ್ತೊಬ್ಬರ ಮೇಲೆ ಅವಲಂಬಿತವಾಗಿರಬೇಕಾಗಿದೆ. ಒಂದೆಡೆಯಿಂದ ಮತ್ತೊಂದೆಡೆ ಹೋಗಲು ಆಕೆ ಸದಾ ಬಾಡಿಗೆ ಸಾರಿಗೆಯನ್ನು ಬಳಸಬೇಕಾಗುತ್ತದೆ. ವಿವಾಹವಾಗುವ ನಿರೀಕ್ಷೆ ಯನ್ನೂ ಕಳೆದುಕೊಂಡಿದ್ದಾಳೆ’ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದ್ದರು.

‘ಪರಿಹಾರದ ಮೊತ್ತವನ್ನು ವಾರ್ಷಿಕ ಬಡ್ಡಿ ಶೇ 8ರೊಂದಿಗೆ ₹ 53.07ಲಕ್ಷಕ್ಕೆ ಹೆಚ್ಚಿಸಿರುವ ನ್ಯಾಯಪೀಠವು, ಅರ್ಜಿದಾರ ಬಾಲಕಿಯು ಇನ್ನೂ ಅಪ್ರಾಪ್ತ ವಯಸ್ಕಳಾಗಿರುವುದರಿಂದ ಪರಿಹಾರ ಮೊತ್ತದಲ್ಲಿ ₹ 10 ಲಕ್ಷವನ್ನು ಆಕೆಯ ತಂದೆಗೆ ತಕ್ಷಣವೇ ವಿತರಿಸಬೇಕು ಹಾಗೂ ಉಳಿದ ಮೊತ್ತವನ್ನು ಆಕರ್ಷಕ ಬಡ್ಡಿಯ ಮೊತ್ತಕ್ಕೆ ಸ್ಥಿರ ಠೇವಣಿಗಳಲ್ಲಿ ಹೂಡಿಕೆ ಮಾಡಬೇಕು’ ಎಂದೂ ತಿಳಿಸಿದೆ.

ವಿವರ: 2012ರ ಏಪ್ರಿಲ್ 19ರಂದು ಬಳ್ಳಾರಿ ಜಿಲ್ಲೆಯ ಕುಡುತಿನಿಯ ಅಭಿರುಚಿ ಫ್ಯಾಮಿಲಿ ರೆಸ್ಟೋರೆಂಟ್ ಎದುರು ಬಾಲಕಿಯು ಅಪಘಾತಕ್ಕೊಳಗಾಗಿದ್ದಳು. ತಾಯಿಯೊಂದಿಗೆ ಹಿಟ್ಟಿನ ಗಿರಣಿಗೆ ತೆರಳಿದ್ದ ಬಾಲಕಿ ಮನೆಗೆ ಹಿಂತಿರುಗುವಾಗ ಲಾರಿಯೊಂದು ಡಿಕ್ಕಿ ಹೊಡೆದು ಆಕೆಯ ಬಲಗಾಲಿನ ಮೇಲೆ ಹರಿದಿತ್ತು. ಅಪಘಾತದಲ್ಲಿ ಆಕೆಯ ಪಕ್ಕೆಲುಬು ಮುರಿದು, ತಲೆಗೂ ಪೆಟ್ಟಾಗಿತ್ತು. ತೀವ್ರ ಪೆಟ್ಟಾದ ಬಲಗಾಲನ್ನು ಕತ್ತರಿಸಲಾಗಿತ್ತು. ದೇಹದ ಬಲಗಡೆಯ ಸೊಂಟದ ಕೆಳಗಿನ ಭಾಗ ಸೇರಿದಂತೆ ಖಾಸಗಿ ಭಾಗಗಳ ಮೇಲೂ ಪರಿಣಾಮ ಬೀರಿತ್ತು.

‘ಮೋದಿಗೆ ಕೇಜ್ರಿವಾಲ್ ಎದುರಾಳಿ’

ಒಂದನೇ ಪುಟದಿಂದ

‘ಮೋದಿ ಅವರು ರಾಜ್ಯ ಸರ್ಕಾರಗಳನ್ನು ಉರುಳಿಸುವ ಬಗ್ಗೆ ಸದಾ ಯೋಚಿಸುತ್ತಿರುತ್ತಾರೆ. ಆದರೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕೇಜ್ರಿವಾಲ್ ಅವರು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಈ ಬಗ್ಗೆ ಜಗತ್ತು ಮಾತನಾಡುತ್ತಿರುವುದು ಬಿಜೆಪಿಯನ್ನು ಭೀತಿಗೆ ತಳ್ಳಿದೆ’ ಎಂದು ಅವರು ಹೇಳಿದ್ದಾರೆ. ಕೇಜ್ರಿವಾಲ್ ಅವರು ಪರ್ಯಾಯ ರಾಷ್ಟ್ರೀಯ ನಾಯಕರಾಗಿ ಬೆಳೆದಿರುವುದನ್ನು ಬಿಜೆಪಿಯಿಂದ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ಸಿಸೋಡಿಯಾ ಆರೋಪಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಜಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ಸಿಬಿಐ, ಸಿಸೋಡಿಯಾ ಹಾಗೂ ಐಎಎಸ್ ಅಧಿಕಾರಿ ಆರವ್ ಗೋಪಿಕೃಷ್ಣ ಅವರಿಗೆ ಸೇರಿದ ವಿವಿಧ ಸ್ಥಳಗಳಲ್ಲಿ ಶುಕ್ರವಾರ ಶೋಧ ನಡೆಸಿತ್ತು.

ಸಿಬಿಐ ಸಮನ್ಸ್: ದೆಹಲಿ ಅಬಕಾರಿ ನೀತಿ ಜಾರಿ ಪ್ರಕರಣ ಸಂಬಂಧ ಹಲವು ಆರೋಪಿಗಳಿಗೆ ಸಿಬಿಐ ಶನಿವಾರ ಸಮನ್ಸ್ ಜಾರಿ ಮಾಡಿದ್ದು, ವಿಚಾರಣೆಗೆ ಹಾಜರಾಗಲು ಸೂಚಿಸಿದೆ. ಸಿಸೋಡಿಯಾ ಅವರಿಂದ ವಶಪಡಿಸಿಕೊಂಡ ದಾಖಲೆಗಳು ಹಾಗೂ ಎಲೆಕ್ಟ್ರಾನಿಕ್ ದತ್ತಾಂಶಗಳನ್ನು ಪರಿಶೀಲಿಸಿದ ಬಳಿಕ ಇನ್ನಷ್ಟು ಜನರಿಗೆ ಸಮನ್ಸ್ ನೀಡಲಾಗುವುದು ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಎಫ್‌ಐಆರ್ ಅನ್ನು ಜಾರಿ ನಿರ್ದೇಶನಾಲಯದ ಜೊತೆಗೆ ಹಂಚಿಕೊಳ್ಳಲಾಗಿದೆ.

ಕೇಜ್ರಿವಾಲ್ ಅವರ ‘ಎಡಗೈ’ ಸತ್ಯೇಂದ್ರ ಜೈನ್ ಈಗಾಗಲೇ ಜೈಲಿನಲ್ಲಿದ್ದಾರೆ. ಅವರ ‘ಬಲಗೈ’ ಸಿಸೋಡಿಯಾ ಅವರೂ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ. ಕೇಜ್ರಿವಾಲ್‌ಗೂ ಭಯ ಶುರುವಾಗಿದೆ
ಅನುರಾಗ್ ಠಾಕೂರ್, ಕೇಂದ್ರ ಸಚಿವ

ಶಿಕ್ಷಣ, ಆರೋಗ್ಯ ಕ್ಷೇತ್ರದ ಒಳ್ಳೆ ಕೆಲಸಗಳನ್ನು ತಡೆಯುವುದು ಬಿಜೆಪಿ ಉದ್ದೇಶ. ಸಚಿವ ಸತ್ಯೇಂದ್ರ ಜೈನ್ ಅವರನ್ನು ಬಂಧಿಸಲಾಯಿತು. ನನ್ನನ್ನೂ ಬಂಧಿಸುವ ಸಾಧ್ಯತೆಯಿದೆ
ಮನೀಷ್ ಸಿಸೋಡಿಯಾ
ದೆಹಲಿ ಉಪಮುಖ್ಯಮಂತ್ರಿ

‘ಹಗರಣದ ಸೂತ್ರಧಾರ ಕೇಜ್ರಿವಾಲ್’

ಒಂದನೇ ಪುಟದಿಂದ

‘ಉತ್ತರಾಖಂಡ ಮತ್ತು ಉತ್ತರ ಪ್ರದೇಶ ಚುನಾವಣೆಗಳಲ್ಲಿ ಖಾತೆ ತೆರೆಯಲೂ ಎಎಪಿಗೆ ಸಾಧ್ಯವಾಗಲಿಲ್ಲ. ಮೋದಿ ನೇತೃತ್ವದಲ್ಲಿ ಬಿಜೆಪಿಯು 2024ರ ಚುನಾವಣೆಯಲ್ಲಿ ಕಳೆದ ಬಾರಿಗಿಂತ ಇನ್ನಷ್ಟು ಉತ್ತಮ ಪ್ರದರ್ಶನ ನೀಡಲಿದೆ’ ಎಂದು ಠಾಕೂರ್ ಹೇಳಿದ್ದಾರೆ.

‘ಇದು ‘ರೇವ್ಡಿ’ (ಉಚಿತ ಕೊಡುಗೆ) ಸರ್ಕಾರವಷ್ಟೇ ಅಲ್ಲ, ‘ಬೇವ್ಡಿ’ (ಕುಡುಕರ) ಸರ್ಕಾರ ಕೂಡಾ. ಸಂಪುಟದ ಒಪ್ಪಿಗೆ ಪಡೆಯದೆ ಅಬಕಾರಿ ಕಂಪನಿಗಳಿಗೆ ₹144 ಕೋಟಿ ಹಿಂತಿರುಗಿಸಿದ್ದು ಏಕೆ’ ಎಂದು ಅನುರಾಗ್ ಠಾಕೂರ್ ಪ್ರಶ್ನಿಸಿದ್ದಾರೆ. ಮನೀಷ್ ಸಿಸೋಡಿಯಾ ಅವರನ್ನು ದುಡ್ಡಿನ ವ್ಯಕ್ತಿ ಎಂದು ಕರೆದಿರುವ ಠಾಕೂರ್, ಸಿಸೋಡಿಯಾ ಹಣ ಮಾಡುತ್ತಾರೆ ಹಾಗೂ ಮೌನವಾಗಿರುತ್ತಾರೆ ಎಂದು ಆರೋಪಿಸಿದ್ದಾರೆ. ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ ಗುಪ್ತಾ, ಲೋಕಸಭಾ ಸದಸ್ಯ ಮನೋಜ್ ತಿವಾರಿ ಅವರೂ ಕೇಜ್ರಿವಾಲ್ ವಿರುದ್ಧ ವಾಕ್ಸಮರ ನಡೆಸಿದ್ದಾರೆ.

ಗುಜರಾತ್‌ಗೆ ಕೇಜ್ರಿವಾಲ್, ಸಿಸೋಡಿಯಾ

ಕೇಜ್ರಿವಾಲ್ ಹಾಗೂ ಸಿಸೋಡಿಯಾ ಅವರು ಸೋಮವಾರದಿಂದ ಎರಡು ದಿನಗಳ ಕಾಲ ಗುಜರಾತ್‌ಗೆ ಭೇಟಿ ನೀಡಲಿದ್ದಾರೆ. ಶನಿವಾರ ಈ ಕುರಿತು ಟ್ವೀಟ್ ಮಾಡಿರುವ ಕೇಜ್ರಿವಾಲ್, ‘ಡಿಸೆಂಬರ್‌ನಲ್ಲಿ ನಡೆಯಲಿರುವ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿಗೆ ಅಧಿಕಾರ ನೀಡಿದರೆ, ಉಚಿತ ಹಾಗೂ ಗುಣಮಟ್ಟದ ಆರೋಗ್ಯ, ಶಿಕ್ಷಣವನ್ನು ನೀಡಲಾಗುವುದು ಎಂಬ ಸಂದೇಶವನ್ನು ಗುಜರಾತ್ ಜನರಿಗೆ ತಲುಪಿಸಲು ಅಲ್ಲಿಗೆ ಹೋಗುತ್ತಿದ್ದೇವೆ’ ಎಂದಿದ್ದಾರೆ.

ಪ್ರತಿಭಟನೆ: ಮನೀಷ್ ಸಿಸೋಡಿಯಾ ಅವರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ಎಎಪಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಚಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು ಮತ್ತು ಪೇಂಟಿಂಗ್ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Mysore

MUDA HOUSE for Sale, Dattagalli, Mysuru. 20x30, 3 BHK Duplex with 2 Living Rooms. 8951144211

Residential/ Commercial

Vijayanagar

ಮೂಡಲಪಾಳ್ಯ (15X50) ಉತ್ತರ ದಿಕ್ಕಿನ ಮನೆ ಮಾರಾಟಕ್ಕೆ ಇದೆ. 'ಎ' ಖಾತಾ. ಬೆಲೆ: 68L ನೆಗೋಶಬಲ್. ದಯವಿಟ್ಟು ಸಂಪರ್ಕಿಸಿ: 8073670948

Sites

Out-Station

ಜಮೀನು ಮಾರಾಟಕ್ಕಿದೆ. ಬಿ.ಎಂ. ರೋಡ್ (Bangalore - Mangalore Highway), ಉದಯಪುರ, ಕೆಐಬಿ ಹತ್ತಿರ, ಚನ್ನರಾಯಪಟ್ಟಣ, ಹಾಸನ. 9686480962, 8310481869.

ಉದ್ಯೋಗಾವಕಾಶ

Drivers

ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಕೊರಿಯರ್ ಕಂಪನಿಗೆ ನುರಿತ ಚಾಲಕರು ಬೇಕಾಗಿದ್ದಾರೆ. ಬೊಲೆರೊ, ಟಾಟಾ ಏಸ್ ವಾಹನ ಹಾಗೂ ತ್ರಿಚಕ್ರ ವಾಹನವನ್ನು ಓಡಿಸಬಲ್ಲವರಿಗೆ ಆದ್ಯತೆ. ಸಂಬಳ 17,000 ರಿಂದ 21000 ಮತ್ತು ವಸತಿ ಸೌಲಭ್ಯವಿದೆ. ಭಾನುವಾರ ರಜಾ ದಿನ. ದಿನದ 12:00 ಗಂಟೆಗಳು ಕೆಲಸದ ಸಮಯ ರವಿಕಿರಣ್: 9741500240 ಶಿಲ್ಪ: 9741395151

General

DAKSHINA BHARAT HINDI PRACHAR SABHA, MADRAS (Institution of National Importance) Applications are invited for the post of REGISTRAR Post Graduate & Research Institute, Chennai. For detailed Advt. & Application form interested candidates may visit www.dbhpscentral.org www.dbhpsabhacentral.co.in Completed Applications should reach GENERAL SECRETARY on or before 05.09.2022

Hospital & Medical Jobs

WANTED PHARMACIST in Mangalore.Salary Rs 35000 call 7022560883

Marketing & Sales

REQUIRED SALES Man/girl in Bangalore Mysore and Mangalore to Represent a Publishing Company in Mumbai. Contact 9833247045/ 8422998815/ 8097734775

REPUTED PVT Ltd ಕಂಪನಿಯು ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಯನ್ನು ಹುಡುಕುತ್ತಿದೆ Lighting Project Division ಸಂಪರ್ಕಕ್ಕೆ: 9840585835/9845054158

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Situation Required

SAHARA EXPRESS Courier Pvt. Ltd, SR Nagar Bengaluru -560027 Branch, Wanted Asst.Manager, Clerks, Delivery Boy (bike must) Customer Care (Female) Ct: 7305748555, 7022588536

Wanted

ಬೇಕಾಗಿದ್ದಾರೆ ಬೆಂಗಳೂರಿನ ಜಯನಗರದಲ್ಲಿ ಸೌತ್ ಎಂಡ್ ಸರ್ಕಲ್, OFFICE ATTENDER ಕೆಲಸಕ್ಕೆ ವಿದ್ಯಾಹರ್ಹತೆ PUC(ದ್ವಿಚಕ್ರ ವಾಹನದ DL ಹೊಂದಿರುವ ಪುರುಷ below 30 age) ವಸತಿ ಉಚಿತ, ಸಂಬಳ-15,000/- Phone: 9900839393, 9844889394

ಭವಿಷ್ಯ

Astrology

★॥ಶ್ರೀಗುರು ರಾಘವೇಂದ್ರಸ್ವಾಮಿ॥★ ಆರಾದನೆಯಿಂದ ಪ್ರೀತಿಪ್ರೇಮ,ವಶೀಕರಣ, ವ್ಯಾಪಾರ,ಸಂತಾನ, ಸಾಲಬಾಧೆ, ಕೋರ್ಟ್‌ಕೇಸ್ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 8317227470

EDUCATION CORNER

SpardhaMithra Collaborated with GS SCORE An Institute for Civil Services OPEN MOCK TEST#4 IAS PRELIMS 2023 OFFLINE TEST CENTRE AT SpardhaMithra BENGALURU & MYSURU TEST DATE 21 AUGUST 2022 9535111188 iasscore.in REGISTER NOW

★॥ಆದಿಶಕ್ತಿಹುಲಿಗೆಮ್ಮ ದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶಿಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥ್‌ಭಟ್. 9900222591

ವೈವಾಹಿಕ

Grooms Wanted

Brahmin

ಬ್ರಾಹ್ಮಣ, ವಧು, ವಯಸ್ಸು 25, PUC ಕಲಿತಿರುವ/ ವಯಸ್ಸು 29, SSLC ಕಲಿತಿರುವ ವಧುವಿಗೆ ಸೂಕ್ತವಾದ ವರ ಬೇಕಾಗಿದೆ. M:9035730677

ಪ್ರವಾಸ

Travel

01.09.22,15.09.22, 08.10.22 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 06.10.22 ನೇಪಾಳ, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

ಸುಸಜ್ಜಿತ ಪ್ರವಾಸಗಳು: 06.10.2022 27.10.2022 ರಿಂದ 11/5 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 27.09.2022 18.10.2022 20.11.2022 ರಿಂದ 5 ದಿನಗಳ ದುಬೈ,ಅಬುಧಾಬಿ,ಶಾರ್ಜಾ 06.10.2022 18.10.2022 ರಿಂದ 8/12 ದಿನಗಳ ಶಿಮ್ಲಾ,ಮನಾಲಿ,ವೈಷ್ಣೋದೇವಿ. 06.10.2022 19.10.2022 ರಿಂದ 8/12 ದಿನಗಳ ಕಾಶಿ,ಗಯಾ,ಹರಿದ್ವಾರ್. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ 30.10.2022 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.10.2022 ರಿಂದ 15 ದಿನಗಳ ಚಾರ್‌ಧಾಮ್. 30.10.2022 11.11.2022 ರಿಂದ 11/17 ದಿನಗಳ ಗುಜರಾತ್ ರಾಜಸ್ಥಾನ್ ಪ್ರವಾಸಗಳು ಸಂಪರ್ಕಿಸಿ ಆನಂದ್ ವಿಹಾರಿ ಬೆಂಗಳೂರು-23. 8088887677 080-23385837

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 10.10.22 ದೆಹಲಿ- ವೈಷ್ಣೋದೇವಿ- ಅಮೃತಸರ. 01.11.22 ದೆಹಲಿ,ಆಗ್ರ, ಮಥುರಾ, ಕಾಶಿ, ಗಯ. 10.11.22 ನೇಪಾಳ, ಮುಕ್ತಿನಾಥ, ಪಶುಪತಿನಾಥ. 21.11.22 ಗುಜರಾತ್- ದ್ವಾರಕಾ- ನಾಗನಾಥ, ಸೋಮನಾಥ. 9964527782, 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
Jerry Louis : 9731810277 | Vishal GM : 9845114560
Ravichandra : 9901641752 | Tanveer : 9886213331

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1255 (1240)
ಸೂರ್ಯಕಾಂತಿ (ರಿಫೈನ್ಡ್)	₹1540 (1550
ಪಾಮೋಲಿನ್	₹1180 (1190)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹400-685
ದ್ವಿತಳಿ (ಬಿ.ವಿ)	₹311-809

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹140

ತುಸು ತಗ್ಗಿದ ಚಿಲ್ಲರೆ ಹಣದುಬ್ಬರ, ಕಚ್ಚಾ ತೈಲ ದರ ಇಳಿಕೆ ಪ್ರಭಾವ

ವಿದೇಶಿ ಸಾಂಸ್ಥಿಕ ಹೂಡಿಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಆಗಸ್ಟ್ ತಿಂಗಳಿನಲ್ಲಿ ದೇಶದ ಷೇರುಪೇಟೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ. ಆಗಸ್ಟ್ 1 ರಿಂದ 19ರವರೆಗಿನ ಅವಧಿಯಲ್ಲಿ ₹19,677 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆಗೆ ಪೂರಕವಾದ ಬೆಳವಣಿಗೆಗಳು ದೇಶಿ ಮತ್ತು ಜಾಗತಿಕ ಮಟ್ಟದಲ್ಲಿ ನಡೆಯುತ್ತಿವೆ. ಹಣದುಬ್ಬರವು ಜುಲೈನಲ್ಲಿ ತುಸು ಇಳಿಕೆ ಕಂಡಿರುವುದು ಹಾಗೂ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿಯನ್ನು ಬಿಗಿಗೊಳಿಸದೇ ಇರುವ ನಿರ್ಧಾರಕ್ಕೆ ಬಂದಿರುವುದು ಹೂಡಿಕೆದಾರರಲ್ಲಿ ಖರೀದಿ ಆಸಕ್ತಿ ಹೆಚ್ಚಾಗುವಂತೆ ಮಾಡುತ್ತಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು ನಿರೀಕ್ಷೆಗಿಂತಲೂ ಉತ್ತಮವಾಗಿದೆ. ಸರಕುಗಳು ಮತ್ತು ತೈಲ ದರ ಇಳಿಕೆಯು ಹೂಡಿಕೆದಾರರಲ್ಲಿ ಆಶಾವಾದ ಮೂಡಿಸಿದೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದರು.

‘ಅಮೆರಿಕದ ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೋವೆಲ್ ಅವರು ಆಗಸ್ಟ್ 26 ರಂದು ಕೇಂದ್ರೀಯ ಬ್ಯಾಂಕ್‌ಗಳ ಜಾಗತಿಕ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದರ ಜೊತೆಗೆ ಯುರೋಪ್‌ನ ಕೇಂದ್ರೀಯ ಬ್ಯಾಂಕ್‌ನ ಸಭೆಯ ನಿರ್ಧಾರಗಳ ಬಗ್ಗೆ ಜಾಗತಿಕ ಹೂಡಿಕೆದಾರರು ಹೆಚ್ಚು ಗಮನ ಹರಿಸಲಿದ್ದಾರೆ. ಏರಿಳಿತದ ವಹಿವಾಟಿನ ಅವಧಿಗಳಲ್ಲಿ ಹೂಡಿಕೆದಾರರು ಉತ್ತಮ ಗುಣಮಟ್ಟದ ಷೇರುಗಳನ್ನು ಮಾತ್ರವೇ ಖರೀದಿಸಲು ಮುಂದಾಗಬಹುದು’ ಎಂದು ಅವರು ಹೇಳಿದರು.

‘ಷೇರು ಬೆಲೆಯ ಮೇಲೆ ಪ್ರಭಾವ ಬೀರಿಲ್ಲ’

ವಿಜಯ್

ನವದೆಹಲಿ (ಪಿಟಿಐ): ‘ಕಂಪನಿಯ ಷೇರಿನ ಬೆಲೆಯ ಮೇಲೆ ನಾವು ಯಾವುದೇ ಪ್ರಭಾವವನ್ನೂ ಬೀರಿಲ್ಲ’ ಎಂದು ಪೇಟಿಎಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿಜಯ್ ಶೇಖರ್ ಶರ್ಮ ಹೇಳಿದ್ದಾರೆ.

ಕಂಪನಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಷೇರಿನ ಬೆಲೆಯ ಚಲನೆಯ ಹಲವು ಅಂಶಗಳು ಪ್ರಭಾವ ಬೀರುತ್ತವೆ. ಕಂಪನಿಯ ಲಾಭವು ಪ್ರಮುಖ ಪಾತ್ರ ವಹಿಸುತ್ತದೆ. ಕಂಪನಿಯ ಬೆಳವಣಿಗೆಗೆಯೂ ಪ್ರಭಾವ ಬೀರುತ್ತದೆ. ಸಣ್ಣ, ಅತಿಸಣ್ಣ, ಅಂತರರಾಷ್ಟ್ರೀಯ ಹೂಡಿಕೆದಾರರು ತಮ್ಮದೇ ಆದ ಪಾತ್ರ ಹೊಂದಿದ್ದಾರೆ’ ಎಂದು ತಿಳಿಸಿದ್ದಾರೆ.

ಸಭೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಿದವರಲ್ಲಿ ಹೆಚ್ಚಿನ ಷೇರುದಾರರು ಕಂಪನಿಯ ವಹಿವಾಟಿನ ಮಾದರಿಯಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದರೆ, ಕೆಲವರು ನಷ್ಟ ಮತ್ತು ಷೇರು ಬೆಲೆ ಕುಸಿತದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು ಎಂದು ಸಭೆಯಲ್ಲಿ ಭಾಗವಹಿಸಿದ್ದ ಒಬ್ಬರು ತಿಳಿಸಿದ್ದಾರೆ.

‘ಕಂಪನಿಯನ್ನು ಲಾಭದಾಯಕವಾಗಿಸುವ ಪ್ರಯತ್ನವನ್ನು ಆಡಳಿತ ಮಂಡಳಿ ಕೈಗೊಂಡಿದೆ’ ಎಂದು ಷೇರುದಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ರಷ್ಯಾ ತೈಲ ಖರೀದಿ ಹೆಚ್ಚಿಸಿದ ಚೀನಾ

ಬೀಜಿಂಗ್ (ರಾಯಿಟರ್ಸ್): ಚೀನಾಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ ದೇಶವು ಸತತ ಮೂರನೇ ತಿಂಗಳಿನಲ್ಲಿಯೂ ಮೊದಲ ಸ್ಥಾನ ಕಾಯ್ದುಕೊಂಡಿದೆ.

ಜುಲೈ ತಿಂಗಳಿನಲ್ಲಿ ರಷ್ಯಾದಿಂದ 71.5 ಲಕ್ಷ ಟನ್ ಕಚ್ಚಾ ತೈಲವನ್ನು ಚೀನಾ ಆಮದು ಮಾಡಿಕೊಂಡಿದೆ. ಹಿಂದಿನ ವರ್ಷದ ಜುಲೈಗೆ ಹೋಲಿಸಿದರೆ ಶೇ 7.6ರಷ್ಟು ಹೆಚ್ಚು ಆಮದಾಗಿದೆ. ಚೀನಾದ ಕಸ್ಟಮ್ಸ್ ಈ ಮಾಹಿತಿ ನೀಡಿದೆ.

ರಷ್ಯಾವು ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಪೂರೈಕೆ ಮಾಡುತ್ತಿರುವುದರಿಂದ ಚೀನಾ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದೆ. ಅಂಗೋಲಾ ಮತ್ತು ಬ್ರೆಜಿಲ್‌ನಿಂದ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಿದೆ.

ಭಾರತಕ್ಕೆ ಆಮದು ಇಳಿಕೆ: ಭಾರತವು ರಷ್ಯಾದಿಂದ ಜುಲೈನಲ್ಲಿ ಪ್ರತಿ ದಿನ 8.77 ಲಕ್ಷ ಬ್ಯಾರಲ್ ತೈಲ ಆಮದು ಮಾಡಿಕೊಂಡಿದೆ. ಜೂನ್‌ನಲ್ಲಿ ಆಗಿದ್ದ ಆಮದಿಗೆ ಹೋಲಿಸಿದರೆ ಶೇ 7.3ರಷ್ಟು ಇಳಿಕೆ ಆಗಿದೆ.

ಸೌದಿ ಅರೇಬಿಯಾದಿಂದ ತೈಲ ಆಮದು ಜುಲೈನಲ್ಲಿ ಶೇ 25.6ರಷ್ಟು ಹೆಚ್ಚಾಗಿದ್ದು, ಪ್ರತಿ ದಿನ 8.24 ಲಕ್ಷ ಬ್ಯಾರಲ್ ಆಮದಾಗಿದೆ.

ಮುಂಬೈ ಧಾರಣೆ

ಶೇಂಗಾ 20–8–2022	
ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1210 (1200)
ಪಾಮ್ ವಾರದ ಡೆಲಿವರಿ	1178 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1470)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	51,250 (51,650)
ಬೆಳ್ಳಿ ಕೆ.ಜಿ	55,600 (55,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	40000-46500
ಪುತ್ತೂರು	
ಹೊಸತು	33500-46500
ಕೋಕ	11000-26000
ಸಿದ್ದಾಪುರ	
ಬಿಳಿಗೋಟು	27680-34999
ಚಾಲಿ	39099-43299
ಕೋಕ	25399-34900
ಕೆಂಪುಗೋಟು	32899-34089
ರಾಶಿ	49899-51329
ತಟ್ಟಿಬೆಟ್ಟೆ	43099-49299
ಶಿರಸಿ	
ಬೆಟ್ಟೆ	18199-46899
ಬಿಳಿಗೋಟು	24699-36099
ಚಾಲಿ	32099-44211
ರಾಶಿ	45699-52399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	15700	16000	214.70 ಸೆಂಟ್ಸ್
ಎಸಿ	9100	8200	8900	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4835	4500	4700	2215 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಇಂದು ಮುಂಬೈ ಮ್ಯಾರಥಾನ್; ಸಚಿನ್ ಚಾಲನೆ

ಸಚಿನ್

ಮುಂಬೈ: ಮಹಾನಗರಿಯಲ್ಲಿ ಭಾನುವಾರ ನಡೆಯಲಿರುವ ಹಾಫ್ ಮ್ಯಾರಥಾನ್‌ಗೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಚಾಲನೆ ನೀಡಲಿದ್ದಾರೆ.

ಒಟ್ಟು 13500ಕ್ಕೂ ಹೆಚ್ಚು ಓಟಗಾರರು ಪಾಲ್ಗೊಳ್ಳುವರು. ಮೂರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. 21.1 ಕಿಲೋ ಮೀಟರ್ಸ್ ಓಟದಲ್ಲಿ 4000, 10 ಕಿಲೋಮೀಟರ್ ಓಟದಲ್ಲಿ 7000 ಮತ್ತು 5 ಕಿಲೋ ಮೀಟರ್ ಓಟದಲ್ಲಿ 2500 ಓಟಗಾರರು ಭಾಗವಹಿಸಲಿದ್ದಾರೆ.

ಏಷ್ಯಾಕಪ್‌ಗೆ ಶಾಹೀನ್ ಅಲಭ್ಯ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ವೇಗದ ಬೌಲರ್ ಶಾಹೀನ್ ಶಾ ಅಫ್ರಿದಿ ಮೊಣಕಾಲಿಗೆ ಆಗಿರುವ ಗಾಯದಿಂದಾಗಿ ಏಷ್ಯಾಕಪ್ ಕ್ರಿಕೆಟ್ ಟೂರ್ನಿ ಹಾಗೂ ಇಂಗ್ಲೆಂಡ್ ಪ್ರವಾಸದಿಂದ ಹಿಂದೆ ಸರಿದಿದ್ದಾರೆ.

'ಇದರಿಂದಾಗಿ ತಂಡದ ಬೌಲಿಂಗ್ ವಿಭಾಗ ಸೊರಗಿದೆ. 'ಶಾಹೀನ್‌ಗೆ ಗಾಯದಿಂದ ಚೇತರಿಸಿಕೊಳ್ಳಲು ಆರು ವಾರಗಳ ವಿಶ್ರಾಂತಿ ಬೇಕೆಂದು ವೈದ್ಯರ ತಂಡವು ತಿಳಿಸಿದೆ. ಆದ್ದರಿಂದ ಅವರನ್ನು ತಂಡದಿಂದ ಕೈಬಿಡಲಾಗಿದೆ' ಎಂದು ಪಿಸಿಬಿ ತಿಳಿಸಿದೆ.

ಲಂಕಾ ತಂಡದಲ್ಲಿ ಮಧುಸಂಕಾ: ಯುವ ಎಡಗೈ ವೇಗಿ ದಿಲ್ಶಾನ್ ಮಧುಸಂಕಾ ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿರುವ ಶ್ರೀಲಂಕಾ ತಂಡದಲ್ಲಿ ಪದಾರ್ಪಣೆ ಮಾಡಲಿದ್ದಾರೆ.

ಜಿಂಬಾಬ್ವೆಗೆ ಮತ್ತೆ ನಿರಾಸೆ: ಸೀನ್ ವಿಲಿಯಮ್ಸ್ ಉತ್ತಮ ಬ್ಯಾಟಿಂಗ್

ಸಂಜು ಮಿಂಚು: ಭಾರತಕ್ಕೆ ಸರಣಿ

ಹರಾರೆ (ಪಿಟಿಐ): ಶಿಸ್ತಿನ ವಿಕೆಟ್‌ಕೀಪಿಂಗ್ ಹಾಗೂ ಮಿಂಚಿನ ಬ್ಯಾಟಿಂಗ್ ಮಾಡಿದ ಸಂಜು ಸ್ಯಾಮ್ಸನ್ ಆಟದಿಂದ ಭಾರತ ತಂಡವು ಜಿಂಬಾಬ್ವೆ ಎದುರು ಜಯಭೇರಿ ಬಾರಿಸಿತು. ಏಕದಿನ ಕ್ರಿಕೆಟ್ ಸರಣಿಯನ್ನು ಕೈವಶ ಮಾಡಿಕೊಂಡಿತು.

ಹರಾರೆ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಭಾರತ ತಂಡವು 5 ವಿಕೆಟ್‌ಗಳಿಂದ ಜಯಿಸಿತು. 3 ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಗಳಿಸಿತು. ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಾರ್ದೂಲ್ (38ಕ್ಕೆ3) ಅಮೋಘ ಬೌಲಿಂಗ್ ಮುಂದೆ ಜಿಂಬಾಬ್ವೆ ತಂಡವು 38.1 ಓವರ್‌ಗಳಲ್ಲಿ 161 ರನ್ ಗಳಿಸಿತು. ಮಧ್ಯಮಕ್ರಮಾಂಕದ ಬ್ಯಾಟರ್‌ಗಳಾದ ಸೀನ್ ವಿಲಿಯಮ್ಸ್ (42 ರನ್) ಹಾಗೂ ರಿಯಾನ್ ಬರ್ಲ್ (ಔಟಾಗದೆ 39) ಉಪಯುಕ್ತ ಕಾಣಿಕೆ ನೀಡಿದರು.

ಈ ಸಾಧಾರಣ ಗುರಿಯನ್ನು ಭಾರತ ತಂಡವು 25.4 ಓವರ್‌ಗಳಲ್ಲಿ ಮುಟ್ಟಿತು. 5 ವಿಕೆಟ್‌ಗಳನ್ನು ಕಳೆದುಕೊಂಡು 167 ರನ್ ಗಳಿಸಿತು. ಸಂಜು ಅಗ್ರಕ್ರಮಾಂಕದ ಮೂವರು ಬ್ಯಾಟರ್‌ಗಳ ಕ್ಯಾಚ್ ಪಡೆದರು. ಒಂದು ರನ್‌ಔಟ್‌ಗೂ ಜೊತೆ ನೀಡಿದರು. ಮಿಂಚಿನ ಬ್ಯಾಟಿಂಗ್ ಮಾಡಿದ ಸಂಜು (ಔಟಾಗದೆ 43) ದೀಪಕ್ ಹೂಡಾ ಜೊತೆಗೂಡಿ ಐದನೇ ವಿಕೆಟ್‌ಗೆ 56 ರನ್‌ಗಳನ್ನು ಸೇರಿಸಿದರು. 110.26ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ ಸಂಜು, ನಾಲ್ಕು ಸಿಕ್ಸರ್ ಹೊಡೆದರು.

ಸಂಜು ಸ್ಯಾಮ್ಸನ್ ಬ್ಯಾಟಿಂಗ್ –ಎಪಿ/ಪಿಟಿಐ ಚಿತ್ರ

ಶಿಖರ್ ಧವನ್ (33) ಮತ್ತು ಶುಭಮನ್ ಗಿಲ್ (33) ಮತ್ತು ದೀಪಕ್ ಹೂಡಾ ಗೆಲುವಿಗೆ ಕೊಡುಗೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ 38.1 ಓವರ್‌ಗಳಲ್ಲಿ 161 (ಇನೊಸೆಂಟ್ ಕೈಯಾ 16, ಸಿಕಂದರ್ ರಜಾ 16, ಸೀನ್ ವಿಲಿಯಮ್ಸ್ 42, ರ್ಯಾನ್ ಬರ್ಲ್ ಔಟಾಗದೆ 39; ಮೊಹಮ್ಮದ್ ಸಿರಾಜ್ 16ಕ್ಕೆ 1, ಪ್ರಸಿದ್ಧ ಕೃಷ್ಣ 28ಕ್ಕೆ 1, ಶಾರ್ದೂಲ್ ಠಾಕೂರ್ 38ಕ್ಕೆ 3, ಅಕ್ಷರ್ ಪಟೇಲ್ 20ಕ್ಕೆ 1, ದೀಪಕ್ ಹೂಡಾ 6ಕ್ಕೆ 1). ಭಾರತ 25.4 ಓವರ್‌ಗಳಲ್ಲಿ 5 ಕ್ಕೆ 165 (ಶಿಖರ್ ಧವನ್ 33, ಶುಭಮನ್ ಗಿಲ್ 33, ದೀಪಕ್ ಹೂಡಾ 25, ಸಂಜು ಸ್ಯಾಮ್ಸನ್ ಔಟಾಗದೆ 43; ಲ್ಯೂಕ್ ಜಾಂಗ್ವೆ 33ಕ್ಕೆ 2, ಸಿಕಂದರ್ ರಜಾ 16ಕ್ಕೆ 1). ಫಲಿತಾಂಶ: ಭಾರತ ತಂಡಕ್ಕೆ ಐದು ವಿಕೆಟ್ ಜಯ. ಸರಣಿಯಲ್ಲಿ 2–0 ಮುನ್ನಡೆ.

'ಕಾಶ್ಮೀರ ಸಮಸ್ಯೆ: ಯುದ್ಧ ಆಯ್ಕೆಯಲ್ಲ'

ಇಸ್ಲಾಮಾಬಾದ್: 'ಕಾಶ್ಮೀರ ಸಮಸ್ಯೆ ಬಗೆಹರಿಸಿಕೊಳ್ಳಲು ಯುದ್ಧ ಎಂದಿಗೂ ಪರಿಹಾರವಲ್ಲ, ಮಾತುಕತೆ ಮೂಲಕ ಭಾರತದೊಂದಿಗೆ ಶಾಶ್ವತ ಶಾಂತಿಯುತ ಸಂಬಂಧ ಹೊಂದಲು ಬಯಸುತ್ತೇವೆ' ಎಂದು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಹೇಳಿದ್ದಾರೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿಯೋಗದ ಜೊತೆ ಮಾತನಾಡಿದ ಷರೀಫ್, 'ಉಭಯ ದೇಶಗಳ ನಡುವೆ ಸುಸ್ಥಿರ ಶಾಂತಿ ಸ್ಥಾಪನೆ ಕಾಶ್ಮೀರದ ಸಮಸ್ಯೆಯನ್ನು ವಿಶ್ವಸಂಸ್ಥೆಯ ಆಶಯಕ್ಕೆ ಅನುಗುಣವಾಗಿ ಬಗೆಹರಿಸುವುದರಿಂದ ಸಾಧ್ಯವಾಗುತ್ತದೆ' ಎಂದು ಅವರು ಹೇಳಿದ್ದಾರೆ ಎಂದು 'ದಿ ನ್ಯೂಸ್ ಇಂಟರ್ ನ್ಯಾಷನಲ್' ವರದಿ ಮಾಡಿದೆ.

ಭಾರತದ ಜತೆ ಸಮಾನತೆ, ನ್ಯಾಯ ಮತ್ತು ಪರಸ್ಪರ ಗೌರವದ ತತ್ವಗಳ ಆಧಾರದ ಮೇಲೆ ಶಾಂತಿಯುತ ಸಂಬಂಧ ಹೊಂದಲು ಪಾಕಿಸ್ತಾನ ಬಯಸುತ್ತದೆ ಎಂದಿದ್ದಾರೆ.

ಭಾರತಕ್ಕೆ ಮರಳಲಿರುವ ಏಳು ಪುರಾತನ ಕಲಾಕೃತಿ

ಲಂಡನ್ (ಪಿಟಿಐ): ಉತ್ತರ ಪ್ರದೇಶದ ಹಿಂದೂ ದೇವಾಲಯವೊಂದರಲ್ಲಿ ಕಳವಾಗಿದ್ದ ಕಲ್ಲಿನ ಬಾಗಿಲ ಚೌಕಟ್ಟು ಸೇರಿದಂತೆ ಏಳು ಕಲಾಕೃತಿಗಳನ್ನು ಭಾರತಕ್ಕೆ ಹಸ್ತಾಂತರಿಸಲು ಒಪ್ಪಂದಕ್ಕೆ ಸ್ಕಾಟ್ಲೆಂಡ್‌ನ 'ಗ್ಲಾಸ್ಗೋ ಲೈಫ್' ಮ್ಯೂಸಿಯಂ ಸಹಿ ಹಾಕಿದೆ.

ಈ ಕಲಾಕೃತಿಗಳ ಮಾಲೀಕತ್ವ ವರ್ಗಾವಣೆಗೆ ಸಂಬಂಧಿಸಿದಂತೆ ಬ್ರಿಟನ್‌ನಲ್ಲಿರುವ ಭಾರತದ ಹೈ ಕಮಿಷನರ್ ಸುಜಿತ್ ಘೋಷ್ ಅವರ ಸಮ್ಮುಖದಲ್ಲಿ ಇಲ್ಲಿನ ಕೆಲ್ವಿನ್‌ಗ್ರೋವ್ ಆರ್ಟ್ ಗ್ಯಾಲರಿ ಮತ್ತು ಮ್ಯೂಸಿಯಂನಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

14ನೇ ಶತಮಾನಕ್ಕೂ ಹಿಂದಿನದು ಎಂದು ನಂಬಲಾಗಿರುವ ಕಲಾಕೃತಿಗಳು, ಇಂಡೋ–ಪರ್ಷಿಯನ್ ತಲ್ವಾರ್ (ಕತ್ತಿ) ಮತ್ತು ಕಾನ್ಪುರದ ದೇವಾಲಯದಲ್ಲಿ ಕಳುವಾಗಿದ್ದ 11ನೇ ಶತಮಾನದ ಕಲ್ಲಿನಲ್ಲಿ ಕೆತ್ತಿದ ಬಾಗಿಲಿನ ಚೌಕಟ್ಟು ಒಳಗೊಂಡಂತೆ ಏಳು ಪುರಾತನ ಕಲಾಕೃತಿಗಳು ಹಿಂದಿರುಗಲಿವೆ.

ಹಾಕಿ: ಸೋಮಯ್ಯ ಆರು ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್. ಸೋಮಯ್ಯ ಗಳಿಸಿದ ಆರು ಗೋಲುಗಳ ಬಲದಿಂದ ವಾರಿಯರ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು ಡಿ.ಎಸ್. ಮೂರ್ತಿ ಮತ್ತು ರಾಧಾ ಮೂರ್ತಿ ಸ್ಮಾರಕ ಹಾಕಿ ಟೂರ್ನಿಯಲ್ಲಿ ಸಂಡೇ ಬಾಯ್ಸ್ 'ಬಿ' ತಂಡವನ್ನು 10–3ರಿಂದ ಸೋಲಿಸಿತು. ಶನಿವಾರ ನಡೆದ ಪಂದ್ಯದಲ್ಲಿ ಸೋಮಯ್ಯ 5, 7, 9, 11, 13 ಮತ್ತು 18ನೇ ನಿಮಿಷದಲ್ಲಿ ಕೈಚಳಕ ತೋರಿದರು.

ಮತ್ತೊಂದು ಪಂದ್ಯದಲ್ಲಿ ಜೆಎಚ್‌ಎಚ್‌ಸಿ 'ಎ' 13–1ರಿಂದ ಲಯೋಲ ಎಸ್‌ಸಿ 'ಬಿ' ವಿರುದ್ಧ ಗೆದ್ದಿತು.

ಕೊಕ್ಕೊ: ಒಡಿಶಾ–ಗುಜರಾತ್ ಸೆಣಸು

ಪುಣೆ: ಒಡಿಶಾ ಜಗರನಟ್ಸ್ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿವೆ.

ಆಡಿದ ಮೂರು ಪಂದ್ಯಗಳನ್ನು ಗೆದ್ದಿರುವ ಗುಜರಾತ್ ಆತ್ಮವಿಶ್ವಾಸದಲ್ಲಿದೆ. ಒಡಿಶಾ ಕೂಡ ಮೂರು ಪಂದ್ಯಗಳ ಪೈಕಿ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿದೆ. ಈ ಹಣಾಹಣಿಯನ್ನೂ ಗೆಲ್ಲುವ ಛಲದಲ್ಲಿದೆ.

ಇನ್ನೊಂದು ಪಂದ್ಯದಲ್ಲಿ ರಾಜಸ್ಥಾನ ವಾರಿಯರ್ಸ್ ಮತ್ತು ತೆಲುಗು ಯೋಧಾಸ್ ತಂಡಗಳು ಮುಖಾಮುಖಿಯಾಗಲಿವೆ.

ಪುಣೆ ರೇಸ್

ಸ್ನೋಫಾಲ್ ಗೆಲ್ಲುವ ನಿರೀಕ್ಷೆ

ಎಫ್.ಡಿ.ವಾಡಿಯಾ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ನೋಫಾಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಎನ್ವರ್4, ಸ್ವಾಂಡ್ಯೂಯಾಲ್1, ಗ್ರೇಟ್‌ಗನ್ಸ್3
2ನೇ ರೇಸ್: ನಾರ್ದರನ್‌ಲೈಟ್1, ಫೈಟ್ ಆಫ್ ಸಸ್ಸೆಸ್2, ಟ್ರೂಲಿ ಎಪಿಕ್3
3ನೇ ರೇಸ್: ಲಾರ್ಡ್ ಆ್ಯಂಡ್ ಮಾಸ್ಟರ್8, ಮಿಷೆಸ್ಟ್ ವಾಯಿಸ್1, ಫ್ಲೆಮಿಂಗ್ ಫೈರ್4
4ನೇ ರೇಸ್: ಡ್ರೈಟ್1, ವೀನಸ್8, ಆರೊ ವಾಯಿಂಟ್5
5ನೇ ರೇಸ್: ರಾಫೆಲ್ಲೊ6, ಬೇಬಿ ಐಬೂಕ1, ದಾಲಿ ಸ್ಟ್ರೀಲ್4
6ನೇ ರೇಸ್: ಸ್ನೋಫಾಲ್3, ವರ್ಸ್ವೈಟ್4
7ನೇ ರೇಸ್: ಮೊಜೆಲ್1, ಡಿಸ್ಟಿಂಕ್ಷನ್5, ಗೋಲ್ಡಿವ6
8ನೇ ರೇಸ್: ಕಮಾಂಡ್‌ಮೆಂಟ್3, ಟ್ರೈಸ್ಟಾರ್4, ಡೆಮೆಟ್ರಿಸಿಯಸ್5

ಉತ್ತಮ ಬೆಟ್: ಲಾರ್ಡ್ ಆ್ಯಂಡ್ ಮಾಸ್ಟರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ರಶ್ದಿ ಮೇಲೆ ದಾಳಿ: ಪುಸ್ತಕ ಓದಿ ಒಗ್ಗಟ್ಟು ಪ್ರದರ್ಶನ

ನ್ಯೂಯಾರ್ಕ್ (ಪಿಟಿಐ): ಚೂರಿ ಇರಿತಕ್ಕೆ ಒಳಗಾದ ಲೇಖಕ ಸಲ್ಮಾನ್ ರಶ್ದಿ ಅವರಿಗೆ ಬೆಂಬಲ ನೀಡುವ ಸೂಚಕವಾಗಿ ಇಲ್ಲಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಲೇಖಕರು ಮತ್ತು ಸ್ನೇಹಿತರು ಒಟ್ಟಿಗೆ ಸೇರಿ ರಶ್ದಿ ಅವರ ಪುಸ್ತಕಗಳನ್ನು ಓದಿ ಒಗ್ಗಟ್ಟು ಪ್ರದರ್ಶಿಸಿದರು.

ಪೆಂಗ್ವಿನ್ ರ್‍ಯಾಂಡಮ್ ಹೌಸ್, ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ ಮತ್ತು ಹೌಸ್ ಆಫ್ ಸ್ಪೀಕ್ ಈಸಿ, ಶುಕ್ರವಾರ 'ಸ್ಟ್ಯಾಂಡ್ ವಿತ್ ಸಲ್ಮಾನ್: ಡಿಫೆಂಡ್ ದ ಫ್ರೀಡಂ ಟು ವ್ರೈಟ್' ಕಾರ್ಯಕ್ರಮ ಆಯೋಜಿಸಿದ್ದವು.

ಈ ಕಾರ್ಯಕ್ರಮದಲ್ಲಿ ಟಿನಾ ಬ್ರೌನ್, ಕಿರಣ್ ದೇಸಾಯಿ, ಆಸಿಫ್ ಮಂಡ್ವಿ ಅನೇಕರು ಭಾಗವಹಿಸಿ ರಶ್ದಿ ಅವರು ಶೀಘ್ರ ಗುಣಮುಖರಾಗಲೆಂದು ಆಶಿಸಿದರು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು – 560009

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **03.09.2022ರ ಸಂಜೆ 4.00 ಗಂಟೆಗೆ**

1. ಕಾಮಗಾರಿಯ ಹೆಸರು: ದಕ್ಷಿಣ ಕನ್ನಡ ಜಿಲ್ಲೆ, ಮುಲ್ಕಿ ತಾಲ್ಲೂಕಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಲ್ಲೂಕು ಆಡಳಿತ ಕಛೇರಿ ಸಂಕೀರ್ಣ ಕಟ್ಟಡ ಕಾಮಗಾರಿ.

Work Indent No: KHB/2022-23/BD/Work_Indent 1017 & IFT No. 121/2022-23 Date: 19.08.2022. ಟೆಂಡರ್‌ಗಿಟ್ಟ ಮೊತ್ತ ರೂ. 7,41,81,613/–

2. ಕಾಮಗಾರಿಯ ಹೆಸರು: ಶಿವಮೊಗ್ಗ ಜಿಲ್ಲೆ, ರಾಜೇಂದ್ರ ನಗರ ಬಡಾವಣೆಯಲ್ಲಿರುವ ಮಂಡಳಿಯ ಕಛೇರಿ ಕಟ್ಟಡ ಮತ್ತು ಅಧಿಕಾರಿ/ನೌಕರರ ವಸತಿ ಗೃಹಗಳನ್ನು ಕೆಡವಿ ನೆಲಸಮಗೊಳಿಸುವ ಕಾಮಗಾರಿ.

Work Indent No: KHB/2022-23/BD/OW/Work_Indent 1018 & IFT No. 122/2022-23 Date: 19.08.2022. ಟೆಂಡರ್‌ಗಿಟ್ಟ ಮೊತ್ತ ರೂ. 9,52,450/–

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 / 080–22100077 ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

ವಾಸಾಸಂಇ/ವಾಪ್ರ/ಅಡ್ವಿಟ್/1895/2022–23

ಬೆಂಗಳೂರು ನಗರ ವಿಶ್ವವಿದ್ಯಾನಿಲಯ | BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS
Office of the Registrar, Central College Campus, Dr. B.R Ambedkar Veedhi, Bengaluru – 560 001.Ph.No.080-22961016 / 22131385, E-mail: registrarbcu@gmail.com

ಇಂಡೆಂಟ್ ಸಂಖ್ಯೆ: **BCU/2022-23/IND37** ದಿನಾಂಕ: **20–08–2022**

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

1) ಕಾಮಗಾರಿಯ ಹೆಸರು : Providing Computers, Printers, LCD Projectors and other items to the New Departments of Environmental Science, Computer Science, Mathematics, Plant Science, Animal Science, Management, English at Central College Campus, Bengaluru City University, Bengaluru. 2) ಇ.ಎಮ್.ಡಿ : **ರೂ. 2,45,000/–**. 3) ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **03–09–2022 12.00 ಗಂಟೆಗಳವರೆಗೆ.** 4) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ: **05–09–2022 11.00 ಗಂಟೆಗೆ. ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.** 5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **07–09–2022, 16.00 ಗಂಟೆಗಳವರೆಗೆ.** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **08–09–2022 16.30 ಗಂಟೆಗೆ.** 7) ಹಣಕಾಸು ಬಿಡ್ ತೆರೆಯುವ ದಿನಾಂಕ: **12–09–2022 16.30 ಗಂಟೆಗೆ.**

ಸೂಚನೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಮ್.ಡಿ ಮೊತ್ತವನ್ನು ಪಾವತಿಸುವುದು.

ವಾ.ಸಾ.ಸಂ.ಇ/ವಾಪ್ರ/1893/ಆಕಾರ್/22–23 **ಸಹಿ/– ಕುಲಸಚಿವರು**

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಹಿಂದೆ ಮೈಸೂರು ಮಿನರಲ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ: 5ನೇ ಮಹಡಿ, ಟಿಟಿಎಂಸಿ ಬಿಲ್ಡಿಂಗ್, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027. ಫೋನ್ ಸಂಖ್ಯೆ : 080–22278813/14/15/16,
www.ksmc.karnataka.gov.in

No. KSMCL/PER/GEN/MP CONT/67-A/2022-23/1486 Date: 20.08.2022

ನೇರ ಸಂದರ್ಶನ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್‌ನ ಪ್ರಧಾನ ಕಛೇರಿ ಮತ್ತು ವಿವಿಧ ಗಣಿ/ಘಟಕಗಳಲ್ಲಿ ಅವಶ್ಯಕವಿರುವ ಕೆಲವು ಶಾಸನಬದ್ಧ ಹಾಗೂ ಇತರೆ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಎರಡು ವರ್ಷದ ಅವಧಿಗೆ ಪಡೆಯುವ ಸಲುವಾಗಿ ಆಯಾ ಹುದ್ದೆಗಳ ಎದುರು ಏರ್ಪಡಿಸಿರುವ ನೇರ ಸಂದರ್ಶನದ ದಿನಾಂಕ ಮತ್ತು ಸಮಯಕ್ಕೆ ಹಾಜರಾಗಲು ಆಸಕ್ತಿ ಹೊಂದಿರುವ ಸೂಕ್ತ ಅರ್ಹ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ.

ನೇರ ಸಂದರ್ಶನದ ದಿನಾಂಕ, ಹುದ್ದೆಗಳ ವಿವರ, ಸಂಭಾವನೆ, ವಯಸ್ಸು, ಕಾರ್ಯಾನುಭವ, ಅವಧಿ, ಷರತ್ತು, ಕೆಲಸದ ಸ್ಥಳ, ಅರ್ಜಿ ನಮೂನೆ ಹಾಗೂ ಇತ್ಯಾದಿಗಳ ವಿವರಗಳಿಗೆ ಸಂಸ್ಥೆಯ ಜಾಲತಾಣ **www.ksmc.karnataka.gov.in** ನ್ನು ಸಂಪರ್ಕಿಸಬಹುದಾಗಿದೆ.

DIPR/CP/RO1875/AAPL/2022-23 ಸಹಿ/– ಪ್ರಧಾನ ವ್ಯವಸ್ಥಾಪಕರು, (ಆ&ಜಾ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಾವಣಗೆರೆ ವಿಶ್ವವಿದ್ಯಾನಿಲಯ
ಕುಲಸಚಿವರು (ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ–577002, ಕರ್ನಾಟಕ. ದೂರವಾಣಿ: (08192)208420

ಸಂಖ್ಯೆ:ದಾವಿ:ಪವಿ:15:2022–23:2130 ದಿನಾಂಕ:19–08–2022.

ಇ–ಟೆಂಡರ್ ಪ್ರಕಟಣೆ

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನದ (Supply of Hire Vehicle to Examination Section) ವ್ಯವಸ್ಥೆಗಾಗಿ ಇ–ಟೆಂಡರ್ ಕರೆಯಲಾಗಿದೆ. ಆಸಕ್ತಿಯಿರುವ ಸಂಸ್ಥೆಯವರು ದಿನಾಂಕ: 07.09.2022ರ ಸಂಜೆ 5.00ರೊಳಗಾಗಿ ಅರ್ಜಿಸಲ್ಲಿಸತಕ್ಕದ್ದು. e-Procurement website http://eproc.Karnataka.gov.in. ನಲ್ಲಿ ಹೆಚ್ಚಿನ ವಿವರ ಪಡೆಯಬಹುದು ಎಂದು ಪ್ರಕಟಿಸಲು ಕೋರಲಾಗಿದೆ.

ಕುಲಸಚಿವರು
(ಪರೀಕ್ಷಾಂಗ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.

ಸಂ.: ಕವಶಿಸಸ/ಮೂಭೂ–2/ಸಿ.ಆರ್–08/ಸಕಇ–ಕಕೇ–ಸಿ.ಸಿ/2022–23 ದಿನಾಂಕ: 19.08.2022

ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

Establishment of 24x7 operation centre cum help line services (Control Room) for Social Welfare Departments and various Boards and Corporations under its jurisdiction ಅನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ: **20.08.2022** ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **12.09.2022** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು,
ವಾಸಾಸಂಇ/ವಾಪ್ರ/ಎಲ್‌ಸಿ/1887/2022–23 ಕ.ವ.ಶಿ.ಸ.ಸಂ., ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ/ಟೆಂಡರು/2022–23/717
ದಿನಾಂಕ: 19.08.2022

ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **ರೂರ್ಬನ್ ಮತ್ತು ಕೆ.ಕೆ.ಆರ್.ಡಿ.ಬಿ. ಯೋಜನೆ** ಅಡಿಯಲ್ಲಿ ಅನುಮೋದನೆಗೊಂಡ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಒಟ್ಟು 05 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 01** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.

ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 22–08–2022 ರಿಂದ ದಿನಾಂಕ 07–09–2022 ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 07–09–2022 ರ 16.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 08–09–2022 ರಂದು 17.00 ಗಂಟೆಗೆ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/375/ಎಂಸಿಎ/2022–23

ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
E-Mail:dudc_mnd@yahoo.co.in Ph No.08232-231111
ಸಂಖ್ಯೆ:ಎಂಯುಎನ್(7)32/2016–17 ದಿ:19.08.2022

ಟೆಂಡರ್ ಪ್ರಕಟಣೆ – (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮಂಡ್ಯ ಜಿಲ್ಲೆಯ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)–3ನೇ ಹಂತದ ಯೋಜನೆಯಡಿ Improvements to Roads, Drains and Storm Water Drains ಕಾಮಗಾರಿಯನ್ನು ಕೈಗೊಳ್ಳಲು E-Procurement Portal ಮೂಲಕ ಎರಡು ಬಿಡ್ ಪದ್ಧತಿಯಡಿ ಟೆಂಡರ್ ಕರೆಯಲಾಗಿದೆ. ಇಂಡೆಂಟ್ ನಂ.DMA/2022–23/OW/WORK_INDENT133479 ಟೆಂಡರ್‌ಗಿಟ್ಟ ಮೊತ್ತ **ರೂ.114.95 ಲಕ್ಷಗಳು** (ಜಿ.ಎಸ್.ಟಿ. ಹೊರತುಪಡಿಸಿ) ಆಸಕ್ತ 3ನೇ ದರ್ಜೆ ಮೇಲ್ಪಟ್ಟು ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ https://:eproc.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ಸದರಿ ಟೆಂಡರ್‌ನ ಅವಧಿ ವಿಸ್ತರಣೆ/ಬದಲಾವಣೆ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ. (1)ಪೂರ್ವಭಾವಿ ಸಭೆ (Per -Bid Meeting) **ದಿನಾಂಕ:29.08.2022 ಬೆಳಿಗ್ಗೆ 11.00 ಗಂಟೆಗೆ.** (2) ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ:09.09.2022 ಸಂಜೆ 5.30 ಗಂಟೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:12.09.2022 ಬೆಳಿಗ್ಗೆ 11.00 ಗಂಟೆಗೆ.**

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ.
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/290/20222–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ–1/ಐಎಫ್‌ಟಿ–24/2022–23
ದಿನಾಂಕ:19–08–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (2 ನೇ ಕರೆ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

8443 ಠೇವಣಿವಂತಿಕೆ

ಪರಿಶಿಷ್ಟಪಂಗಡದ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು: 1 ಸೊರಬ ತಾಲ್ಲೂಕು 1 ಕಾಮಗಾರಿ (ಇ.ನಂ.152462/2ನೇ ಕರೆ)

ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು: 2. ಸೊರಬ ತಾಲ್ಲೂಕು 1 ಕಾಮಗಾರಿ (ಇ.ನಂ.152463/2ನೇ ಕರೆ) 5054–04–337–0–01–154

3. ಸೊರಬ ತಾಲ್ಲೂಕು 2 ಕಾಮಗಾರಿ (ಇ.ನಂ.151140 & 151136/2ನೇ ಕರೆ) ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿ:22–08–2022 ರಿಂದ 29–08–2022. ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 6 ತಿಂಗಳು

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಎಂಸಿಎ/ಶಿ/99/08/22–23/796

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಸಂಖ್ಯೆ: ಮಾನಿಮಂ/ತ್ಯಾನಿವಿ/3309/ಎಂಎಸ್‌ಡಬ್ಲ್ಯು/ಸಿಎಂಸಿ(2019)/2022–23/3376 ದಿನಾಂಕ: 16/08/2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ನಗರಸಭೆ, ಮಡಿಕೇರಿ ಇವರು ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, 2ನೇ ಮೊಣ್ಣಂಗೇರಿ ಗ್ರಾಮದ ಸರ್ವೆ ನಂ. 20/1 ಒಟ್ಟು 10 ಎಕರೆ ಪ್ರದೇಶದಲ್ಲಿ 65 ಟಿಪಿಡಿ ಸಾಮರ್ಥ್ಯದ ಘನ ತ್ಯಾಜ್ಯ ನಿರ್ವಹಣೆ, ಸಂಸ್ಕರಣೆ ಮತ್ತು ವಿಲೇವಾರಿಯ ಘಟಕವನ್ನು (MSWPDF) ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ:14.9.2006ರ (ತಿದ್ದುಪಡಿ ದಿನಾಂಕ:01.12.2009) ಪ್ರಕಾರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕ ಇವರ Terms of Reference ಪತ್ರ ಸಂಖ್ಯೆ: SEIAA 40 IND 2021 ದಿನಾಂಕ: **15.11.2021** ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ದಿನಾಂಕ: 11.07.2022ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ: 22.09.2022 ರಂದು ನಿಗಧಿ ಪಡಿಸಿದೆ. **ಯೋಜನೆಯ ವಿವರಗಳು ಕಳಕಂಡಂತಿವೆ.**

1. ಕಂಪನಿಯ ಹೆಸರು ಮತ್ತು ಕಛೇರಿಯ ವಿಳಾಸ: ಆಯುಕ್ತರು, ನಗರಸಭೆ, ಮಡಿಕೇರಿ, ಕೊಡಗು ಜಿಲ್ಲೆ.
2. ಉದ್ದೇಶಿತ ವಿಸ್ತರಣಾ ಯೋಜನೆಯ ಸ್ಥಳ: ಸರ್ವೆ ನಂ. 20/1, 2ನೇ ಮೊಣ್ಣಂಗೇರಿ ಗ್ರಾಮ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.
3. ಉದ್ದೇಶಿತ ವಿಸ್ತರಣಾ ಯೋಜನೆಯ ವಿವರ: 65 ಟಿಪಿಡಿ ಸಾಮರ್ಥ್ಯದ ಘನ ತ್ಯಾಜ್ಯ ನಿರ್ವಹಣೆ ಸಂಸ್ಕರಣೆ ಮತ್ತು ವಿಲೇವಾರಿ ಘಟಕ ಸ್ಥಾಪನಾ ಯೋಜನೆ.
4. ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: ದಿನಾಂಕ: 22.09.2022 (ಗುರುವಾರ) ಸಮಯ: ಬೆಳಗ್ಗೆ 11.00 ಗಂಟೆಗೆ – ಜಿಲ್ಲಾ ಪಂಚಾಯತ್ ಸಭಾಂಗಣ, ಕರವಲೆ ಬಾಡಗ, ಕೊಡಗು ಜಿಲ್ಲೆ, ಮಡಿಕೇರಿ – 571201.

5. ವಿಸ್ತರಣಾ ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ : (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಡಗು ಜಿಲ್ಲೆ, ಕೊಡಗು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾಪಂಚಾಯತ್, ಕೊಡಗು ಜಿಲ್ಲೆ, ಕೊಡಗು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಕೊಡಗು. (ಈ) 2ನೇ ಮೊಣ್ಣಂಗೇರಿ ಗ್ರಾಮ ಪಂಚಾಯತ್ ಕಾರ್ಯಾಲಯ, ಮೊಣ್ಣಂಗೇರಿ ಗ್ರಾಮ, ಮಡಿಕೇರಿ ತಾಲ್ಲೂಕು. (ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ನಂ. 93/ಬಿ, 1ನೇ ಮಹಡಿ, ವಾರ್ಡ್ ನಂ.7, ಬ್ಲಾಕ್ ನಂ. 8, ಸಂತ ಜೋಸೆಫ್‌ರ ಕಾನ್ವೆಂಟ್ ರಸ್ತೆ, ಮಡಿಕೇರಿ – 571201. (ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ. ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. (ಋ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ **(ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಕೊಡಗು)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: https://kspcb.karnataka.gov.in/ ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, 3ನೇ ಮಹಡಿ, ವಿಟಿಕೆ–2 'ಎ' ಬ್ಲಾಕ್, ಕೋರಮಂಗಲ, ಬೆಂಗಳೂರು – 560047 ರವರ ಕಛೇರಿ
ದೂರವಾಣಿ: 080–25704962, E-mail: cto-vig17.bng@ka.gov.in

ಸಂಖ್ಯೆ: ವಾತೆಜಂಆ/ವಾತೆಅ/ಜಾ–17/ಐಎನ್‌ಎಸ್–01/2022–23. ದಿನಾಂಕ: 19–08–2022

:: ಹರಾಜು ಪ್ರಕಟಣೆ ::

ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–17, ಬೆಂಗಳೂರು, ಇವರು ದಿನಾಂಕ: 22–06–2022 ರಂದು ತಂಬಾಕು ಮತ್ತು ಪಾನ್ ಮಸಾಲ ಸರಕನ್ನು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ: 30–08–2022 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿಯುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್ ಅನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

–:: ಷರತ್ತುಗಳು ::–

(1) ಮುಟ್ಟುಗೋಲು ಹಾಕಿಕೊಂಡಿರುವ ಸರಕನ್ನು ಪಿ.ವಿ. ಯಾರ್ಡ್, ದಾಬಸ್‌ಪೇಟೆ, ತುಮಕೂರು ರಸ್ತೆಯ ಗೋದಾಮಿನಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು ದಿನಾಂಕ: 22–08–2022 ರಿಂದ ದಿನಾಂಕ: 29–08–2022 ರ ಬೆಳಿಗ್ಗೆ 11.00 ಗಂಟೆಯಿಂದ 3.00 ಗಂಟೆಯವರೆಗೆ ಕಛೇರಿಯ ವೇಳೆಯಲ್ಲಿ ಸದರಿ ಸರಕನ್ನು ಸ್ವಂತ ಖರ್ಚಿನಲ್ಲಿ ಪರಿಶೀಲಿಸಬಹುದಾಗಿದೆ. (2) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಖರೀದಿದಾರರು ರೂ.6,50,000–00 ಮೌಲ್ಯದ ಮೊತ್ತವನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–17, ಬೆಂಗಳೂರು / Commercial Tax Officer (Vigilance)-17, Bangalore, ಇವರ ಹೆಸರಿನಲ್ಲಿ ಡಿ.ಡಿ.ಯನ್ನು ಪಡೆದು ಈ ಕಛೇರಿಗೆ ಮೊಹರಾದ ಬಿಡ್ ಲಕೋಟೆಯೊಂದಿಗೆ ದಿನಾಂಕ 29.08.2022ರ ಅಪರಾಹ್ನ 3.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (3) ಕಾರಣಾಂತರಗಳಿಂದ ಬಿಡ್ ಅನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–17, ಬೆಂಗಳೂರು, ಇವರು ಹೊಂದಿರುತ್ತಾರೆ. (4) ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/ publicauction.asp/https://gst.kar.nic.in/TenderAuction2021.aspx ರಲ್ಲಿ ಪ್ರಕಟಿಸಲಾಗಿದೆ.

ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ
ವಾ.ಸಾ.ಸಂ.ಇ/ವಾಪ್ರ/1872/ಆಕಾರ್/22–23 **(ಜಾಗೃತಿ)–17, ಬೆಂಗಳೂರು**

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾ. ಕೃ. ವಿ. ಕೆ, ಬೆಂಗಳೂರು–560 065.

NO.EO/PS/TN/Shop/2022-23 ದಿನಾಂಕ : 19–08–2022

ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆವರಣದಲ್ಲಿ ಉಪಹಾರ ಮಂದಿರ ಕಟ್ಟಡದಲ್ಲಿ 100 ಚದರ ಅಡಿ ವಿಸ್ತೀರ್ಣದ ವಿವಿಧ ಅಂಗಡಿ ಮಳಿಗೆಯನ್ನು ಮಾಸಿಕ ಬಾಡಿಗೆಯ ಮೇಲೆ 2 ವರ್ಷಗಳ ಅವಧಿಗೆ ನೀಡಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. **ಅಂಗಡಿಯ ವಿವರಗಳು:** (1) **ಸ್ಟೇಷನರಿ ಅಂಗಡಿ** –1, (2) **ಕಂಪ್ಯೂಟರ್ ಸೇವಾ ಮಳಿಗೆ**–1, (3) **ಛಾಯಾ ಪ್ರತಿ, ಬೆರಳಚ್ಚು ಮಳಿಗೆ**–2, (4) **ಐಸ್ ಕ್ರೀಂ/ಜ್ಯೂಸ್ ಮತ್ತು ತಿಂಡಿಗಳು**–1, (5) **ಡೈರಿ ಉತ್ಪನ್ನಗಳು**–1.

ಷೆಡ್ಯೂಲ್ ವಿವರ: 1) ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 25–08–2022 ಅಪರಾಹ್ನ 4.00 ಗಂಟೆಯವರೆಗೆ**. 2) ಖಾಲಿ ಟೆಂಡರ್ ಫಾರಂ ನೀಡುವ **ದಿನಾಂಕ: 26–08–2022 ರಿಂದ 02–09–2022 ಅಪರಾಹ್ನ 4.00 ಗಂಟೆಯವರೆಗೆ**. 3) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 02–09–2022 ಅಪರಾಹ್ನ 2.00 ಗಂಟೆಗೆ**. 4) ಟೆಂಡರನ್ನು ತೆರೆಯುವ **ದಿನಾಂಕ: 05–09–2022 ಪೂರ್ವಾಹ್ನ 11.00 ಗಂಟೆಗೆ**.

ಆಸಕ್ತಿಯುಳ್ಳವರು ಅರ್ಜಿದಾರರು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅನುಭವದ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರವು ನೀಡಿರುವ ರಹದಾರಿ ಪತ್ರದ ಪ್ರತಿಯೊಂದಿಗೆ ನಿಗದಿತ ಅಂಗಡಿ ಮಳಿಗೆಗೆ ಅರ್ಜಿ ನೀಡಬೇಕು. ಅರ್ಜಿಯೊಂದಿಗೆ ಖಾಲಿ ಟೆಂಡರ್ ಫಾರಂನ **ಬೆಲೆ ರೂ.590=00 (500 + 18% ತೆರಿಗೆ)**ಗಳ ಡಿಡಿಯನ್ನು **"ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೆ, ಬೆಂಗಳೂರು–65"** ಇವರ ಹೆಸರಿಗೆ ಪಡೆದು ಸಲ್ಲಿಸುವುದು. ಬೇರೆ ಬೇರೆ ಮಳಿಗೆಗಳಿಗೆ ಪ್ರತ್ಯೇಕವಾದ ಅರ್ಜಿಗಳನ್ನು ಪಡೆಯಬೇಕಾಗಿರುತ್ತದೆ. **ರೂ.50,000=00 ಗಳನ್ನು** ಮುಂಗಡಾ ಭದ್ರತಾ ಠೇವಣಿಯಾಗಿ ಟೆಂಡರ್ ಫಾರಂ ಜೊತೆ ಸಲ್ಲಿಸಬೇಕಾಗಿರುತ್ತದೆ. ಮುಂಗಡ ಭದ್ರತಾ ಹಣವನ್ನು **ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು,** ಇವರ ಹೆಸರಿಗೆ ಪಡೆದು ಟೆಂಡರ್ ಫಾರಂ ಜೊತೆ ಲಗತ್ತಿಸುವುದು. ಅಂಗಡಿ ಮಳಿಗೆಗಳ ಹಂಚಿಕೆಯ ನಿಯಮಗಳು ಮತ್ತು ಕರಾರಿನ ನಿಯಮಗಳನ್ನು ಟೆಂಡರ್ ಫಾರಂ ಜೊತೆಯಲ್ಲಿ ಪಡೆಯಬಹುದು. ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

ಸಹಿ/–
DIPR/CP/RO1873/AAPL/2022-23 ಆಸ್ತಿ ಅಧಿಕಾರಿಗಳು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ&ನೈ/ವಿಕೊ/ಟೆಂಡರ್/2022–23/664 ದಿನಾಂಕ: 16.08.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2020–21 & 2021–22 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:18.08.2022 ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: **ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ಕಾಲಾವಧಿ: **3 ತಿಂಗಳೂ (ಮಳೆಗಾಲ ಸೇರಿದಂತೆ).** ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **22.08.2022 ಸಮಯ 11.00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **26.08.2022 ಸಮಯ 16:00 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **29.08.2022 ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ.** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **01.09.2022 ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ.**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಪದಗಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/294/ಎಂಸಿಎ/2022–23

ರಾಷ್ಟ್ರ ವಿಭಜನೆಯ ಸಮಾಲೋಚನಾ ಸಭೆಯಲ್ಲಿ ಅಬ್ದುರ್ ರಬ್ ನಿಶ್ತಾರ್, ಬಲದೇವ್ ಸಿಂಗ್ , ಜೆ.ಬಿ. ಕೃಪಾಲಾನಿ, ವಲ್ಲಭಭಾಯಿ ಪಟೇಲ್, ಸರ್ ಎರಿಕ್ ಮೆಲ್ವಿಲ್, ಪಂಡಿತ್ ಜವಾಹರಲಾಲ್ ನೆಹರೂ, ಲಾರ್ಡ್ ಮೌಂಟ್ ಬ್ಯಾಟನ್ ಮತ್ತು ಲಿಯಾಖತ್ ಅಲಿ ಖಾನ್

ತಾಯಿ ಭಾರತಿಯ ಹೆಮ್ಮೆಯ ರಾಜಕುಮಾರ

ಸುಧೀಂದ್ರ ಕುಲಕರ್ಣಿ

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಹೆಸರು, ಚಿತ್ರ, ನೆನಪನ್ನು ಅಳಿಸಿಹಾಕುವ ಪ್ರಯತ್ನವೊಂದು ದೇಶದಲ್ಲೀಗ ಧಾಳಾಗಿ ನಡೆಯುತ್ತಿದೆ. ವಾಸ್ತವವಾಗಿ, ರಾಷ್ಟ್ರ ನಿರ್ಮಾತೃವಾಗಿ ನೆಹರೂ ಅವರಿಗೆ ಗಾಂಧೀಜಿ ಅವರ ನಂತರದ ಸ್ಥಾನವಿದೆ. ಅವರಿಲ್ಲದ ಸ್ವತಂತ್ರೋತ್ತರ ಭಾರತದ ಇತಿಹಾಸವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅಂತಹ ಚಾರಿತ್ರಿಕ ದಾಖಲೆಗಳನ್ನೇ ಇಟ್ಟುಕೊಂಡು ನೆಹರೂ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಯತ್ನವೊಂದು ಇಲ್ಲಿದೆ...

ವಾಟ್ಸ್ ಆ್ಯಪ್ ವಿಶ್ವವಿದ್ಯಾಲಯದಲ್ಲಿ ಕಲಿತು ದಿಢೀರನೇ ಡಬಲ್ ಡಿಗ್ರಿ ಪಡೆದ, ಪಿಎಚ್.ಡಿಗೂ ಪಾತ್ರರಾದ ಮೋದಿ ಭಕ್ತರು ಮಾಡಿದ ಹೊಸ ಶೋಧವೆಂದರೆ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಆಧುನಿಕ ಭಾರತದ ಇತಿಹಾಸದಲ್ಲಿ ನಾಯಕರಲ್ಲ, ಖಳನಾಯಕರು ಎನ್ನುವುದು. ದೇಶದ ಇಂದಿನ ಅನೇಕ ಸಮಸ್ಯೆಗಳ ಜನಕರು ನೆಹರೂ ಅವರೇ, ಅವರೊಬ್ಬ ಜನಹಿತ, ದೇಶದ ಹಿತವನ್ನು ಉಪೇಕ್ಷಿಸಿ ವಿಲಾಸಿ ಜೀವನ ನಡೆಸಿದ ನೇತಾರ. ಆದ್ದರಿಂದ ಮಹಾಪುರುಷರ ಶ್ರೇಣಿಯಿಂದ ಅವರ ಹೆಸರು, ಚಿತ್ರ ನೆನಪು ಎಲ್ಲವನ್ನೂ ಅಳಿಸಿ ಹಾಕುವುದು ದೇಶಭಕ್ತಿಯ ಕಾರ್ಯ ಎನ್ನುವುದು ಈ ಭಕ್ತರ ನಂಬಿಕೆ.

ಆದರೆ, ಸತ್ಯ ಸಂಗತಿ ಏನು ಗೊತ್ತೆ? ಭಾರತೀಯ ಸ್ವಾತಂತ್ರ್ಯ ಚಳವಳಿಯ ಕೊನೆಯ ದಶಕಗಳಲ್ಲಿ ಮಹಾತ್ಮ ಗಾಂಧಿ ಅವರ ನಂತರದ ಎರಡನೇ ಮಹಾನ್ ನಾಯಕರಾಗಿದ್ದವರು ನೆಹರೂ. ಬ್ರಿಟಿಷರ ಜೈಲುಗಳಲ್ಲಿ ಅವರು 3,259 ದಿನಗಳನ್ನು (ಹೆಚ್ಚು ಕಡಿಮೆ ಒಂಬತ್ತು ವರ್ಷಗಳು) ಕಳೆದರು. 1947ರಿಂದ 1964ರವರೆಗಿನ ಸುದೀರ್ಘ ಅವಧಿವರೆಗೆ ಸ್ವತಂತ್ರ ಭಾರತದ ಪ್ರಧಾನಿಯಾಗಿದ್ದವರು ಅವರು. ಇದಕ್ಕಿಂತ ಹೆಚ್ಚಾಗಿ, ಭಾರತೀಯ ಸಂವಿಧಾನದ ರಚನೆಯಲ್ಲಿ ನಿರ್ಣಾಯಕ ಕೊಡುಗೆಯನ್ನು ನೀಡಿದವರು ಕೂಡ ಅವರಾಗಿದ್ದಾರೆ.

ನೆಹರೂ ಅವರನ್ನು ಹಿಂದೂ ವಿರೋಧಿ ಎಂದು ನಿಂದಿಸುವವರು ಅವರ ಇತರ ಕೃತಿಗಳ ಜತೆಗೆ, ಅವರ ಅನುಪಮ ಕೃತಿಗಳೆನಿಸಿದ Autobiography, Discovery of India, Glimpses of World History ಕೃತಿಗಳನ್ನು ಓದುವ ತೊಂದರೆ ತೆಗೆದುಕೊಳ್ಳಬೇಕು. ಅಷ್ಟೇ ಅಲ್ಲ, 1954ರಲ್ಲಿ ಅವರು ಬರೆದ ಮೃತ್ಯುಪತ್ರವನ್ನೂ ಓದಬೇಕು. ಗಂಗಾ ನದಿ ಮತ್ತು ಪವಿತ್ರ ಹಿಮಾಲಯದ ಬಗೆಗೆ ಅವರು ಅಪಾರ ಗೌರವವನ್ನು ಹೊಂದಿದ್ದುದು ಅವರ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿದೆ. ಇಂದು, ನೈಜ ಹಿಂದೂ ಎಂದರೆ ಆತನೊಬ್ಬ ಮುಸ್ಲಿಂ ವಿರೋಧಿ ಎಂಬ ವ್ಯಾಖ್ಯಾನಕ್ಕೆ ಬಂದು ನಿಂತಿರುವುದು ದುರದೃಷ್ಟಕರ. ಹೌದು, ನೆಹರೂ ಖಂಡಿತವಾಗಿಯೂ ಇಂತಹ ಹಿಂದೂ ಆಗಿರಲಿಲ್ಲ. ಭಾರತೀಯ ಜನತಾ ಪಕ್ಷವು ಲಾಗಾಯ್ತಿನಿಂದ ನೆಹರೂ ಅವರ ವಿರುದ್ಧ ಇದೇ ರೀತಿಯ ಹಗೆತನ ಸಾಧಿಸುತ್ತಾ ಬಂದಿದೆಯೇ? ಇಲ್ಲ. ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್‌ಕೃಷ್ಣ ಅಡ್ವಾಣಿ ಅವರ ನೇತೃತ್ವದ ಅಂದಿನ ಬಿಜೆಪಿಯು ಇಂದಿನ ನರೇಂದ್ರ ಮೋದಿ ಅವರ ನೇತೃತ್ವದ ಅವಧಿಯಲ್ಲಿ ಬೌದ್ಧಿಕವಾಗಿ ಮತ್ತು ನೈತಿಕವಾಗಿ ಹೇಗೆ ಕುಸಿದುಹೋಗಿದೆ ಎನ್ನುವುದಕ್ಕೆ ಈ ಹಗೆತನವೇ ಸಾಕ್ಷಿ. ಇಲ್ಲಿ ಹೇಳಲೇಬೇಕಾದ ಎರಡು ಉದಾಹರಣೆಗಳಿವೆ.

ವಾಲ್ಮೀಕಿಯ ಮಹಾಕಾವ್ಯದಲ್ಲಿ ಬರುವಂತಹ ಉದಾತ್ತ ಭಾವನೆಗಳ ನೋಟವನ್ನು ನಾವು ಪಂಡಿತ್‌ಜಿ ಅವರ ಬದುಕಿನಲ್ಲಿ ಕಾಣಬಹುದು. ರಾಮನಂತೆ ನೆಹರೂ ಕೂಡ ಅಸಾಧ್ಯವಾದುದನ್ನು ಸಾಧ್ಯಮಾಡಿದ ಸಾಧಕ
–ಅಟಲ್ ಬಿಹಾರಿ ವಾಜಪೇಯಿ

ಅಟಲ್‌ಜಿ ಭಾವಪೂರ್ಣ ಶ್ರದ್ಧಾಂಜಲಿ

ಒಂದುದಿನ ಅಟಲ್‌ಜಿ ಅವರಿಗೊಂದಿಗೆ ಮಾತನಾಡುತ್ತಿದ್ದಾಗ –ಅವರೊಂದಿಗೆ ನಿಕಟವಾಗಿ ಕೆಲಸಮಾಡುವ ಸೌಭಾಗ್ಯ ನನ್ನದಾಗಿತ್ತು– ನೆಹರೂ ಅವರ ಕುರಿತು ನಿಮ್ಮ ಅಭಿಪ್ರಾಯವೇನು ಎಂದು ಕೇಳಿದೆ. ‘ನಾನು ನೆಹರೂಜಿ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತೇನೆ. ಅವರೊಬ್ಬ ಅಪ್ರತಿಮ ದೇಶಭಕ್ತರಾಗಿದ್ದರು. ನಿಜ, ಅವರೂ ಕೆಲವು ತಪ್ಪುಗಳನ್ನು ಮಾಡಿದರು. ಆದರೆ, ಆಧುನಿಕ ಭಾರತದ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರ’ ಎಂದು ಅವರು ಹೇಳಿದರು. ನೆಹರೂ ಅವರ ಮೇಲೆ ಅಟಲ್‌ಜಿ ಹೊಂದಿದ ಅಭಿಮಾನದ ಕಾರಣಕ್ಕಾಗಿ ಅವರನ್ನು ಕಾಂಗ್ರೆಸ್ಸೇತರ ಪಕ್ಷದ ನೆಹರೂವಾದಿ ಎಂದೇ ಗುರ್ತಿಸಲಾಗುತ್ತಿತ್ತು.

ನೆಹರೂ ಅವರು 1964ರ ಮೇ 27ರಂದು ಕೊನೆಯುಸಿರೆಳೆದ ಬಳಿಕ ಸಂಸತ್ತಿನಲ್ಲಿ ಅಟಲ್‌ಜಿ ಮಾಡಿದ ಭಾಷಣದ –ಅದು ಅಟಲ್‌ಜಿ ಅವರು ಸಂಸತ್ತಿನಲ್ಲಿ ಮಾಡಿದ ಅತ್ಯುತ್ಕೃಷ್ಟ ಭಾಷಣಗಳಲ್ಲಿ ಒಂದಾಗಿದೆ ಕೂಡ– ಕಾವ್ಯಾತ್ಮಕ ಸಾಲುಗಳಂತೂ ನೋವಿನಲ್ಲಿ ಅದ್ದಿ ತೆಗೆದಂತಿದ್ದವು. ‘ಕಂಡ ಕನಸು ಅರ್ಧದಷ್ಟು ಮಾತ್ರ ನನಸಾಗಿದೆ, ಮಧುರ ಹಾಡು ಮೌನವಾಗಿದೆ, ಜ್ಯೋತಿಯು ಇದ್ದಕ್ಕಿದ್ದಂತೆ ನಂದಿಹೋಗಿದೆ. ಭಯ ಮತ್ತು ಹಸಿವು ಮುಕ್ತ ಜಗತ್ತಿನ ಕನಸು ಅದಾಗಿತ್ತು. ಭಗವದ್ಗೀತೆಯೊಂದಿಗೆ ಪ್ರತಿಧ್ವನಿಸುವ, ಗುಲಾಬಿಯಂತೆ ಪರಿಮಳ ಬೀರುವ ಕಾವ್ಯ ಅದಾಗಿತ್ತು. ಮೇಣದಬತ್ತಿಯೊಂದು ರಾತ್ರಿಯಿಡೀ ತನ್ನನ್ನು ಸುಟ್ಟುಕೊಳ್ಳುತ್ತಾ, ತಾನುಮಾತ್ರ ಕರಗಿಹೋಗುತ್ತಾ ಬೆಳಕು ನೀಡುವಂತೆ ನಮ್ಮ ದಾರಿಯಲ್ಲಿ ಬೆಳಕು ಹರಿಸಿದ ಜ್ಯೋತಿ ಅದಾಗಿತ್ತು’ ಎಂದು ಅವರು ಹೇಳಿದ್ದರು.

ಪ್ರಾಯಶಃ ತಮ್ಮದೇ ಪಕ್ಷದ ಕಟ್ಟರ್‌ವಾದಿಗಳನ್ನು (ಆಗ, ಅದು ಭಾರತೀಯ ಜನ ಸಂಘವಾಗಿತ್ತು) ಉದ್ದೇಶಿಸಿಯೇ ಮಾತನಾಡಿದಂತಿದ್ದ ವಾಜಪೇಯಿ, ‘ನೆಹರೂ ಅವರ ನಿಧನದಿಂದ ಆಗಿರುವ ಈ ನಷ್ಟವು ಬರೀ ಒಂದು ಕುಟುಂಬಕ್ಕೆ, ಒಂದು ಸಮುದಾಯಕ್ಕೆ ಇಲ್ಲವೆ ಒಂದು ಪಕ್ಷಕ್ಕೆ ಆದ ನಷ್ಟವಲ್ಲ. ತನ್ನ ಪ್ರೀತಿಯ ರಾಜಕುಮಾರ ಚಿರನಿದ್ರೆಗೆ ಜಾರಿದ ಎಂದು ತಾಯಿ ಭಾರತಿಯೇ ರೋದಿಸುತ್ತಿದ್ದಾಳೆ. ತನ್ನ ಸೇವಕ ಮತ್ತು ಪೂಜಕ ತನ್ನಿಂದ ಶಾಶ್ವತವಾಗಿ ದೂರವಾದ ಎಂದು ಮಾನವೀಯತೆಯೂ ದುಃಖದ ಮಡುವಿನೊಳಗೆ ಬಿದ್ದಿದೆ. ವಿಶ್ವ ರಂಗಭೂಮಿಯ ಮುಖ್ಯ ಕಲಾವಿದನೀಗ ತನ್ನ ಕೊನೆಯ ಅಭಿನಯ ಮುಗಿಸಿ ನಿರ್ಗಮಿಸಿದ್ದಾನೆ’ ಎಂದು ಮರುಗಿದ್ದರು.

ಅಟಲ್‌ಜಿ ಅವರು ಮುಂದುವರಿದು ಹೇಳಿದ ಮಾತಂತೂ ಮೋದಿ ಬೆಂಬಲಿಗರನ್ನು ಮುಜುಗರಕ್ಕೆ ಈಡು ಮಾಡುವಂಥದ್ದು, ಮಾತ್ರವಲ್ಲ ಕೆರಳಿಸುವಂಥದ್ದು ಕೂಡ. ಏಕೆಂದರೆ, ನೆಹರೂ ಅವರನ್ನು ರಾಮನೊಂದಿಗೆ ಹೋಲಿಕೆ ಮಾಡಿದ್ದರು ಅಟಲ್‌ಜಿ! ‘ವಾಲ್ಮೀಕಿಯ ಮಹಾಕಾವ್ಯದಲ್ಲಿ ಬರುವಂತಹ ಉದಾತ್ತ ಭಾವನೆಗಳ ನೋಟವನ್ನು ನಾವು ಪಂಡಿತ್‌ಜಿ ಅವರ ಬದುಕಿನಲ್ಲಿ ಕಾಣಬಹುದು. ರಾಮನಂತೆ ನೆಹರೂ ಕೂಡ ಅಸಾಧ್ಯವಾದುದನ್ನು ಸಾಧ್ಯಮಾಡಿದ, ಕಲ್ಪನಾತೀತವಾದುದನ್ನು ವಾಸ್ತವದಲ್ಲಿ ತೋರಿದ ಸಾಧಕ. ಅವರ ಸ್ಥಾನವನ್ನು ತುಂಬುವುದು ಬೇರೆ ಯಾರಿಂದಲೂ ಸಾಧ್ಯವಿಲ್ಲ ಎಂದು ವಾಜಪೇಯಿ ಹೇಳಿದ್ದರು. ಮುಂದುವರಿದು, ‘ಆ ವ್ಯಕ್ತಿತ್ವದ ಶಕ್ತಿ, ಆ ಚೈತನ್ಯ ಮತ್ತು ಮನಸ್ಸಿನ ಸ್ವಾತಂತ್ರ್ಯ, ಎದುರಾಳಿ ಹಾಗೂ ಶತ್ರುಗಳೊಂದಿಗೂ ಸ್ನೇಹದಿಂದ ನಡೆದುಕೊಳ್ಳುವ ಗುಣ, ಆ ಸಜ್ಜನಿಕೆ, ಆ ಶ್ರೇಷ್ಠತೆ ಇವು ಬಹುಶಃ ಭವಿಷ್ಯದಲ್ಲಿ ಮತ್ತೆಂದಿಗೂ ಕಂಡುಬರುವುದಿಲ್ಲ’ ಎಂದಿದ್ದರು. ಮೇಲಿನ ಸಾಲುಗಳ ಕಡೆಗೆ ಮೋದಿ ಅವರು ಗಮನ ಕೊಡುವುದು ಒಳ್ಳೆಯದು.

ಎಲ್ಲರಿಗೂ ಗೊತ್ತಿರುವಂತೆ, ನೆಹರೂ ಅವರ ಅಗಲಿಕೆಯು ಭಾರತವನ್ನು ಅನಿಶ್ಚಿತತೆಯ ಸುಳಿಯೊಳಗೆ ತಳ್ಳಿತ್ತು. ಏಕೆಂದರೆ, ಅದರ ಮೇರು ವ್ಯಕ್ತಿತ್ವದ ನಿರ್ಗಮನವಾಗಿತ್ತು. ದುಃಖದ ಮಡುವಿನಲ್ಲಿದ್ದ ರಾಷ್ಟ್ರವು ಭವಿಷ್ಯದ ಕುರಿತು ವ್ಯಾಕುಲಗೊಂಡು ನಿರ್ವಾತದತ್ತ ದಿಟ್ಟಿಸುತ್ತಿತ್ತು. ಇದನ್ನು ಸ್ಪಷ್ಟವಾಗಿ ಗುರ್ತಿಸಿದ್ದ ವಾಜಪೇಯಿ, ನೆಹರೂ ಅವರ ಆದರ್ಶಗಳಿಗೆ ಮರುಸಮರ್ಪಿಸಿಕೊಂಡು ಮುಂದೆ ಸಾಗಬೇಕೆಂದು ಭಾರತೀಯರಿಗೆ ಕರೆ ನೀಡಿದ್ದರು. ನೆಹರೂ ಅವರ ಆದರ್ಶಗಳೆಂದರೆ ಅವುಗಳು ಭಾರತ ಗಣರಾಜ್ಯದ ಆದರ್ಶಗಳೂ ಆಗಿದ್ದವು.

‘ಐಕ್ಯತೆ, ಶಿಸ್ತು ಮತ್ತು ಆತ್ಮವಿಶ್ವಾಸದಿಂದ, ನಾವು ನಮ್ಮ ಈ ಗಣರಾಜ್ಯವನ್ನು ಪ್ರವರ್ಧಮಾನಕ್ಕೆ ತರಬೇಕಿದೆ. ನಾಯಕನೇನೋ ಹೋಗಿದ್ದಾನೆ, ಆದರೆ ಅನುಯಾಯಿಗಳು ಉಳಿದಿದ್ದಾರೆ. ಸೂರ್ಯ ಮುಳುಗಿದ್ದಾನೆ, ಆದರೂ ನಕ್ಷತ್ರಗಳ ನೆರಳಿನಲ್ಲಿ ನಾವು ನಮ್ಮ ದಾರಿಯನ್ನು ಕಂಡುಕೊಳ್ಳಬೇಕಿದೆ. ಇದು ಪರೀಕ್ಷೆಯ ಸಮಯ. ಅವರ ಮಹತ್ತರವಾದ ಗುರಿಗೆ ನಮ್ಮನ್ನು ನಾವು ಅರ್ಪಿಸಿಕೊಳ್ಳಬೇಕು. ಇದರಿಂದ ಭಾರತವು ಪ್ರಬಲ, ಸಮರ್ಥ ಮತ್ತು ಸಮೃದ್ಧ ರಾಷ್ಟ್ರವಾಗಲು ಸಾಧ್ಯ’ ಎಂದಿದ್ದರು. ಅಂತಿಮವಾಗಿ, ನೆಹರೂ ಅವರ ಹೃದಯಕ್ಕೆ ಅತ್ಯಂತ ಪ್ರಿಯವಾದ ಆದರ್ಶವನ್ನು ಅನುಮೋದಿಸುತ್ತಾ, ಜನ ಸಂಘದ ಈ ನಾಯಕ ದೇಶವಾಸಿಗಳಿಗೆ ಅದನ್ನು ನೆನಪಿಸುತ್ತಾ ಹೀಗೆ ಹೇಳಿದರು: ‘ಜಗತ್ತಿನಲ್ಲಿ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಲು ಭಾರತವು ತನ್ನನ್ನು ಪುನಃ ಸಮರ್ಪಿಸಿಕೊಂಡರೆ, ದೇಶ ಅವರಿಗೆ ಸರಿಯಾದ ಗೌರವವನ್ನು ಸಲ್ಲಿಸಿದಂತೆ’.

ದೇಶದ ಅತ್ಯುತ್ಕೃಷ್ಟ ವಿರೋಧಪಕ್ಷದ ನಾಯಕರಲ್ಲಿ ಒಬ್ಬರಾಗಿದ್ದ, ಮುಂದೆ ದೇಶದ ಪ್ರೀತಿಗೆ ಪಾತ್ರರಾದ ಪ್ರಧಾನಿಯೂ ಆಗಿದ್ದ ವಾಜಪೇಯಿ ಅವರು ನೆಹರೂ ಅವರಿಗೆ ಈ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಆರು ದಶಕಗಳೇ ಆಗಿವೆ. ಗತಿಸಿದ ಕಾಲವೇನಾದರೂ ಅದರ ಅರ್ಥವನ್ನು ಅಳಿಸಿಹಾಕಿದೆಯೇ? ಖಂಡಿತಾ ಇಲ್ಲ.

ಆರ್‌ಎಸ್‌ಎಸ್‌ನ ದ್ವಿತೀಯ ಸರಸಂಘಚಾಲಕರಾಗಿದ್ದ ಗುರೂಜಿ ಗೋಲ್ವಾಲ್ಕರ್ ಅವರ ಅಭಿಪ್ರಾಯವನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯ. ನೆಹರೂ ಅವರು ಆರ್‌ಎಸ್‌ಎಸ್‌ನ ಟೀಕಾಕಾರರಾಗಿದ್ದರು. ಹಾಗೆಯೇ ಆರ್‌ಎಸ್‌ಎಸ್ ಕೂಡ ನೆಹರೂ ಅವರನ್ನು ಟೀಕಿಸುತ್ತಿತ್ತು. ಆದಾಗ್ಯೂ, ನೆಹರೂ ಅವರು ನಿಧನರಾದಾಗ ಲೇಖನ ಬರೆದು ಶ್ರದ್ಧಾಂಜಲಿ ಅರ್ಪಿಸಿದ ಗೋಲ್ವಾಲ್ಕರ್, ಅವರ ದೇಶಭಕ್ತಿ ಮತ್ತು ಉದಾತ್ತ ಆದರ್ಶವನ್ನು ಮುಕ್ತಕಂಠದಿಂದ ಪ್ರಶಂಸಿದ್ದರು. ‘ತಾಯಿ ಭಾರತಿಯ ಮಹಾನ್ ಸುಪುತ್ರ’ ಎಂದೂ ಅವರನ್ನು ಕರೆದಿದ್ದರು.

ಅಡ್ವಾಣಿ ಸಲ್ಲಿಸಿದ ಗೌರವ

ಮೋದಿ ಭಕ್ತರಲ್ಲಿ ಮುಜುಗರ ಉಂಟುಮಾಡುವಂತಹ ಇನ್ನೊಂದು ಉದಾಹರಣೆ ಇಲ್ಲಿದೆ. ಅದು 1997ನೇ ಇಸ್ವಿ. ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ, ಆ ಉತ್ಸವವನ್ನು ಸಂಭ್ರಮಿಸುವ ಜತೆಗೆ ಜನರೊಂದಿಗೆ ಸಂಪರ್ಕವನ್ನೂ ಸಾಧಿಸಲು ಭಾರತೀಯ ಜನತಾ ಪಕ್ಷವು, ಪಕ್ಷದ ಆಗಿನ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರ ನೇತೃತ್ವದಲ್ಲಿ ಸ್ವರ್ಣ ಜಯಂತಿ ರಥಯಾತ್ರೆಯನ್ನು ಹಮ್ಮಿಕೊಂಡಿತ್ತು. ಎರಡು ತಿಂಗಳವರೆಗೆ ನಿರಂತರವಾಗಿ ಅವರು ರಸ್ತೆ ಮಾರ್ಗದಲ್ಲಿ (ಆಗಿನ ರಸ್ತೆಗಳು ಈಗಿರುವುದಕ್ಕಿಂತ ಕೆಟ್ಟ ಸ್ಥಿತಿಯಲ್ಲಿದ್ದವು) ದೇಶದ ತುಂಬಾ ಸುತ್ತಾಡಿದರು. ಸ್ವಾತಂತ್ರ್ಯ ಚಳವಳಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದ ಎಲ್ಲ ಪ್ರಮುಖ ಸ್ಥಳಗಳಿಗೂ ಅವರು ಭೇಟಿ ನೀಡಿದರು. ರಾಜಕೀಯ, ಸೈದ್ಧಾಂತಿಕ ಇಲ್ಲವೆ ಧಾರ್ಮಿಕ ಭೇದ ಎಣಿಸದೆ ಎಲ್ಲ ಸ್ವಾತಂತ್ರ್ಯ ಸೇನಾನಿಗಳಿಗೂ ಹುತಾತ್ಮರಿಗೂ ಗೌರವ ಸಲ್ಲಿಸಿದರು.

ಅಡ್ವಾಣಿಯವರ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ನಾನು, ದೇಶದುದ್ದಕ್ಕೂ ಅವರೊಡನೆ ಈ ಯಾತ್ರೆಯಲ್ಲಿ ಸಂಚರಿಸಿದೆ. ನನ್ನ A Patriotic Pilgrimage ಕೃತಿಯಲ್ಲಿ ಆ ಅನುಭವಗಳನ್ನು ವಿವರವಾಗಿ ದಾಖಲಿಸಿದ್ದೇನೆ. ನಮ್ಮ ರಥವು ಮೇ 27ರಂದು ಚೆನ್ನೈ ತಲುಪಿತ್ತು. ಆ ದಿನ, ನೆಹರೂ ಅವರ ಪುಣ್ಯತಿಥಿ ಇದ್ದುದರಿಂದ ಅವರಿಗೆ ಗೌರವ ಸಲ್ಲಿಸುವುದು ಸೂಕ್ತ ಎಂದು ನಾನು ಅಡ್ವಾಣಿ ಅವರಿಗೆ ಹೇಳಿದೆ. ಮರುಮಾತಿಲ್ಲದೆ ಅವರು ಒಪ್ಪಿಕೊಂಡರು.

11ನೇ ಪುಟಕ್ಕೆ...

ಭಾರತೋದಯ ಚರಿತೆ

ವೈ.ಗ. ಜಗದೀಶ್

ಸ್ವಾತಂತ್ರ್ಯದ ‘ಅಮೃತ’ ಸಿಂಚನ ದೇಶದೊಡಲ ತುಂಬಾ ರಾಷ್ಟ್ರಪ್ರೇಮದ ಘಮವನ್ನು ಹೂಗಂಪಿನಂತೆ ಚೆಲ್ಲಿದೆ. 75 ವರ್ಷಗಳ ಹಿಂದೆ ಪರಂಗಿಯವರನ್ನು ಓಡಿಸಿ, ಭಾರತೀಯರ ಭವಿತವ್ಯ ಉಜ್ವಲವಾಗಿರಬೇಕೆಂಬ ಕನಸಿಗೆ ತಮ್ಮ ಬಾಲ್ಯ–ತುಂಬು ಯೌವ್ವನವನ್ನೇ ಬಲಿಗೊಟ್ಟು ಬಾಳನ್ನೇ ಧಾರೆ ಎರೆದವರು ಲಕ್ಷಾಂತರ ವೀರರು. ಹುತಾತ್ಮರಾದವರು ಅಗಣಿತ... ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಲಿಗಳ ತ್ಯಾಗ–ಬಲಿದಾನ ದೇಶದ ಇಂಚಿಂಚೂ ಮಣ್ಣನ್ನು ತೋಯಿಸಿ, ಹಿರೀಕರು ಹೊರಿಸಿದ ‘ಋಣ ಭಾರ’ ಭಾರತಾಂಬೆಯ ಮಡಿಲೊಳಗೆ ಜತನದಿಂದ ಇದ್ದು, ನಮ್ಮೆಲ್ಲರನ್ನೂ ಪೊರೆಯುತ್ತಿರುವ ಶಕ್ತಿಯೂ ಆಗಿದೆ.

ಅಮೃತೋತ್ಸವ ಆಚರಣೆ ಹೊತ್ತಿನಲ್ಲಿ ಸ್ವಾತಂತ್ರ್ಯಕ್ಕೆ ಹೋರಾಡಿದವರ ಅನುಪಮ ಕೊಡುಗೆಯನ್ನು ನೆನೆಯದಿದ್ದರೆ ಭಾರತಮಾತೆ ಕ್ಷಮಿಸಲಾರಳು. ಅಮೃತೋತ್ಸವದ ದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ನೀಡಿದ ಜಾಹೀರಾತಿನಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಭಾವಚಿತ್ರವನ್ನೇ ಕೈಬಿಡಲಾಗಿತ್ತು. ಸ್ವಾತಂತ್ರ್ಯದ ಸ್ಮೃತಿಪಟಲದಿಂದ ನೆಹರೂ ಅವರನ್ನು ಅಳಿಸಿಹಾಕುವ ಹೀನಮನಃಸ್ಥಿತಿ, ವಿಸ್ಮೃತಿಗೆ ಜನರನ್ನು ಕೊಂಡೊಯ್ಯುವ ವಿಕೃತಿ. ನಮ್ಮ ಮುಖಕ್ಕೆ ನಾವೇ ಕೆಸರು ಬಳಿದುಕೊಳ್ಳುವ ದುಃಸ್ಥಿತಿ.

ಭಾರತದ ಸ್ವಾತಂತ್ರ್ಯ ಸಮರದಿಂದ ಮಹಾತ್ಮ ಗಾಂಧೀಜಿ, ನೆಹರೂ ಅವರನ್ನು, ಸಂವಿಧಾನದ ವಿಷಯದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಮರೆಮಾಚಿಸುವುದೆಂದರೆ ಅದು ಇತಿಹಾಸಕ್ಕೆ ಬಗೆಯುವ ದ್ರೋಹ. ನಮ್ಮಿ ತಾಯ್ನೆಲದ ಭವಿಷ್ಯಕ್ಕೆ ಬುನಾದಿ ಹಾಕಿದವರು ಈ ಮೂವರು. ಇವರನ್ನು ಹೊರಗಿಡುವುದೆಂದರೆ ಭಾರತದ ಪಾರ್ಶ್ವವನ್ನೇ ಗರಗಸಕ್ಕೆ ಒಡ್ಡಿದಂತೆ.. ಭಾರತ ವಿಭಜನೆಗೆ ಕಾರಣರಾರು? ನೈಜ ಸ್ವಾತಂತ್ರ್ಯ ಹೋರಾಟಗಾರರು ಯಾರು ಎಂಬ ಚರ್ಚೆ ಅಮೃತೋತ್ಸವದ ಹೊತ್ತಿನೊಳಗೆ ಬಿರುಸುಗೊಂಡಿದೆ. ಭಾರತ ವಿಭಜನೆ ಎಂಬುದು ದುರಂತ ಅಂತ್ಯ. ಹಾಗಂತ, ಆ ಗಾಯವನ್ನು ಮತ್ತೆ ಮತ್ತೆ ಕೆರೆದು ವ್ರಣವಾಗಿಸುವುದು ರಾಜಕೀಯ. ಅದಕ್ಕೆ ಮುಲಾಮು ಸಿಕ್ಕದು.

ಅಖಂಡ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದವರು ವಿಭಜನೆಯನ್ನು ಸಂಭ್ರಮಿಸಿದವರಲ್ಲ. ಅದಕ್ಕೆ ತಾತ್ವಿಕ ಒಪ್ಪಿಗೆಯನ್ನೂ ಕೊಟ್ಟವರಲ್ಲ. ಹಾಗಿದ್ದರೂ ಅವರನ್ನು ದೂಷಿಸುವುದು ಅಪರಾಧ. ಇದಕ್ಕೆ ದೃಷ್ಟಾಂತಗಳನ್ನು ಹುಡುಕಬೇಕಾದರೆ, 1947ರ ಆಗಸ್ಟ್ 14ರ ರಾತ್ರಿ ಮತ್ತು 15ರ ಇಡೀ ದಿನ ನಡೆದ ಭಾರತ ಸಂವಿಧಾನ ರಚನಾಸಭೆಯ ನಡಾವಳಿಗಳ ಪುಟಗಳನ್ನು ಹಾದು ಬರಬೇಕು. ಆಗ ಮಾತ್ರ, ಸ್ವಾತಂತ್ರ್ಯಕ್ಕೆ ಹೋರಾಡಿದವರು ‘ಕೊಂಡ ಹಾಯ್ದು’ ತಾವೇ ಸುಟ್ಟುಕೊಂಡು ಪರಿತಪಿಸಿದ ನೋವುಗಳು ಕಣ್ಮುಂದೆ ಬರುತ್ತವೆ... ಬನ್ನಿ ಆ ಅಗ್ನಿನಡಿಗೆಯಲ್ಲಿ ಅಗ್ನಿದಿವ್ಯವನ್ನು ಮುಟ್ಟಿ, ಸತ್ಯವನ್ನೇ ಸಾರಿದವರ ದಾರಿಯನ್ನು ಅವಲೋಕಿಸೋಣ...

ಬ್ರಿಟಿಷರು ಅಧಿಕಾರವನ್ನು ಹಸ್ತಾಂತರಿಸಿದ ಹೊತ್ತಿನ ನಡಾವಳಿಗಳು ಇತಿಹಾಸದಲ್ಲಿ ದಾಖಲಾಗಿವೆ.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತವು ಎರಡು ರಾಷ್ಟ್ರಗಳಾಗಿ ರೂಪುಗೊಳ್ಳಬೇಕೆಂಬುದು ನಿರ್ಧರಿಸಿದ್ದು ಬ್ರಿಟಿಷರು. ಬ್ರಿಟನ್ ಸಂಸತ್‌ನಲ್ಲಿ 1947ರ ಜುಲೈ 18ರಂದು ಅಂಗೀಕಾರಕೊಂಡ ‘ಇಂಡಿಯನ್ ಇಂಡಿಪೆಂಡೆನ್ಸ್ ಆ್ಯಕ್ಟ್– 1947’ರಲ್ಲಿ ಇದಕ್ಕೆ ಒಪ್ಪಿಗೆ ನೀಡಲಾಗಿತ್ತು.

ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಿದ ಸಂದರ್ಭದಲ್ಲಿ ಅದನ್ನು ವಹಿಸಿಕೊಂಡ ಭಾರತ ಸಂವಿಧಾನ ರಚನಾ ಸಭೆಯಲ್ಲಿ 299 ಸದಸ್ಯರಿದ್ದರು. 12 ಪ್ರಾಂತ್ಯಗಳಿಂದ ಆಯ್ಕೆಯಾಗಿದ್ದ 229 ಸದಸ್ಯರು, ರಾಜಸಂಸ್ಥಾನಗಳಿಂದ ನಾಮನಿರ್ದೇಶನಗೊಂಡಿದ್ದ 70 ಸದಸ್ಯರಿದ್ದರು. ಇವರ ಸಮ್ಮುಖದಲ್ಲಿ ಸಭೆ ನಡೆಯಿತು.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ಅದು ಸಿಕ್ಕ ರೀತಿಯು ಜನರಿಗೆ ಸಂತೋಷ ತಂದಿಲ್ಲ. ಅವರ ಮುಖದಲ್ಲಿ ನಗು ಉಕ್ಕಿಸಿಲ್ಲ.
–ಜವಾಹರಲಾಲ್ ನೆಹರೂ

ಮೊದಲ ಚರಣ

- **ಗುರುವಾರ, 14 ನೇ ಆಗಸ್ಟ್, 1947:** ಭಾರತ ಸಂವಿಧಾನ ರಚನಾ ಸಭೆಯ ಐದನೆಯ ಅಧಿವೇಶನವು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ (ಈಗಿನ ಸಂಸತ್ ಭವನದ ಸೆಂಟ್ರಲ್ ಹಾಲ್) ಸಭಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ರಾತ್ರಿ ಹನ್ನೊಂದು ಗಂಟೆಗೆ ಪ್ರಾರಂಭವಾಯಿತು.

ವಂದೇ ಮಾತರಂ ಗೀತೆಯ ಗಾಯನ

- **ಸಭಾಧ್ಯಕ್ಷರ ಭಾಷಣ:** ‘ಹಲವಾರು ವರ್ಷಗಳ ಹೋರಾಟದ ತರುವಾಯ ಈ ದೇಶದ ಆಡಳಿತ ಸೂತ್ರವನ್ನು ನಾವು ಕೈಗೆತ್ತಿಕೊಳ್ಳುತ್ತಿರುವ ಈ ಐತಿಹಾಸಿಕ ಪವಿತ್ರ ಸಮಯದಲ್ಲಿ, ನಗುನಗುತ್ತಲೇ ನೇಣುಗಂಬದತ್ತ ಹೆಜ್ಜೆಹಾಕಿದ ಅಥವಾ ಬಂದೂಕಿನ ಗುಂಡಿಗೆ ಎದೆಯೊಡ್ಡಿದ, ಅಂಡಮಾನ್ ಕಾರಾಗೃಹಗಳಲ್ಲಿ ಜೀವಚ್ಛವಗಳಾಗಿ ಬದುಕು ಸವೆಸಿದ ಅಥವಾ ಭಾರತದ ಸೆರೆಮನೆಗಳಲ್ಲಿ ದೀರ್ಘಾವಧಿ ಸೆರೆಯನ್ನನುಭವಿಸಿದ, ವಿದೇಶಗಳಲ್ಲಿ ಸ್ವಇಚ್ಛೆಯಿಂದ ಹಿಂಸೆಯ ಬದುಕನ್ನಪ್ಪಿಕೊಂಡ, ತಮ್ಮ ಸಿರಿಸಂಪತ್ತನಷ್ಟೇ ಅಲ್ಲ, ಪ್ರೀತಿಪಾತ್ರರನ್ನೂ ತೊರೆದು ಇಂದು ನಾವು ನೋಡುತ್ತಿರುವ ಈ ಸ್ವಾತಂತ್ರ್ಯದ ಉನ್ನತ ಧ್ಯೇಯದ ಸಾಧನೆಗಾಗಿ ತಮ್ಮನೇ ತಾವು ಅರ್ಪಿಸಿಕೊಂಡ, ನಮಗೆ ಗೊತ್ತಿರುವ, ಗೊತ್ತಿರದ ಎಲ್ಲ ಸ್ತ್ರೀ, ಪುರುಷರ ಸೇವೆ ಹಾಗೂ ಬಲಿದಾನವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸೋಣ.

ಕಳೆದ ಮೂವತ್ತು ವರ್ಷಗಳಿಗಿಂತ ಹೆಚ್ಚು ಕಾಲ ನಮ್ಮ ಗುರು ಹಾಗೂ ದಾರಿದೀಪವಾಗಿರುವ ಮಹಾತ್ಮ ಗಾಂಧಿಯವರಿಗೆ ನಮ್ಮ ಪ್ರೀತ್ಯಾದರಗಳನ್ನು ಸಲ್ಲಿಸೋಣ. ನಿರಾಶೆ–ಹತಾಶೆಯ ಕೂಪದಿಂದ ನಮ್ಮನ್ನು ಮೇಲೆತ್ತಿ, ಸ್ವಾತಂತ್ರ್ಯವೆಂಬ ನಮ್ಮ ಜನ್ಮಸಿದ್ಧ ಹಕ್ಕನ್ನು ಕೇಳಲು ಚೈತನ್ಯ ತುಂಬಿದವರು ಗಾಂಧೀಜಿ. ಸತ್ಯ ಹಾಗೂ ಅಹಿಂಸೆಯ ಅಜಿಂಕ್ಯ ಹಾಗೂ ಅಪ್ರತಿಹತ ಆಯುಧವನ್ನು ನಮ್ಮ ಕೈಗಿತ್ತು ಅದರ ಬಲದಿಂದ ನಿರಾಯುಧರಾಗಿಯೇ ನಮಗಾಗಿ ಅನರ್ಘ್ಯ ಸ್ವರಾಜ್ಯವನ್ನು ಗೆದ್ದುಕೊಟ್ಟವರು ಅವರು...

9ನೇ ಪುಟಕ್ಕೆ...

ನೂರಾರು ನೆನಪುಗಳ ತೀನ್ ಮೂರ್ತಿ ಭವನ

ಸ್ವಾತಂತ್ರ್ಯದ ನಂತರದ ನವ ಭಾರತ ನಿರ್ಮಾಣಕ್ಕೆ ನೆಹರೂ ಅವರು ಈ ಮನೆಯಲ್ಲೇ ಕನಸು ಕಂಡರು. ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿದರು. ಚರಿತ್ರೆಯನ್ನು ಕಣ್ಮುಂದೆ ಮೆರವಣಿಗೆ ಹೊರಡಿಸುವ ತೀನ್ ಮೂರ್ತಿ ಭವನದಲ್ಲೊಂದು ಸುತ್ತು...



ಮಂಜುನಾಥ ಹೆಬ್ಬಾರ್

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಬದುಕಿನ ಸವಿನೆನಪುಗಳನ್ನು ಸಾರುವ ತೀನ್ ಮೂರ್ತಿ ಭವನದಲ್ಲಿ ಅಡ್ಡಾಡುವಾಗ ಆಗುವ ಅನುಭೂತಿ ವರ್ಣಿಸಲಸದಳ. ಭವನದೊಳಗೆ ಹೆಜ್ಜೆ ಹಾಕುತ್ತಾ ಮುಂದುವರಿಯುತ್ತಿದ್ದಂತೆಯೇ ಚಿಕ್ಕ ಬಾಲಕ ನೆಹರೂ, ಸ್ಫುರದ್ರೂಪಿ ಯುವಕನಾಗಿ, ಶ್ರೇಷ್ಠ ನಾಯಕನಾಗಿ ಬೆಳೆದ ಹಾದಿಯ ಚಿತ್ರಗಳು ಒಂದೊಂದಾಗಿ ಎದುರಾಗುತ್ತಾ ಸಾಗುತ್ತವೆ.

ದೇಶ, ವಿದೇಶದ ಘನ ವಿದ್ವಾಂಸರ ಮಹಾಕೃತಿಗಳ ಸಂಗ್ರಹವಿರುವ ಗ್ರಂಥಾಲಯ, ಇತಿಹಾಸದ ವೈಭವಕ್ಕೆ ಸಾಕ್ಷಿಯಾಗಿರುವ ವಸ್ತು ಸಂಗ್ರಹಾಲಯ, ಪ್ರಾಂಗಣದಲ್ಲಿ ಅರಳಿರುವ ಹೂಗಳ ಕಂಪು ಮತ್ತು ಸಂಜೆಯಾದರೆ ಅಂಜಿಕೆಯಿಲ್ಲದೆ ಅಡ್ಡಾಡುವ ನವಿಲುಗಳು ತೀನ್ ಮೂರ್ತಿ ಭವನದ ಹೆಗ್ಗುರುತುಗಳಾಗಿವೆ.

ಮರದ ನೆರಳಿನಲ್ಲಿ ವಿದ್ಯುತ್ ಬೆಳಕಿಗೆ ಹೊಳೆಯುವ ನೆಹರೂ, ಇಂದಿರಾ ಮತ್ತು ರಾಜೀವ್ ಗಾಂಧಿ ಅವರ ಸ್ಮಾರಕಗಳು, ಕಲ್ಲುಗಳಲ್ಲಿ ಕೆತ್ತಲಾದ ಅವರ ಜನಪ್ರಿಯ ಭಾಷಣದ ತುಣುಕುಗಳು ಕಾಲ ಸರ್ರನೇ ಅರ್ಧ ಶತಮಾನ ಹಿಂದಕ್ಕೆ ಸರಿಯುವಂತೆ ಮಾಡುತ್ತವೆ.

ಯುವಕ ನೆಹರೂ, ವಕೀಲರಾಗಿದ್ದ ತಂದೆ ಮೋತಿಲಾಲ್ ನೆಹರೂ ಅವರೊಂದಿಗೆ ಒಂದೇ ರೀತಿಯ ಡಿನ್ನರ್ ಜಾಕೆಟ್‌ಗಳಲ್ಲಿ ಕಾಣಿಸಿಕೊಂಡ ಚಿತ್ರ, ಅಚ್ಚುಮೆಚ್ಚಿನ ತಾಣವಾದ ಕಾಶ್ಮೀರದಲ್ಲಿ ಕುದುರೆ ಸವಾರಿ ಮಾಡುತ್ತಾ, ತಮ್ಮ ಸಹೋದರಿಯರೊಂದಿಗೆ ಗಹನಚರ್ಚೆಯಲ್ಲಿ ತೊಡಗಿರುವ ಚಿತ್ರ ಒಂದೊಂದಾಗಿ ಹಿಂದೆ ಸರಿಯುತ್ತಾ ಹರೆಯದ ದಿನಗಳಲ್ಲಿನ ಅವರ ವ್ಯಕ್ತಿತ್ವ ಹೇಗಿತ್ತು ಎಂಬ ಝಲಕ್‌ಗಳನ್ನು ಪರಿಚಯಿಸುತ್ತಾ ಹೋಗುತ್ತವೆ.

ಮ್ಯೂಸಿಯಂನಲ್ಲಿ ನೆಹರೂ ಅವರ ಮನೆಯ ಲಿವಿಂಗ್ ರೂಮ್, ಬೆಡ್ ರೂಮ್ ಮತ್ತು ಸ್ಟಡಿ ಟೇಬಲ್‌ಗಳನ್ನು ಕಾಣಬಹುದು. ಚಾಚಾ ನೆಹರೂ ಧರಿಸಿದ್ದ ಕೋಟು ಹಾಗೂ ಅದರ ಜೇಬಿನಲ್ಲಿದ್ದ ಹೂವು ಇಂದಿಗೂ ಮಕ್ಕಳ ಪಾಲಿಗೆ ನೆಚ್ಚಿನ ದಿರಿಸು. ಅವುಗಳೊಂದಿಗೆ ನೆಹರೂ ಬಳಸಿದ್ದ ಇತರ ಪರಿಕರಗಳೂ ಇಲ್ಲಿವೆ. ಜೊತೆಗೆ, ಅವರಿಗೆ ದೊರೆತ ಭಾರತರತ್ನ ಪ್ರಶಸ್ತಿಯೂ ಹೊಳೆಯುತ್ತಿದೆ. ಅವರ ಕಾಲದಲ್ಲಿ ನಡೆದ ಭಾರತ-ಚೀನಾ ಯುದ್ಧದ ಚಿತ್ರಗಳು ಅಲ್ಲಿ ಹರಡಿಕೊಂಡಿವೆ. ಅವರ ಅದ್ಭುತ ಭಾಷಣಗಳ ಸಾರಗಳೆಲ್ಲವೂ ಅಲ್ಲಿ ಬಿಂಬಿತವಾಗಿದ್ದು, ಅವರ ವ್ಯಕ್ತಿತ್ವದ ಚಿತ್ರಣವನ್ನು ಕಟ್ಟಿಕೊಡುತ್ತಿವೆ.

ಪತ್ರ ಬರೆಯುವ ಪ್ರವೃತ್ತಿಗೆ ಜನಪ್ರಿಯವಾಗಿದ್ದ ನೆಹರೂ ಅವರಿಗೆ ಇತರ ದೇಶದ ನಾಯಕರು ಬರೆದ ಪತ್ರಗಳು, ಅವರು ಜೈಲಿನಲ್ಲಿದ್ದಾಗ, ಅವರ ಸಹೋದರಿ ಬರೆದ ಪತ್ರಗಳು ಹಾಗೂ ನೆಹರೂ ಅವರೇ ಇತರರಿಗೆ ಬರೆದ ಪತ್ರಗಳ ಸ್ಕ್ಯಾನ್ ಮಾಡಿರುವ ಪ್ರತಿಗಳು ಅವರ ವಿದ್ವತ್ತಿಗೆ ಕನ್ನಡಿ ಹಿಡಿಯುತ್ತವೆ. ನೆಹರೂ ಅವರು ಕೊನೆಯುಸಿರು ಎಳೆದಾಗ, ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿರುವುದು ಹಾಗೂ ಅವರ ಅಂತಿಮ ದರ್ಶನಕ್ಕೆ ಜನಸಾಗರವೇ ಹರಿದುಬಂದಿರುವ ದೃಶ್ಯಗಳನ್ನು ಇಲ್ಲಿ ಬೃಹತ್ ಪರದೆಗಳಲ್ಲಿ ಪ್ರಸಾರ ಮಾಡಲಾಗುತ್ತದೆ. ಭಾರತ ಮಾತೆ ತನ್ನ ಹೆಮ್ಮೆಯ ಪುತ್ರನ ಅಗಲಿಕೆಯಿಂದ ಅನುಭವಿಸಿದ ನೋವನ್ನು ಅದು ಕಟ್ಟಿಕೊಡುತ್ತದೆ. ಸಂವಿಧಾನ ರಚನಾ ಪ್ರಕ್ರಿಯೆಯನ್ನು ಇನ್ನಷ್ಟು ಆಸಕ್ತಿಕರವಾಗಿ ಪ್ರದರ್ಶಿಸುವ ಪ್ರಯತ್ನ ಮಾಡಲಾಗಿದೆ.

10ನೇ ಪುಟಕ್ಕೆ...

'ಪವನ ಜಪ'ದ ಯುರೋಪ್ ಗ್ರಾಮ

ಕಣ್ಣು ಹಾಯಿಸಿದಷ್ಟು ದೂರಕ್ಕೆ ಹರಡಿರುವ ಟ್ಯೂಲಿಪ್ ಹೂವಿನ ತೋರಣದೊಳಗಿನಿಂದ ಝಾನ್ಸ್ ಶಾನ್ಸ್ ಗ್ರಾಮವನ್ನು ನೋಡುವುದೇ ಚೆಂದ

ಪ್ರಹ್ಲಾದ ಪರ್ವತಿ

ಪ್ರವಾಸ

ನೆದರ್ಲೆಂಡ್ಸ್‌ನ ರಾಜಧಾನಿ ಆ್ಯಮ್‌ಸ್ಟರ್‌ಡ್ಯಾಮ್‌ನ ಗೌಜು-ಗದ್ದಲ ಗಡಿಬಿಡಿಯ ವಾತಾವರಣದಿಂದ 45 ಕಿ.ಮೀ. ದೂರವಿರುವ, ಡಚ್ ಸಂಸ್ಕೃತಿಯನ್ನು ಬಿಂಬಿಸುವ ಝಾನ್ಸ್ ಶಾನ್ಸ್ ಗ್ರಾಮ, ಪ್ರಾಚೀನ ಗಾಳಿಯಂತ್ರ(ವಿಂಡ್‌ಮಿಲ್)ಗಳಿಂದಾಗಿ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಝಾನ್ ನದಿಯ ದಂಡೆಯ ಹಸಿರು ಹುಲ್ಲುಗಾವಲಿನ ಈ ರಮ್ಯ ನಿಸರ್ಗ ಪ್ರದೇಶ ನೋಡಲು ಪ್ರತಿದಿನ ಪ್ರವಾಸಿಗರ ದಂಡೇ ಬರುತ್ತದೆ.

ನೆದರ್ಲೆಂಡ್ಸ್‌ನ ಯಾವುದೇ ಊರಿಗೆ ಹೋದರೂ ನೀವು ನದಿ, ಕಾಲುವೆ ಕಾಣುವುದಷ್ಟೇ ಅಲ್ಲ, ಅವುಗಳ ಮೂಲಕವೇ ಪ್ರವಾಸ ಸಾಗುತ್ತದೆ. ನೀರಿನ ಸಮೃದ್ಧ ಸೌಲಭ್ಯವಿರುವ ಈ ದೇಶದ ಜಲಸಾರಿಗೆ ನಿರ್ವಹಣೆ ಹಾಗೂ ಅದರ ಬಳಕೆಯ ವಿಧಾನ ಅನುಕರಣೀಯ. ಅಂತೆಯೇ ನದಿ, ನದಿ ತೀರ ಮತ್ತು ಬಯಲು ಪ್ರದೇಶದಲ್ಲಿ ಗಾಳಿ ಯಂತ್ರಗಳಿಂದ ವಿದ್ಯುತ್ ಉತ್ಪಾದನೆಯಲ್ಲಿ ಈ ರಾಷ್ಟ್ರ ಸ್ವಾವಲಂಬಿ. ಹದಿನಾಲ್ಕನೇ ಶತಮಾನದಲ್ಲಿ ತಗ್ಗು ಪ್ರದೇಶದಲ್ಲಿದ್ದ ನೀರನ್ನು ಎತ್ತಲು ಹಾಗೂ ಕೃಷಿ ಭೂಮಿಗೆ ನೀರಾವರಿ ವ್ಯವಸ್ಥೆ ಮಾಡಲು ಈ ಗಾಳಿಯಂತ್ರಗಳು ಬಳಕೆಯಾಗುತ್ತಿದ್ದವು.

ವಿಂಡ್‌ಮಿಲ್ ಗ್ರಾಮ: ಝಾನ್ ನದಿ ತೀರದಲ್ಲಿರುವ ಝಾನ್ಸ್ ಶಾನ್ಸ್ ಗ್ರಾಮಕ್ಕೆ ಭೇಟಿ ನೀಡಿದಾಗ ಹೊಸ ಲೋಕವೇ ಕಣ್ಮುಂದೆ ತೆರೆದುಕೊಳ್ಳುತ್ತದೆ. ಕಣ್ಣು ಹಾಯಿಸಿದಲ್ಲೆಲ್ಲಾ ಕಂಡುಬರುವ ಬೃಹತ್ ವಿಂಡ್‌ಮಿಲ್‌ಗಳು, ಹಚ್ಚ ಹಸಿರಿನಿಂದ ಕೂಡಿದ ಹುಲ್ಲುಗಾವಲಿನ ವನಸಿರಿಯ ಸೊಬಗು, ಹಸು, ಕುರಿ ಮೇಯುತ್ತಿರುವ ದೃಶ್ಯ, ಸುಂದರ ಕಟ್ಟಿಗೆಯ ಮನೆಗಳು, ವಸ್ತು ಸಂಗ್ರಹಾಲಯ- ಹೀಗೆ ಹೆಜ್ಜೆ ಹಾಕುತ್ತಾ ಗತಕಾಲದ ಹಳ್ಳಿಯೊಂದನ್ನು ಪ್ರವೇಶಿಸಿದ ಅನುಭವವಾಗುತ್ತದೆ. ಇಂದಿಗೂ ಸಂರಕ್ಷಿಸಲ್ಪಟ್ಟ ಎಂಟು ಪ್ರಾಚೀನ ವಿಂಡ್‌ಮಿಲ್‌ಗಳ ಈ ಸ್ಥಳ 'ವಿಂಡ್ ಮಿಲ್ ವಿಲೇಜ್' ಎಂಬುವುದಾಗಿ ಖ್ಯಾತಿ ಪಡೆದಿದೆ. ಪಾದಚಾರಿ ರಸ್ತೆ ಮೂಲಕ ಅಥವಾ ಸೈಕಲ್‌ನಲ್ಲಿ ಸುತ್ತುತ್ತಾ ಈ ಪ್ರದೇಶವನ್ನು ವೀಕ್ಷಿಸಬಹುದು.

ಮಗನ ಮತ್ತು ನಾನು ಆ್ಯಮ್‌ಸ್ಟರ್‌ಡ್ಯಾಮ್ ಸೆಂಟ್ರಲ್ ರೈಲು ನಿಲ್ದಾಣದಿಂದ ರೈಲಿನಲ್ಲಿ ಇಪ್ಪತ್ತು ನಿಮಿಷ ಪ್ರಯಾಣಿಸಿ ಝಾನ್ಸ್ ಶಾನ್ಸ್ ನಿಲ್ದಾಣದಲ್ಲಿ ಇಳಿದುಕೊಂಡೆವು. ನಿಲ್ದಾಣದ ಹೊರಗಡೆ ಇರುವ ಬಾಡಿಗೆ ಸೈಕಲ್‌ಗಳ ಅಂಗಡಿಯಲ್ಲಿ ನಮ್ಮ ಅಧಿಕೃತ ಗುರುತಿನ ಪತ್ರ ನೀಡಿ ಸೈಕಲ್ ಬಾಡಿಗೆ ಪಡೆದು, ಮೂರು ಕಿ.ಮೀ. ಪ್ರಯಾಣಿಸಿ ಝಾನ್ ನದಿಯ ಸೇತುವೆ ದಾಟುತ್ತಲೇ ಈ ಗ್ರಾಮ ತೆರೆದುಕೊಂಡಿತು. ಅಚ್ಚುಕಟ್ಟಾದ ಪಾದಚಾರಿ ಹಾಗೂ ಸೈಕಲ್ ಮಾರ್ಗ, ಎಲ್ಲೆಡೆ ಮಾಹಿತಿ ಫಲಕ, ಆಹ್ಲಾದಕರ ಹವಾಮಾನದಿಂದಾಗಿ ಪ್ರಯಾಣ ಆಯಾಸವೆನಿಸಲಿಲ್ಲ.

ಸೂರ್ಯೋದಯದ ಸಂದರ್ಭದಲ್ಲಿ ವರ್ಣಚಿತ್ರದಂತೆ ಭಾಸವಾಗುವ ಝಾನ್ಸ್ ಶಾನ್ಸ್ ಗ್ರಾಮ

ಅಷ್ಟರಲ್ಲಾಗಲೇ ಧಫ್ ಧಫ್ ಸದ್ದು ಮಾಡುತ್ತಿದ್ದ ವಿಂಡ್‌ಮಿಲ್ ಒಂದು ನಮ್ಮನ್ನು ಸೆಳೆಯಿತು. ನಿಗದಿತ ಶುಲ್ಕ ನೀಡಿ 'ಡಿ ಕ್ಯಾಟ್' ಎಂಬ ಈ ಮಿಲ್ ಪ್ರವೇಶಿಸಿದೆವು. 1696ರಲ್ಲಿ ಕಾರ್ಯಾರಂಭಗೊಂಡ ಈ ಮಿಲ್, ಅಗ್ನಿ ಅವಘಡಕ್ಕೆ ಈಡಾಗಿದ್ದು 1782ರಲ್ಲಿ ಪುನರ್ ನಿರ್ಮಾಣವಾಗಿದೆಯೆಂದು ಅಲ್ಲಿರುವ ಮಾರ್ಗದರ್ಶಕ ತಿಳಿಸಿದ. ಈ ಮಿಲ್‌ನಲ್ಲಿ ಬಣ್ಣ ತಯಾರಿಕೆಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಪುಡಿ ಮಾಡಲಾಗುತ್ತಿದೆ. ನೆಲ ಮಹಡಿಯಲ್ಲಿರುವ ರುಬ್ಬುವ ಕಲ್ಲುಗಳ ಯಂತ್ರಗಳಲ್ಲಿ (ನಮ್ಮಲ್ಲಿರುವ ಹಿಟ್ಟಿನ ಗಿರಣಿ ಮಾದರಿ) ವಿವಿಧ ಕಚ್ಚಾ ವಸ್ತುಗಳನ್ನು ಹಾಕುತ್ತಾರೆ. ಅವುಗಳು ಗಾಳಿ ಯಂತ್ರದ ಶಕ್ತಿಯಿಂದ ಜೋಡಿಸಲ್ಪಟ್ಟ ಬೆಲ್ಟ್‌ನಿಂದ ತಿರುಗಿ, ಪುಡಿಯಾಗಿ ಸೀಮೆಸುಣ್ಣದ ಪೌಡರ್ ರೀತಿಯಲ್ಲಿ ಹೊರ ಬರುತ್ತದೆ. ಮಿಲ್ ನದಿ ತೀರದಲ್ಲಿರುವುದರಿಂದ ಹೀಗೆ ತಯಾರಿಸಲಾದ ಸರಕನ್ನು ದೋಣಿ ಮೂಲಕ ರವಾನಿಸುತ್ತಾರೆ.

ಮರದ ದಿಮ್ಮಿಯಿಂದ ತಯಾರಾಗುವ ಬೂಟುಗಳು

ಆಗ ಸಾವಿರಾರು ಈಗ ಆರು!

ಝಾನ್ ನದಿಯ ದಡದಲ್ಲಿ ವಾಸಿಸುತ್ತಿದ್ದ ಜನರು ವ್ಯಾಪಾರ ಹಾಗೂ ಮೀನುಗಾರಿಕೆಯಿಂದ ಶ್ರೀಮಂತರಾಗಿದ್ದರಂತೆ. ಅವರು ವಾಣಿಜ್ಯದ ವಿವಿಧೋದ್ದೇಶಗಳಿಗೆ ಇಂತಹ ವಿಂಡ್‌ಮಿಲ್‌ಗಳನ್ನು 1600ರಲ್ಲಿಯೇ ನಿರ್ಮಿಸಿದ್ದರು. ಮರ, ಬಾರ್ಲಿ ಹಾಗೂ ಅಕ್ಕಿಯಿಂದ ಕಾಗದ, ಎಣ್ಣೆ ಬೀಜಗಳಿಂದ ತೈಲವನ್ನಲ್ಲದೇ ತಂಬಾಕು ಹಾಗೂ ಸೆಣಬನ್ನು ಸಹ ಇಲ್ಲಿ ತಯಾರಿಸಲಾಗುತ್ತಿತ್ತಂತೆ. ಒಂದೊಮ್ಮೆ ಒಂದು ಸಾವಿರ ವಿಂಡ್‌ಮಿಲ್‌ಗಳು ಈ ನದಿ ತೀರದಲ್ಲಿದ್ದವಂತೆ. ಈಗ ನೋಡಲು ಹದಿಮೂರು ಮಿಲ್‌ಗಳಿದ್ದರೂ ಕಾರ್ಯನಿರ್ವಹಿಸುತ್ತಿರುವುದು ಕೇವಲ ಆರು! ಖಾಸಗಿ ಒಡೆತನದಲ್ಲಿರುವ ಇವುಗಳು ಸಾಸಿವೆ ಹಾಗೂ ಇತರ ಎಣ್ಣೆ ಕಾಳುಗಳಿಂದ ತೈಲ ಉತ್ಪಾದನೆ, ಬಣ್ಣ (ಡೈ) ತಯಾರಿಕೆಗೆ ಇಂದಿಗೂ ಬಳಕೆಯಾಗುತ್ತಿವೆ.

ಚಾಕೊಲೇಟ್ ನದಿ: ನದಿಯಲ್ಲಿ ಸುತ್ತಾಡಿ ವಿಂಡ್ ಮಿಲ್‌ಗಳ ವೀಕ್ಷಣೆ ಮತ್ತು ಮೀನುಗಾರಿಕೆ ನಡೆಯುವ ವೊಲೆಂಡಮ್ ಪ್ರದೇಶವನ್ನು ನೋಡಲು 'ವಿಂಡ್ ಮಿಲ್ ಕ್ರೂಸ್' ಪ್ರವಾಸವನ್ನು ನಿಯಮಿತವಾಗಿ ಆಯೋಜಿಸುತ್ತಾರೆ. ನಿಗದಿತ ಶುಲ್ಕ ಪಾವತಿಸಿ ಈ ಪ್ರವಾಸದ ಆನಂದ ಸವಿಯಬಹುದು. ನೂರಾರು ವರ್ಷಗಳಿಂದ ಗಾಳಿ, ಮಳೆ, ಬಿಸಿಲಿಗೆ ತಲೆಯೊಡ್ಡಿ ನಿಂತ ಮಿಲ್‌ಗಳನ್ನು ನದಿಯಲ್ಲಿ ವಿಹರಿಸುತ್ತಾ ನೋಡುವ ಅನುಭವವೇ ಬೇರೆ. ಝಾನ್ ಕೈಗಾರಿಕಾ ವಲಯ ಬೃಹತ್ ಪ್ರಮಾಣದ ಕೋಕೋ ಸಂಸ್ಕರಣೆಗೆ ವಿಶ್ವ ಪ್ರಸಿದ್ಧವಾಗಿದೆ. ಇದರಿಂದಾಗಿ ಝಾನ್ ನದಿಗೆ ಚಾಕೊಲೇಟ್ ನದಿ ಎಂಬ ಉಪನಾಮವಿದೆ.

ಝಾನ್ ಮ್ಯೂಸಿಯಂ: ವಿಂಡ್ ಮಿಲ್‌ಗಳ ಮತ್ತೊಂದು ಭಾಗದಲ್ಲಿ ಝಾನ್ ಮ್ಯೂಸಿಯಂ ಇದೆ. ಅಲ್ಲಿ 17ಮತ್ತು 18 ನೇ ಶತಮಾನದಲ್ಲಿದ್ದ ವಿಂಡ್ ಮಿಲ್‌ಗಳ ವಿವರ, ನದಿಯ ನೋಟದ ಪ್ರಾಚೀನ ಚಿತ್ರಕಲೆಗಳು, ಝಾನ್ ಇತಿಹಾಸ, ಇಲ್ಲಿಯ ಎರಡನೇ ಮಹಾಯುದ್ಧದ ಕಥೆ ಹೇಳುವ ಸ್ಮಾರಕಗಳು, ಸಾಕ್ಷ್ಯಚಿತ್ರ ಪ್ರದರ್ಶನ, ಕರಕುಶಲ ವಸ್ತುಗಳು, ಡಚ್ ಗಡಿಯಾರಗಳ ಸಂಗ್ರಹ ಮತ್ತು ಈ ಪ್ರದೇಶದ ಆಧುನಿಕ ಕೈಗಾರಿಕಾ ಬೆಳವಣಿಗೆಯನ್ನು ಸಚಿತ್ರವಾಗಿ ತೋರಿಸಲಾಗಿದೆ. ಯುರೋಪಿನ ಜನಜೀವನದಲ್ಲಿ ಚೀಸ್ ತಯಾರಿಕೆ ಹಾಗೂ ಬಳಕೆ ಹಾಸುಹೊಕ್ಕಾಗಿದೆ. ಡಚ್ ಚೀಸ್ ತಯಾರಿಕೆಯ ಪ್ರಾತ್ಯಕ್ಷಿಕೆ ಮಳಿಗೆ ಇಲ್ಲಿದ್ದು, ಅನೇಕ ಬಗೆಯ ಚೀಸ್ ಪ್ರದರ್ಶನ ಇಲ್ಲಿದೆ.

ನಮಗೆ ಬಹಳ ಕುತೂಹಲಕಾರಿಯಾಗಿ ಕಂಡಿದ್ದು ಇಲ್ಲಿ ತಯಾರಾಗುವ ಮರದ ದಿಮ್ಮಿಯಿಂದ ತಯಾರಾದ ಬೂಟುಗಳ(ಕ್ಲಾಗ್) ಮಳಿಗೆ. ಜೌಗು ಪ್ರದೇಶದಲ್ಲಿ ಕಾಲುಗಳಿಗೆ ಶೀತದ ಪರಿಣಾಮ ತಟ್ಟಬಾರದೆಂದು ಇಲ್ಲಿನ ಗ್ರಾಮೀಣ ಜನರು ಇವುಗಳನ್ನು ಬಳಸುತ್ತಿದ್ದರಂತೆ. ವಿಶಿಷ್ಟವಾದ ವಿಲೋ ಮರದ ಕಟ್ಟಿಗೆಯಿಂದ ಇವುಗಳನ್ನು ತಯಾರಿಸುತ್ತಾರೆ. ಈಗ ಅವುಗಳು ಸ್ಮರಣಿಕೆಗಳಾಗಿದ್ದರೂ, ಸ್ಕೇಟಿಂಗ್ ಮಾಡಲು ಇವುಗಳನ್ನು ಉಪಯೋಗಿಸುತ್ತಾರೆ. ಪ್ರವಾಸಿಗರ ಗಮನ ಸೆಳೆಯುವ ಈ ಮಳಿಗೆಯಲ್ಲಿ ಪ್ರವಾಸಿಗರ ಖರೀದಿ ಜೋರಾಗಿತ್ತು.

ನೆದರ್ಲೆಂಡ್ಸ್‌ನ ದೇಶವನ್ನು ಗುರುತಿಸುವುದೇ ಈ ಗಾಳಿ ಯಂತ್ರಗಳಿಂದ. ಡಚ್ ಸಂಸ್ಕೃತಿಯೊಂದಿಗೆ ಅವು ಹಾಸು ಹೊಕ್ಕಾಗಿ ಬೆಸೆದುಕೊಂಡಿವೆ. ಇವುಗಳು ಈ ದೇಶದ ಪುನರುಜ್ಜೀವನಕ್ಕೆ ಬಹು ಮಹತ್ವದ ಕೊಡುಗೆ ನೀಡಿವೆ. ಯುರೋಪಿನ ಮೊದಲ ವಿಂಡ್‌ಮಿಲ್ 1040ರಲ್ಲಿ ಬೆಲ್ಜಿಯಂನಲ್ಲಿ ನಿರ್ಮಿಸಲಾಯಿತು. ನೆದರ್ಲೆಂಡ್ಸ್‌ನ ಸಮುದ್ರ ಮಟ್ಟಕ್ಕಿಂತ ಕೆಳಗಿದ್ದುದರಿಂದ ಈ ದೇಶದ ಹೆಚ್ಚಿನ ಭಾಗವು ನೀರಿನ ಅಡಿಯಲ್ಲಿತ್ತು. ತಗ್ಗು ಪ್ರದೇಶದಿಂದ ನೀರನ್ನು ಪಂಪ್ ಮಾಡಿ ಆಚೆಗಿನ ತೊರೆಗಳಿಗೆ ಸಾಗಿಸಿ, ಅಂತರ್ಜಲ ಮಟ್ಟ ಕಾಪಾಡಿಕೊಳ್ಳುವುದರೊಂದಿಗೆ, ಇಲ್ಲಿದ್ದ ಭೂಮಿಯನ್ನು ಕೃಷಿಗೆ ಹಾಗೂ ವಾಸ ಯೋಗ್ಯವಾಗಿಸುವಲ್ಲಿ ಇವುಗಳು ಪಾತ್ರ ಮಹತ್ವದ್ದು. ಡಚ್ಚರು ವಿಂಡ್‌ಮಿಲ್‌ಗಳನ್ನು ಕಂಡು ಹಿಡಿದಿಲ್ಲವಾದರೂ, ಅವುಗಳ ಸಾಮರ್ಥ್ಯವನ್ನು ಗುರುತಿಸಿ, ತಂತ್ರಜ್ಞಾನವನ್ನು ಗಮನಾರ್ಹವಾಗಿ ಸುಧಾರಿಸಿದರು. ವಿಂಡ್‌ಮಿಲ್ ಚಾಲಿತ ಸಾ ಮಿಲ್ಲುಗಳ(ಮರ ಕೊರೆಯುವ ಗರಗಸದ ಮಿಲ್)ವ್ಯಾಪಕ ಬಳಕೆಯಿಂದಾಗಿ 17ನೇ ಶತಮಾನದಲ್ಲಿ ಡಚ್ಚರು ಮರದ ಹಡಗು ನಿರ್ಮಾಣದಲ್ಲಿ ಪ್ರಾಬಲ್ಯ ಸಾಧಿಸಿ, ಸಮುದ್ರಯಾನದಲ್ಲೂ ವಿಶ್ವಖ್ಯಾತಿ ಗಳಿಸುವುದಲ್ಲದೇ ದೇಶದ ಆರ್ಥಿಕೋನ್ನತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ವರ್ಷಕ್ಕೊಮ್ಮೆ ಇಲ್ಲಿ 'ರಾಷ್ಟ್ರೀಯ ಮಿಲ್ ಡೇ' ಆಚರಿಸಲಾಗುತ್ತದೆ. ಮೇ ತಿಂಗಳಿನ ಎರಡನೇ ಶನಿವಾರದಂದು ಆಚರಿಸಲಾಗುವ ಈ ದಿನದಂದು ಎಲ್ಲ ಸಂದರ್ಶಕರಿಗೆ ವಿಂಡ್‌ಮಿಲ್‌ಗಳ ಬಾಗಿಲು ತೆಗೆದು ಅವುಗಳನ್ನು ಪರಿಚಯಿಸಲಾಗುತ್ತದೆ. ❖

ಮುನ್ನೋಟ 21-08-2022 ರಿಂದ 27-08-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಹೈನುಗಾರಿಕೆ ಮಾಡುವವರಿಗೆ ಉತ್ಪತ್ತಿ ಜಾಸ್ತಿಯಾಗುತ್ತದೆ. ಪಶು ಆಹಾರಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಮಾತಿನಲ್ಲಿ ಮೃದುತ್ವವಿದ್ದರೂ ಅದರ ಕಠಿಣತೆ ಜನರಿಗೆ ಅರ್ಥವಾಗಿ ದ್ವಂದ್ವಾರ್ಥಕ್ಕೆ ಕಾರಣವಾಗುತ್ತದೆ. ಆಭರಣ ತಯಾರಿಸುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಅವಿವಾಹಿತರಿಗೆ ಕಂಕಣ ಬಲದ ಯೋಗವಿದೆ. ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕಾರ್ಯನಿರ್ವಹಿಸುವ ಯೋಗವಿದೆ. ಹಣದ ಒಳಹರಿವು ನಿಮ್ಮ ಅವಶ್ಯಕತೆಯನ್ನು ಪೂರೈಸುತ್ತದೆ. ದಿನಸಿ ವ್ಯಾಪಾರದಲ್ಲಿ ಪ್ರಗತಿಯನ್ನು ಕಾಣಬಹುದು. ವೈಯಕ್ತಿಕ ವಿಷಯಗಳ ಬಗ್ಗೆ ಹೆಚ್ಚು ನಿಗಾವಹಿಸುವುದು ಬಹಳ ಉತ್ತಮ. ನಿಮ್ಮ ಹಿರಿಯರ ಕನಸಿನ ಯೋಜನೆಯೊಂದನ್ನು ಪ್ರಾರಂಭ ಮಾಡಲು ಆಲೋಚನೆಯ ಮಾಡುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮನೆಯವರೊಂದಿಗೆ ತೀರ್ಥಯಾತ್ರೆ ಹೋಗಲು ಚಿಂತನೆ ನಡೆಸುವಿರಿ. ರಾಜಕಾರಣಿಗಳಿಗೆ ಹೆಚ್ಚು ಸಮಯ ತಮ್ಮ ಕ್ಷೇತ್ರದಲ್ಲಿ ಕಳೆಯಬೇಕಾದ ಅನಿವಾರ್ಯವಿರುತ್ತದೆ. ಹಣದ ಒಳಹರಿವು ನಿರೀಕ್ಷೆಯಷ್ಟು ಇರುತ್ತದೆ. ಒಡಹುಟ್ಟಿದವರಿಂದ ನಿಮಗೆ ಸಹಕಾರ ದೊರೆಯುತ್ತದೆ. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಅದರ ವಿವರ ತಿಳಿದು ಮಾಡಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಈ ವಾರ ಸ್ವಲ್ಪ ಆನಂದದಾಯಕವಾಗಿರುತ್ತದೆ. ಹಣದ ಒಳಹರಿವು ವೆಚ್ಚಕ್ಕೆ ಸರಿ ಹೋಗುವಷ್ಟು ಇದ್ದೇ ಇರುತ್ತದೆ. ಹೈನುಗಾರಿಕೆಯವರಿಗೆ ಹಾಲಿನ ಇಳುವರಿಯಲ್ಲಿ ಸ್ವಲ್ಪ ಕಡಿಮೆಯಾಗಬಹುದು. ಕೆಲವರಿಗೆ ಉದ್ಯೋಗದಲ್ಲಿ ಹೆಚ್ಚು ಓಡಾಟವಿರುತ್ತದೆ. ಆರ್ಥಿಕ ಸ್ಥಿರತೆಯ ಬಗ್ಗೆ ಗಮನ ಕೊಡಿರಿ. ದೀರ್ಘಕಾಲೀನ ಹೂಡಿಕೆಯ ಬಗ್ಗೆ ತಜ್ಞರೊಡನೆ ಅಭಿಪ್ರಾಯ ಪಡೆದು ಮುನ್ನಡೆಯುವುದು ಉತ್ತಮ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮೇಧಾವಿ ಜನರ ಸಂಪರ್ಕದಿಂದ ಕೆಲಸ ಕಾರ್ಯಗಳು ಸುಲಭವಾಗುತ್ತದೆ. ಯಂತ್ರಗಳ ಬಿಡಿ ಭಾಗಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ವ್ಯವಹಾರ ಹೆಚ್ಚುತ್ತದೆ. ಉದ್ಯೋಗದಲ್ಲಿರುವ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಸಾಕಷ್ಟು ಪ್ರಯತ್ನ ಪಡುವಿರಿ. ವ್ಯಾಪಾರ-ವ್ಯವಹಾರದ ಆದಾಯದಲ್ಲಿ ಸ್ವಲ್ಪಮಟ್ಟಿನ ಏರಿಕೆಯನ್ನು ಕಾಣಬಹುದು. ಕಟ್ಟಡ ನಿರ್ಮಾಣಕಾರರಿಗೆ ಹೆಚ್ಚಿನ ಸಂಪಾದನೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಏನನ್ನಾದರೂ ಸಾಧಿಸಬೇಕೆನ್ನುವ ನಿಮಗೆ ಆತ್ಮಸ್ಥೈರ್ಯದ ಕೊರತೆ ಕಾಣುತ್ತದೆ. ಹಣದ ಒಳ ಹರಿವು ಮಂದಗತಿಯಲ್ಲಿ ಇರುತ್ತದೆ. ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ರಾಜಕೀಯ ವ್ಯಕ್ತಿಗಳ ಸಂಪರ್ಕ ದೊರೆಯುವ ಸಾಧ್ಯತೆ ಇದೆ. ನೀವು ರೂಪಿಸಿದ ಷಡ್ಯಂತ್ರವೊಂದು ನಿಮಗೆ ತಿರುಗುಬಾಣವಾಗುವ ಸಾಧ್ಯತೆಗಳಿವೆ. ಗರ್ಭಿಣಿಯರು ಹೆಚ್ಚು ಎಚ್ಚರದಿಂದಿರುವುದು ಒಳ್ಳೆಯದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವೃತ್ತಿಯಲ್ಲಿ ವರ್ಗಾವಣೆ ಮಾಡಿಸಿಕೊಳ್ಳುವ ವಿಚಾರದಲ್ಲಿ ಹಿನ್ನಡೆಯಾಗುತ್ತದೆ. ಕೇಟರಿಂಗ್ ಸೇವೆಗಳನ್ನು ಮಾಡುವವರ ವ್ಯವಹಾರ ವಿಸ್ತರಣೆಯಾಗಿ ಆದಾಯ ಹೆಚ್ಚುತ್ತದೆ. ಷೇರು ವ್ಯವಹಾರಗಳಲ್ಲಿ ಹಣ ತೊಡಗಿಸುವ ಮುನ್ನ ಆಲೋಚನೆ ಮಾಡಿರಿ. ಜಮೀನು ಮಾರಾಟ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಕಾಣಬಹುದು. ಸಂಸಾರದಲ್ಲಿ ಹೆಚ್ಚಿನ ಸಂಘರ್ಷಗಳನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಕೆಲವೊಂದು ವೈಯಕ್ತಿಕ ಆಸೆ-ಆಕಾಂಕ್ಷೆಗಳು ಪೂರ್ಣಗೊಳ್ಳಬಹುದು. ನಿವೃತ್ತ ಉಪಾಧ್ಯಾಯರಿಗೆ ಮನೆಯ ಪಾಠಮಾಡುವ ಅವಕಾಶಗಳು ಒದಗಿ ಬರುತ್ತವೆ. ಹಾಲಿನ ಪದಾರ್ಥಗಳ ಉತ್ಪಾದಕರಿಗೆ ಬೇಡಿಕೆ ಹೆಚ್ಚುತ್ತದೆ. ಉನ್ನತ ಹುದ್ದೆಯಿಂದ ಮನಸ್ಸಿಗೆ ಖುಷಿಗೆ ಇದ್ದರೂ ಕೆಲಸದ ಒತ್ತಡ ಬೇಸರವೆನಿಸುತ್ತದೆ. ಗುತ್ತಿಗೆ ಕೆಲಸಗಾರರಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಯೋಗವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳಷ್ಟು ತಾಳ್ಮೆಯಿಂದ ಕೆಲಸಗಳನ್ನು ನಿರ್ವಹಿಸಬೇಕಾದ ಅನಿವಾರ್ಯವಿದೆ. ಕಾನೂನು ಹೋರಾಟದಲ್ಲಿ ಯಶಸ್ಸಿನತ್ತ ವಾಲುವಿರಿ. ಆಪ್ತ ಸ್ನೇಹಿತರ ಸಹಾಯದಿಂದ ಗೃಹ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿಕೊಳ್ಳುವಿರಿ. ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದಲ್ಲಿ ಉದ್ಯೋಗದ ಕೆಲವು ಸಮಸ್ಯೆಗಳು ಪರಿಹಾರವಾಗುವುದು. ದಂತ ವೈದ್ಯರಿಗೆ ಹೆಚ್ಚು ಸಂಪಾದನೆಯಾಗುವ ಸಂಭವವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕನಸುಗಳು ಕೈಗೂಡುವ ದಿನ ಹತ್ತಿರ ಇದೆ. ನಿಮ್ಮ ಪ್ರಾಮಾಣಿಕತೆಗೆ ಅತಿಯಾದ ಗೌರವ ದೊರೆತು ಸಂಭ್ರಮಿಸುವಿರಿ. ಗೃಹೋಪಕರಣ ಮತ್ತು ಪೀಠೋಪಕರಣಗಳ ಮಾರಾಟಗಾರರಿಗೆ ವ್ಯಾಪಾರ ಹೆಚ್ಚಾಗಿ ಲಾಭ ಹೆಚ್ಚುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇದ್ದರೂ ಹಣದ ನಿರ್ವಹಣೆಯನ್ನು ಉತ್ತಮವಾಗಿ ಮಾಡುವಿರಿ. ಉದ್ಯೋಗದಲ್ಲಿ ಬದಲಾವಣೆಗೆ ಪೂರಕ ಸನ್ನಿವೇಶ ಕಂಡುಬರುತ್ತಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯಾವುದೇ ವಾದ-ವಿವಾದ ಆದರೂ ಕಾರ್ಯಸಾಧನೆಗೆ ಅಡ್ಡಿಯಾಗುವುದಿಲ್ಲ. ಸೃಜನಶೀಲ ಬರಹಗಾರರು ತಮ್ಮ ಬರವಣಿಗೆಯಿಂದ ಖ್ಯಾತಿ ಹಾಗೂ ಧನ ಸಂಪಾದನೆ ಮಾಡಿಕೊಳ್ಳುವರು. ಸ್ವಲ್ಪ ಧಾರ್ಮಿಕ ಶ್ರದ್ಧೆ ಹಿರಿಯರಲ್ಲಿ ಹೆಚ್ಚಾಗುವುದು. ಅದಕ್ಕೆ ತಕ್ಕಂತೆ ಸಮಾಜದ ಸಹಕಾರ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸಹೋದ್ಯೋಗಿಯೊಬ್ಬರು ನಿಮ್ಮ ಕೆಲಸಕಾರ್ಯಗಳಿಗೆ ಹೆಚ್ಚಿನ ಸಹಕಾರ ಕೊಡುವರು. ಶ್ರಮಜೀವಿಗಳಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಖಂಡಿತವಾಗಿ ದೊರೆತು ತೃಪ್ತಿಪಡುವರು. ಕೆಲವರಿಗೆ ಕಚೇರಿ ಕೆಲಸದ ಮೇಲೆ ಆಕಸ್ಮಿಕ ಪ್ರಯಾಣ ಬರಬಹುದು. ಕಾನೂನು ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ ಇರುತ್ತದೆ. ನ್ಯಾಯವಾದಿಗಳಿಗೆ ಹೆಚ್ಚಿನ ದಾವೆಗಳು ದೊರೆತು ಸಂಪಾದನೆ ಹೆಚ್ಚುತ್ತದೆ.

ಭಾರತೋದಯ ಚರಿತೆ

8ನೇ ಪುಟದಿಂದ...

ಒಂದು ರಾಷ್ಟ್ರವೆಂದು ಭಗವಂತ ಹಾಗೂ ಪ್ರಕೃತಿ ನಿಯಮಿಸಿದ್ದ ದೇಶ ಇಂದು ಇಬ್ಭಾಗವಾಗಿದೆ. ಪ್ರೀತಿಪಾತ್ರರು ಹಾಗೂ ಸ್ವಲ್ಪಕಾಲದ ಒಡನಾಟವಿದ್ದ ಅಪರಿಚಿತರಿಂದ ದೂರವಾಗುವುದು, ನಿಜವಾಗಿಯೂ ನೋವಿನ ಸಂಗತಿಯೇ. ಇಂಥ ಅಗಲುವಿಕೆಯಿಂದಾಗುವ ದುಃಖವನ್ನು ಒಪ್ಪಿಕೊಳ್ಳದಿದ್ದರೆ ನನ್ನನ್ನೇ ನಾನು ವಂಚನೆ ಮಾಡಿಕೊಂಡಂತೆ. ಇಂದಿನವರೆಗೆ ನಮ್ಮ ದೇಶದ ಭಾಗವಾಗಿದ್ದ ಪಾಕಿಸ್ತಾನ ಹಾಗೂ ನಮ್ಮ ಒಡನಾಡಿಗಳಾಗಿದ್ದ ಪಾಕಿಸ್ತಾನದ ಜನತೆಯ ಸರ್ಕಾರವನ್ನು, ಅದರ ಪರಿಶ್ರಮದ ಯಶಸ್ಸಿಗಾಗಿ ಅಭಿನಂದಿಸುತ್ತೇನೆ. . .

- ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ, ಎರಡು ನಿಮಿಷ ಮೌನ

– ಸದಸ್ಯರಿಂದ ಪ್ರತಿಜ್ಞೆಯ ಪ್ರಸ್ತಾವ –

ಸಭಾಧ್ಯಕ್ಷರು: ಪಂಡಿತ್ ಜವಾಹರಲಾಲ್ ನೆಹರೂ ಈಗ ಪ್ರಸ್ತಾವ ಮಂಡಿಸುತ್ತಾರೆ

ನೆಹರೂ: ನಾವು ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಪಡೆದಿದ್ದೇವೆ. ಕೆಲವೇ ಕ್ಷಣಗಳ ತರುವಾಯ ಈ ಸಭೆ ಸಂಪೂರ್ಣ ಮುಕ್ತ ಹಾಗೂ ಸ್ವತಂತ್ರ ನಿಕಾಯವೆಂಬ ಸ್ಥಾನಮಾನವನ್ನು ಧಾರಣ ಮಾಡುತ್ತದೆ ಹಾಗೂ ಅದು ಸ್ವತಂತ್ರದೇಶವನ್ನು ಪ್ರತಿನಿಧಿಸುತ್ತದೆ.

ನಾವು ಒಂದು ಹಂತ ಪೂರೈಸಿದ್ದೇವೆ. ಆದ್ದರಿಂದಲೇ ಇಂದು ಸಡಗರದ ಆಚರಣೆ ಆರಂಭವಾಗಿದೆ. ಆದರೆ ಈ ಸಡಗರ, ದೇಶದ ತುಂಬ ಹರಡಿಲ್ಲವೆಂಬುದು ನಮಗೆ ಗೊತ್ತು. ನಮ್ಮ ಮನಸ್ಸು ದುಃಖಪೂರಿತವಾಗಿದೆ. ದೆಹಲಿ ಸಮೀಪದಲ್ಲೇ ಇರುವ ನಗರಗಳು ಹೊತ್ತಿ ಉರಿಯುತ್ತಿವೆ. ಅದರ ಝಳ ಇಲ್ಲಿ ನಮಗೂ ತಾಕುತ್ತಿದೆ. ಹೀಗಾಗಿ ನಮ್ಮ ಸಂತೋಷ ಅಪೂರ್ಣವೇ...



ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ಅದು ಸಿಕ್ಕ ರೀತಿಯ ಜನರಿಗೆ ಸಂತೋಷ ತಂದಿಲ್ಲ. ಅವರ ಮುಖದಲ್ಲಿ ನಗು ಉಕ್ಕಿಸಿಲ್ಲ. ಕೆಲವರು ನಮ್ಮ ಮೇಲೆ ಹೊರಿಸಿದ ಪ್ರತ್ಯೇಕತಾ ಮನೋಭಾವಕ್ಕೆ ನಾವು ಬಲಿಯಾದೆವಲ್ಲವೇ? ಈಗ ದೇಶ ಇಬ್ಭಾಗವಾಗಿದೆ. ಮಾತಿನ ಚಕಮಕಿಯಲ್ಲಿ ಮುಳುಗದಿರುವುದು ನಮ್ಮ ಕರ್ತವ್ಯ. ಅದರಿಂದ ಏನೂ ಪ್ರಯೋಜನವಿಲ್ಲ.

ಅಂತೂ ಭಾರತ ಈಗ ಸ್ವತಂತ್ರ ದೇಶ. ಅದು ತುಂಬ ಮುದ ನೀಡುವಂತದು. ಬಹಳ ವರ್ಷಗಳ ಹಿಂದೆ ನಾವು ಅದೃಷ್ಟಕ್ಕೆ ಸಮಯ ನಿಗದಿಮಾಡಿದ್ದೆವು. ನಮ್ಮ ಪ್ರತಿಜ್ಞೆಯನ್ನು ತೀರಿಸುವ ಕಾಲ ಈಗ ಬಂದಿದೆ–ಈ ಮಧ್ಯರಾತ್ರಿಯ ಸಮಯದಲ್ಲಿ ಜಗತ್ತೆಲ್ಲ ಮಲಗಿರುವಾಗ ಭಾರತ ಜೀವತಳೆದು ಸ್ವಾತಂತ್ರ್ಯ ಪಡೆದು ಉಸಿರಾಡುತ್ತಿದೆ. ಇದು, ನಾವು ಹಳೆಯದರಿಂದ ಹೊಸದರತ್ತ ಹೆಜ್ಜೆ ಹಾಕುವ, ಹಳೆಯ ಯುಗ ಅಳಿದು, ದೀರ್ಘಕಾಲದಿಂದ ಹತ್ತಿಕ್ಕಲ್ಪಟ್ಟ ನಾಡಿನ ಆತ್ಮದಲ್ಲಿ ಮಾತು ಮೂಡುವ ಗಳಿಗೆ. ಈ ಪವಿತ್ರ ಗಳಿಗೆಯಲ್ಲಿ ನಾವು ಈ ದೇಶದ ಹಾಗೂ ಇಲ್ಲಿನ ಜನತೆಯ ಸೇವೆಗೆ ಹಾಗೂ ಇಡೀ ಮನುಕುಲಕ್ಕಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವ ಪ್ರತಿಜ್ಞೆ ಕೈಗೊಳ್ಳಬೇಕು. ಸ್ವಾತಂತ್ರ್ಯ ಹಾಗೂ ಅಧಿಕಾರದೊಂದಿಗೆ ಬರುವಂತದ್ದು ಜವಾಬ್ದಾರಿ. ಭಾರತದ ಸಾರ್ವಭೌಮ ಪ್ರಜೆಗಳನ್ನು ಪ್ರತಿನಿಧಿಸುವ ಸಾರ್ವಭೌಮ ನಿಕಾಯವಾದ ಈ ಸಭೆಯ ಮೇಲೆ ಆ ಜವಾಬ್ದಾರಿ ಇದೆ. ಭಾರತದ ಕಾಲಾತೀತ ಚೈತನ್ಯಕ್ಕೆ ಯೋಗ್ಯವೆನಿಸುವ ರೀತಿಯಲ್ಲಿ ನಡೆದುಕೊಳ್ಳಬೇಕಿದೆ. ಹೀಗಾಗಿ ಈ ಪ್ರತಿಜ್ಞೆ ಕೈಗೊಳ್ಳೋಣ.

ಸಭಾಧ್ಯಕ್ಷರು: ಗಡಿಯಾರದಲ್ಲಿ ರಾತ್ರಿ 12 ಗಂಟೆಗೆ ಕೇವಲ ಅರ್ಧ ನಿಮಿಷ ಬಾಕಿ ಇದೆ.

12 ಗಂಟೆಯಾದೊಡನೆ ಅಧ್ಯಕ್ಷರು ಮತ್ತು ಸದಸ್ಯರು ಈ ಕೆಳಗಿನಂತೆ ಪ್ರತಿಜ್ಞೆ ಕೈಗೊಂಡರು.

'ಭಾರತದ ಜನತೆ ಕಷ್ಟ ಹಾಗೂ ತ್ಯಾಗದ ಮೂಲಕ ಸ್ವಾತಂತ್ರ್ಯ ಗಳಿಸಿದ್ದು ಈಗ ಸಂವಿಧಾನ ರಚನಾ ಸಭೆಯ ಸದಸ್ಯನಾದ.... ಎಂಬ ಹೆಸರಿನವನಾದ ನಾನು ಈ ಪುರಾತನ ನಾಡು ಜಗತ್ತಿನಲ್ಲಿ ಹೆಚ್ಚಿನ ಸ್ಥಾನಗಳಿಸಲು, ಜಗತ್ತಿನ ಶಾಂತಿ ಸಂವರ್ಧನೆಗೆ ಹಾಗೂ ಮನುಕುಲದ ಒಳಿತಿಗೆ ಮನಃಪೂರ್ವಕವಾಗಿ ಸಾಧ್ಯವಾಗುವಂತೆ ಭಾರತ ಮತ್ತು ಭಾರತೀಯರ ಸೇವೆಗಾಗಿ ನನ್ನನ್ನು ಸಮರ್ಪಿಸಿಕೊಳ್ಳುತ್ತೇನೆ'

–ಸಂವಿಧಾನ ರಚನಾ ಸಭೆಗೆ ಅಧಿಕಾರ ಗ್ರಹಣವಾದ ಬಗ್ಗೆ ಹಾಗೂ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತದ ಗವರ್ನರ್ ಜನರಲ್ ಆಗಿ ನೇಮಕ ಮಾಡಲು ಸಭೆ ಒಪ್ಪಿತು–

ಸಭಾಧ್ಯಕ್ಷರು: ವೈಸರಾಯ್ ಅವರಿಗೆ ಈ ಮುಂದಿನಂತೆ ತಿಳಿಸಲು ಸೂಚಿಸಿವೆ.

1. ಭಾರತದ ಸಂವಿಧಾನ ರಚನಾಸಭೆಯು ಭಾರತದ ಆಡಳಿತದ ಅಧಿಕಾರವನ್ನು ವಹಿಸಿಕೊಂಡಿದೆ.
2. 1947ರ ಆಗಸ್ಟ್ 15ರಿಂದ ಲಾರ್ಡ್ ಮೌಂಟ್ ಬ್ಯಾಟನ್ ಭಾರತದ ಗವರ್ನರ್ ಜನರಲ್ ಆಗಿರಬೇಕೆಂಬ ಶಿಫಾರಸನ್ನು ಸಂವಿಧಾನ ರಚನಾ ಸಭೆಯು ಒಪ್ಪಿಕೊಂಡಿದೆ.

ರಾಷ್ಟ್ರಧ್ವಜ ಸಮರ್ಪಣೆ

ಸಭಾಧ್ಯಕ್ಷರು: ಹಂಸಾ ಮೆಹ್ತಾ ಅವರು ರಾಷ್ಟ್ರಧ್ವಜ ಸಮರ್ಪಿಸುತ್ತಾರೆ.

ಹಂಸಾ ಮೆಹ್ತಾ: ಸರೋಜಿನಿ ನಾಯ್ಡು ಅವರ ಅನುಪಸ್ಥಿತಿಯಲ್ಲಿ ಭಾರತದ ಮಹಿಳೆಯರ ಪರವಾಗಿ ಈ ಧ್ವಜವನ್ನು ರಾಷ್ಟ್ರಕ್ಕೆ ಸಮರ್ಪಿಸುತ್ತೇನೆ. ಧ್ವಜವು ಮಹಾನ್ ಭಾರತದ ಸಂಕೇತವಾಗಿರಲಿ ಮತ್ತು ಯಾವಾಗಲೂ ಎತ್ತರದಲ್ಲಿ ಹಾರುತ್ತಿದ್ದು, ಇಂದು ಜಗತ್ತನ್ನು ಬೆದರಿಸುತ್ತಿರುವ ಅಂಧಕಾರದ ನಡುವಣ ಬೆಳಕಾಗಲಿ, ಅದರ ಘೋಷಣೆಯಲ್ಲಿ ಬಾಳುವವರಿಗೆ ಸಂತೋಷ ತರಲಿ..

(ಧ್ವಜ ಸಮರ್ಪಣಾ ಸಮಿತಿಯಲ್ಲಿ 74 ಜನ ಮಹಿಳೆಯರಿದ್ದರು)

ರಾಷ್ಟ್ರಗೀತೆಯ ಗಾಯನ

ಸುಚೇತಾ ಕೃಪಲಾನಿಯವರು ಸಾರೇಂ ಜಹಾಂ ಸೇ ಅಚ್ಛಾ ಹಾಗೂ ಜನಗಣಮನ ಅಧಿನಾಯಕ ಜಯಹೇ ಗೀತೆಯ ಮೊದಲ ನುಡಿಗಳನ್ನು ಹಾಡಿದರು.

ಸಭಾಧ್ಯಕ್ಷರು: ಆಗಸ್ಟ್ 15ರ ಬೆಳಿಗ್ಗೆ 10ಗಂಟೆಯವರೆಗೆ ಸದನವನ್ನು ಮುಂದೂಡಿದ್ದೇನೆ.

–ಎರಡನೇ ಚರಣ–

ಶುಕ್ರವಾರ, 15 ನೇ ಆಗಸ್ಟ್ 1947

ಸಂವಿಧಾನ ರಚನಾ ಸಭೆ, ನವದೆಹಲಿಯ ಸಂವಿಧಾನ ಸಭಾಂಗಣ ಬೆಳಿಗ್ಗೆ 10ಗಂಟೆಗೆ ಸಮಾವೇಶ ಗೊಂಡಿತು. ಸಭಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅವರು ಗವರ್ನರ್ ಜನರಲ್ ಮೌಂಟ್ ಬ್ಯಾಟನ್ ಮತ್ತು ಲೇಡಿ ಮೌಂಟ್ ಬ್ಯಾಟನ್ ಜತೆ ಸಭಾಂಗಣಕ್ಕೆ ಬಂದರು.

ವಿವಿಧ ದೇಶಗಳಿಂದ ಬಂದಿದ್ದ ಸಂದೇಶಗಳನ್ನು ಸಭಾಧ್ಯಕ್ಷರು ಓದಿದರು.

ಗವರ್ನರ್ ಜನರಲ್ ಭಾಷಣ

ಆರು ತಿಂಗಳ ಹಿಂದೆಷ್ಟೇ ಆಟ್ಲೆಯವರು ನನ್ನನ್ನು ಕೊನೆಯ ವೈಸರಾಯ್ ಆಗಿ ಮಾಡಿದ ನೇಮಕಾತಿಯನ್ನು ಒಪ್ಪಿಕೊಳ್ಳಲು ಆಮಂತ್ರಿಸಿದರು. ಬ್ರಿಟಿಷ್ ಚಕ್ರವರ್ತಿಯವರ ಸರ್ಕಾರ 1948ರ ಜೂನ್ ವೇಳೆಗೆ ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡಲು ನಿರ್ಧರಿಸಿರುವುದರಿಂದ ಇದು ಸುಲಭದ ಕೆಲಸವಲ್ಲ ಎಂದೂ ತಿಳಿಸಿದರು. ಈ ದಿನಾಂಕ ಬಹಳ ಬೇಗ ಎಂದು ಕೆಲವರಿಗೆ ಅನಿಸಿದ್ದುಂಟು. ಏಕೆಂದರೆ 15 ತಿಂಗಳ ಅಲ್ಪಾವಧಿಯಲ್ಲಿ ಇಷ್ಟು ದೊಡ್ಡ ಕಾರ್ಯಾಚರಣೆ ಹೇಗೆ ಪೂರ್ಣಗೊಳ್ಳುತ್ತದೆ ಎಂಬುದು ಅವರ ಭಾವನೆಯಾಗಿತ್ತು. ನಾನು ಇಂಗ್ಲೆಂಡಿನಿಂದ ಹೊರಟಾಗ ಭಾರತದಲ್ಲಿ ಕೋಮು ಆತಂಕ ಹಾಗೂ ಗಲಭೆ ಕಾವೇರತೊಡಗಿದ್ದುದರ ಪರಿಕಲ್ಪನೆಯೂ ನನಗಿರಲಿಲ್ಲ. ಇಲ್ಲಿ ಬಂದ ಒಂದು ವಾರದ ಬಳಿಕ, ಈ ದಳ್ಳುರಿ ಇಡೀ ದೇಶದ ತುಂಬ ಹರಡಬಹುದಾದ ಅಪಾಯ ಇರುವುದರಿಂದ ಜೂನ್‌ಗೆ ಬದಲು, ಅದಕ್ಕಿಂತ ಮೊದಲಿನ ದಿನಾಂಕ ನಿಗದಿ ಪಡಿಸಬೇಕೆಂಬ ನಿರ್ಧಾರ ಅಗತ್ಯ ಎಂದು ತೋರಿತು.

ಕೂಡಲೇ ಸರ್ವಪಕ್ಷಗಳ ನಾಯಕರೊಂದಿಗೆ ಚರ್ಚೆ ಆರಂಭಿಸಿದೆ. ಜೂನ್ 3 ನಿಗದಿತ ದಿನಾಂಕವೆಂದು ನಿರ್ಧರಿಸಲಾಯಿತು. ಈ ಯೋಜನೆಗೆ ಒಪ್ಪಿಗೆ ದೊರೆತ ಸಭೆಯಲ್ಲೇ ನಾನು ವಿಭಜನೆಯ ಪರಿಣಾಮಗಳ ಚರ್ಚೆಯನ್ನು ನಾಯಕರ ಮುಂದೆ ಮಂಡಿಸಿದೆ. ಎರಡೂವರೆ ತಿಂಗಳಿನ ಅಲ್ಪಾವಧಿಯಲ್ಲಿ 400 ದಶಲಕ್ಷ ಜನಸಂಖ್ಯೆಯ ಉಪಖಂಡವನ್ನು ವಿಭಜಿಸಿ ಆಡಳಿತವನ್ನು ಎರಡು ಸ್ವತಂತ್ರ ರಾಷ್ಟ್ರಗಳಿಗೆ ಹಸ್ತಾಂತರಿಸುವ ಕೆಲಸದ ರೂಪು ರೇಷೆ ಸಿದ್ಧಪಡಿಸಲು, ಅಲ್ಲಿಯೇ ಒಂದು ಸಮಿತಿ ರಚಿಸಿದೆವು. ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಹಿಂದಿನ ಕಾರಣವೆಂದರೆ ವಿಭಜನೆಯ ತತ್ವವನ್ನು ಒಮ್ಮೆ ಅಂಗೀಕರಿಸಿದ ಮೇಲೆ, ಎಲ್ಲರ ಹಿತದೃಷ್ಟಿಯಿಂದ ಅದನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕು ಎಂಬುದಾಗಿತ್ತು. ಅದನ್ನು ಯಶಸ್ವಿಯಾಗಿ ಮಾಡಿದೆವು. ಸ್ವಾತಂತ್ರ್ಯವು ಅಖಂಡ ಭಾರತಕ್ಕೆ ಬರಲಿಲ್ಲವೆಂಬ ದುಃಖದಿಂದಾಗಿ ಸಾತಂತ್ರ್ಯೋತ್ಸವದ ಸಡಗರಕ್ಕೆ ತಡೆಯಾಗಿರುವುದು ನನಗೆ ಗೊತ್ತು.

ಜೂನ್ 3ರ ಯೋಜನೆ ಬ್ರಿಟಿಷ್ ಭಾರತದಲ್ಲಿನ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿತ್ತು. ಅಧಿಕಾರ ಹಸ್ತಾಂತರವಾದಾಗ ಭಾರತದ 565 ಸಂಸ್ಥಾನಗಳು ಸ್ವತಂತ್ರವಾಗುತ್ತಿದ್ದವು. ಇದರಲ್ಲಿ ಒಂದು ಸಮಸ್ಯೆಯೂ ಇತ್ತು. ದೂರದರ್ಶಿ ರಾಜಕೀಯ ಮುತ್ಸದ್ದಿಯಾದ ಸರ್ದಾರ್ ವಲ್ಲಭಭಾಯಿ ಪಟೇಲರು ರಾಜ್ಯಗಳ ಇಲಾಖೆಯ ಪ್ರಭಾರಿ ಸದಸ್ಯರಾಗಿದ್ದು, ಅಲ್ಲಿ ರೂಪಿಸಲಾದ ಯೋಜನೆ ಭಾರತ ದೇಶದ ರಾಜ್ಯಗಳ ಹಿತದೃಷ್ಟಿಯಿಂದ ಅತ್ಯಂತ ಉತ್ತಮವಾಗಿತ್ತು. ಭಾರತ ದೇಶ ಮತ್ತು ರಾಜ ಸಂಸ್ಥಾನಗಳು ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್ ಹಾಗೂ ಸ್ಟ್ಯಾಂಡ್ ಸ್ಟಿಲ್ ಅಗ್ರಿಮೆಂಟ್‌ಗೆ ಮೂರುವಾರದೊಳಗೆ ಸಹಿಹಾಕಿದವು. ಹೀಗೆ 300 ದಶಲಕ್ಷ ಜನರನ್ನು ಹಾಗೂ ಈ ಉಪಖಂಡದ ಪ್ರಧಾನ ಭಾಗವನ್ನು ಒಳಗೊಂಡ ರಾಜಕೀಯ ರಚನೆಯೊಂದು ಸ್ಥಾಪಿತವಾಯಿತು. ಹೈದರಾಬಾದ್ ರಾಜ್ಯ ಮಾತ್ರ ಪ್ರವೇಶ ಪಡೆಯಲಿಲ್ಲ.

ಈ ಐತಿಹಾಸಿಕ ಕ್ಷಣದಲ್ಲಿ ಅಹಿಂಸೆಯಿಂದ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮಗಾಂಧಿಯಂಥ ರೂವಾರಿಗೆ ಭಾರತ ಋಣಿಯಾಗಿರಬೇಕು. ಅವರು ಇಲ್ಲಿಲ್ಲ. ಆದರೆ, ಅವರು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದ್ದಾರೆ. ನಿಮ್ಮ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ, ಧೈರ್ಯ ಹಾಗೂ ದೂರದೃಷ್ಟಿಯುಳ್ಳ ವಿಶ್ವವಿಖ್ಯಾತ ನಾಯಕ (ಹರ್ಷೋದ್ಗಾರ).

ರಾಷ್ಟ್ರಧ್ವಜಾರೋಹಣ

ಸಭಾಧ್ಯಕ್ಷರು: ಗವರ್ನರ್ ಜನರಲ್ ಧ್ವಜಾರೋಹಣಕ್ಕೆ ಸೂಚನೆ ನೀಡುತ್ತಾರೆ (ಬಂದೂಕಿನಿಂದ ಗುಂಡು ಹಾರಿದ ಶಬ್ದ)

ಗವರ್ನರ್ ಜನರಲ್: ಈ ಚಾವಣಿಯ ಮೇಲೆ ಧ್ವಜಾರೋಹಣ ಮಾಡಲು ಸೂಚನೆ

ಸಭಾಧ್ಯಕ್ಷರು: ಸದನವನ್ನು 20ನೇ ದಿನಾಂಕಕ್ಕೆ ಮುಂದೂಡಲಾಗಿದೆ.

ಗೌರವಾನ್ವಿತ ಸದಸ್ಯರು: ಮಹಾತ್ಮಗಾಂಧೀ ಕಿ ಜೈ, ಪಂಡಿತ್ ಜವಾಹರ ಲಾಲ್ ನೆಹರೂ ಕಿ ಜೈ, ಮೌಂಟ್ ಬ್ಯಾಟನ್ ಕಿ ಜೈ

ಸದನವನ್ನು ಮುಂದೂಡಲಾಯಿತು..

(ಆಧಾರ; ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು (ನಡವಳಿಗಳು)–ಸಂಪುಟ 2)

ಪದಬಂಧ 2752



ಮೇಲಿನಿಂದ ಕೆಳಕ್ಕೆ

1. ವನದಲ್ಲಿ ಅರಳಿದ ಮುಖಾರವಿಂದ 3
2. ದೀರ್ಘ ಅಭಯ ನೀಡುವ ವೆಂಕಟ 3
3. ಹಾಡಿನ ಹರವಿನಲ್ಲಿ ಜೇನಿನ ಸಿಹಿ 3
4. ಸ್ತರವನ್ನು ವಿಶಾಲಗೊಳಿಸುವ ಉದ್ಗಲ 3
5. ಅಗಲಿಕೆಯ ನೋವಿಂದ ಪರಿತಪಿಸುತ್ತಿರುವವ 3
6. ನಮ್ಮ ಭಾಷೆ ನಮ್ಮ ನುಡಿ 3
9. ಇಬ್ಬನಿಯ ತಂಪಿನಂತೆ ಕಿವಿಗೆ ಇಂಪು 3
11. ಕುಶಾಗ್ರಜ ತಂದ ಉಪ್ಪು 3
12. ಮಿಸೈಲ್ ಮ್ಯಾನ್ ಎನಿಸಿಕೊಂಡ ನಮ್ಮ ಮಾಜಿ ರಾಷ್ಟ್ರಪತಿ 3
13. ಮೇಲೂ ಏರದ ಕೆಳಗೂ ಇಳಿಯದ ಮಧ್ಯದ ಅನಿಶ್ಚಿತ ಸ್ಥಿತಿ 3
14. ತಲೆ ಮೇಲೆ ಮೂಡಿರುವ ಉತ್ತರಕನ್ನಡ ಜಿಲ್ಲೆ 3
15. ಧರ್ಮಶಾಲೆಯಲ್ಲಿ ಕನಸು ಕಂಡ ಭಿಕ್ಷುಕ 3
18. ಧವಸ ಧಾನ್ಯದ ಗೂಡು 3
20. ಕೊಳೆಯೇ ಇಲ್ಲದ ಸ್ವಚ್ಛ ಮನಸ್ಸಿನ ಹುಡುಗಿ 3

ಎಡದಿಂದ ಬಲಕ್ಕೆ

1. 'ಮರ ಬೆಳಸಿ ಕಾಡು ಉಳಿಸಿ' ಎಂಬ ಸಸಿ ನೆಡುವ ಸಮಾರಂಭ 6
3. ಇದು ಸಮಾನ್ಯವಾದ ಬೇಡಿಕೆಯಲ್ಲ ಬಹು ದೊಡ್ಡದು 5
5. ವಿನಾಯಕ ವಿದ್ಯೆಯನ್ನು ಕೊಡುವವನೂ ಹೌದು 5
7. ಜಂಗಮಕ್ಕಳಿವುಂಟು ಆದರೆ ಈ ಅಚಲ ಯಂತ್ರಾಗಾರಕ್ಕಿಲ್ಲ 3
8. ಅಯೋಧ್ಯೆಯಲ್ಲಿ ಆಗುತ್ತಿರುವ ನಿರ್ಮಾಣ 5
10. ಮದ್ದಿಗೆ ಪ್ರಯೋಜನವೆನಿಸದ ಮನೆಯ ಹಿಂದೆ ಬೆಳೆದ ಸಸಿ 5
12. ಭೀಕರತೆಯ ಕತ್ತಲು ತುಂಬಿದ ಇರುಳು 5
14. ವಿದ್ಯೆ ಮತ್ತು ಕಲಿಕೆಗೆ ಸಂಬಂಧಿಸಿದ ನಿಯಮ ಬದ್ಧತೆ 5
16. ಒಳ್ಳೆಯದನ್ನು ಉಂಟುಮಾಡುವ ಈಶ್ವರ 3
17. ನೋವಿನಿಂದ ಅಂತರಂಗವನ್ನು ತಲ್ಲಣಗೊಳಿಸು 5
19. ಜೀವನ ಮತ್ತು ಸಮಾಜದ ಬಗ್ಗೆ ದೊಡ್ಡ ಪರದೆಯ ಮೇಲೆ ತೋರಿಸುವ ಪ್ರಪಂಚ 5
21. ಮಂದಿಯೆಂಬ ದೇಶದ ಮೂಲ ಸಂಪತ್ತು 6

ಪದಬಂಧ ಉತ್ತರ -2751

ಮೇಲಿಂದ ಕೆಳಕ್ಕೆ

1.ನಾಮಪದ 2.ದಯಾಮಯದೇವ 3.ಣವರಾ 4.ಅನುಜಾ 5.ಸತ್ಕಾರ್ಯಧುರೀಣ 7.ನುತಧನ 9.ದುಮ್ಮಾನ 10.ಮಹಾನುಭಾವರು 11.ರಸಾನಂದ 13.ಭೋಜನವಿರಾಮ 16.ನಗೆಹನಿ 18.ತತ್ಪರ 19.ನವಮ

ಎಡದಿಂದ ಬಲಕ್ಕೆ

1. ನಾರದಪುರಾಣ 4. ಆಗಸ 6.ರಾಮಾನುಜಾಚಾರ್ಯ 8.ದನಿಯ 9.ದುರ್ಗಂಧ 10.ಮಹಾವರ 12.ನಭೋಗಣ 14.ಸಾಧನ 15.ನಯನ 17.ಭಾರತದರ್ಶನ 20.ರುಧಿರ 21.ಮಹಿಷಮರ್ದಿನಿ

ಜೆಸ್ಯೂಟ್ ಪತ್ರಗಳಲ್ಲಿ ಪುಟಿದೆದ್ದ ಇತಿಹಾಸ

ಡಾ. ಎಂ. ವಿನ್ಸೆಂಟ್

ಒಳನೋಟ

ಜೆಸ್ಯೂಟ್ ಪತ್ರಗಳು ಮತ್ತು ಮೈಸೂರು ಇತಿಹಾಸ (Jesuit Letters And Mysore History) ಶೀರ್ಷಿಕೆಯ ಈ ಕೃತಿ ಲೇಖಕ ಮಹಿಮೈ ದಾಸ್ ಅವರ ಡಾಕ್ಟರೇಟ್ ಪ್ರಬಂಧವಾಗಿದೆ. 1648ರಲ್ಲಿ ಮೈಸೂರಿನಲ್ಲಿ ತಮ್ಮ ಮಿಷನ್ ಅನ್ನು ಪ್ರಾರಂಭಿಸಿದ ಜೆಸ್ಯೂಟ್ ಮಿಷನರಿಗಳು (ಮತಪ್ರಚಾರಕರು), ಸಂಸ್ಥಾನದ ವಿವಿಧ ಭಾಗಗಳಲ್ಲಿ ಕ್ರಿಶ್ಚಿಯನ್ ಸಮುದಾಯಗಳ ನೆಲೆಗಳನ್ನೂ ಸ್ಥಾಪಿಸಿದರು. ಹದಿನೇಳನೆಯ ಶತಮಾನದಲ್ಲಿ ಮೈಸೂರು ಒಡೆಯರ್‌ಗಳ ಪ್ರೋತ್ಸಾಹದ ಮೂಲಕ ಕ್ರಿಶ್ಚಿಯನ್ ಸಮುದಾಯಗಳು ಸ್ಥಿರವಾಗಿ ಬೆಳೆದವು.

ಮಿಷನರಿಗಳು, ವಾರ್ಷಿಕ ಪತ್ರಗಳು ಮತ್ತು ವರದಿಗಳ ಮೂಲಕ ರೋಮ್ ನಗರದಲ್ಲಿರುವ ತಮ್ಮ ಪ್ರಧಾನ ಕಚೇರಿಯೊಂದಿಗೆ ನಿಯಮಿತವಾಗಿ ಪತ್ರ ವ್ಯವಹಾರ ನಡೆಸುತ್ತಿದ್ದರು. ಮಿಷನರಿ ಚಟುವಟಿಕೆಗಳ ಕುರಿತು ಮಾತ್ರವಲ್ಲದೆ ರಾಜಕೀಯ, ಮೈಸೂರು ಆಸ್ಥಾನದ ಕಲಾಪ, ಸೈನ್ಯ, ಯುದ್ಧ, ಭೌಗೋಳಿಕತೆ, ಜನ, ಸಾಮ್ರಾಜ್ಯದ ವಿಸ್ತರಣೆಯಂತಹ ಹಲವಾರು ಐತಿಹಾಸಿಕ ಮಾಹಿತಿಗಳನ್ನೂ ಈ ಪತ್ರಗಳು ಒಳಗೊಂಡಿರುತ್ತಿದ್ದವು. ಪೋರ್ಚುಗೀಸ್, ಲ್ಯಾಟಿನ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ಬರೆಯಲಾದ ಮೈಸೂರು ಮಿಷನ್‌ನ ಈ ಪತ್ರಗಳನ್ನು ರೋಮ್‌ನ ಜೆಸ್ಯೂಟ್ ಸಂಗ್ರಹಾಲಯದಲ್ಲಿ ಇರಿಸಲಾಗಿದೆ ಮತ್ತು ಇವುಗಳನ್ನು ಇಲ್ಲಿಯವರೆಗೆ ಯಾರೂ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿಲ್ಲ.

ಲೇಖಕರು ಈ ಪತ್ರಗಳಿಂದ ಐತಿಹಾಸಿಕ ಮಾಹಿತಿಯನ್ನು ಹೊರತೆಗೆದು, ಅದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಮೂಲಕ, ಈ ಮಿಷನರಿ ಪತ್ರಗಳು ಹದಿನೇಳನೆಯ ಶತಮಾನದ ಮೈಸೂರು ಒಡೆಯರ್‌ಗಳ ಇತಿಹಾಸಕ್ಕೆ ಮೂಲವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ತೋರ್ಪಡಿಸಿದ್ದಾರೆ.



Jesuit Letters And Mysore History
ಲೇ: ಡಾ. ಮಹಿಮೈ ದಾಸ್
ಪ್ರ: ಕ್ರಿಸ್ತು ಜ್ಯೋತಿ ಪಬ್ಲಿಕೇಷನ್ಸ್
ಸಂ: superdass26@gmail.com
ಪು: 450 ₹700

ಹದಿನೇಳನೆಯ ಶತಮಾನದ ಮೈಸೂರಿನ ಇತಿಹಾಸವನ್ನು ಇಲ್ಲಿಯವರೆಗೆ ಹೆಚ್ಚಾಗಿ ಸ್ಥಳೀಯ ಮೂಲಗಳನ್ನು ಮಾತ್ರ ಬಳಸಿಕೊಂಡು ಬರೆಯಲಾಗಿದೆ. ಮತ್ತೊಂದೆಡೆ, ಈ ಮಿಷನರಿ ಪತ್ರಗಳು ಐತಿಹಾಸಿಕ ಘಟನೆಗಳ ಮೇಲೆ ವಿಭಿನ್ನ ನೋಟವನ್ನು ಬೀರುವುದು ಖಚಿತ. ಈ ಪತ್ರಗಳು ಇಂದಿಗೂ ಇತಿಹಾಸಕಾರರಿಗೆ ತಿಳಿದಿಲ್ಲದ ಹಲವಾರು ಮಾಹಿತಿಗಳನ್ನು ಒಳಗೊಂಡಿವೆ.

ಈ ರೀತಿಯಾಗಿ, ಈ ಪುಸ್ತಕವು ಒಂದೆಡೆ ಮೈಸೂರಿನ ಇತಿಹಾಸದ ಮೆರುಗು ಹೆಚ್ಚಿಸಲು ಪ್ರಯತ್ನಿಸಿದರೆ, ಮತ್ತೊಂದೆಡೆ ಚರ್ಚಿನ ಸಾಹಿತ್ಯವನ್ನು ರಾಜಕೀಯ ಕ್ಷೇತ್ರದಲ್ಲೂ ಹೇಗೆ ಅತ್ಯುತ್ತಮವಾಗಿ ಬಳಸಿಕೊಳ್ಳಬಹುದು ಎಂಬುದನ್ನು ಸಾಬೀತುಪಡಿಸುತ್ತದೆ. ಈ ಪುಸ್ತಕವು ಮೂವರು ರಾಜರ ಆಳ್ವಿಕೆಯನ್ನು ಒಳಗೊಂಡಿದೆ: ನರಸರಾಜ ಒಡೆಯರ್ (1638-1659), ದೊಡ್ಡ ದೇವರಾಜ ಒಡೆಯರ್ (1659-1673) ಮತ್ತು ಚಿಕ್ಕ ದೇವರಾಜ ಒಡೆಯರ್ (1673-1704).

ಡಾ.ಎಂ.ವಿ. ಶ್ರೀನಿವಾಸ್, ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ: 'ಈ ಕೃತಿಯ ಅತ್ಯಂತ ಆಶಾದಾಯಕ ಮತ್ತು ಲಾಭದಾಯಕ ಭಾಗವೆಂದರೆ ಮೂಲಗಳ ಪರಿಶೀಲನೆಯ ಕಡೆಗಿನ ಲೇಖಕರ ಗಮನ. ಅವರು ಬಾಹ್ಯ ಮತ್ತು ಆಂತರಿಕ ಟೀಕೆಗಳ ಮೂಲಕ ಅವುಗಳನ್ನು ಸೂಕ್ಷ್ಮವಾಗಿ ಮತ್ತು ವಿಮರ್ಶಾತ್ಮಕವಾಗಿ ಪರಿಶೀಲಿಸಿ, ವೈಜ್ಞಾನಿಕವಾಗಿ ಸ್ಥಾಪಿಸಲಾದ ಐತಿಹಾಸಿಕ ಶೋಧನೆಗಳಿಂದ ಅವರು ತಮ್ಮ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ, ಅವರ ಅಧ್ಯಯನವು ಇತಿಹಾಸ ಶಾಸ್ತ್ರಕ್ಕಾಗಿ ಮಿಷನರಿ ಮೂಲಗಳನ್ನು ಬಳಸಿಕೊಳ್ಳುವ ಪ್ರಯೋಜನಗಳನ್ನು ಮತ್ತು ಭಾರತದ ಜನರ ಸಂಸ್ಕೃತಿ ಮತ್ತು ಸಮಾಜದ ಅಧ್ಯಯನಕ್ಕೆ ಅವುಗಳ ಪ್ರಸ್ತುತತೆಯನ್ನು ತೋರಿಸುವಲ್ಲಿ ಯಶಸ್ವಿಯಾಗಿದೆ.'

ಆದರೂ, ಮೈಸೂರಿನ ಕೆಲವು ಇತಿಹಾಸಕಾರರು ಜೆಸ್ಯೂಟ್ ಪತ್ರಗಳ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಾರೆ. ಅವರು ಅವುಗಳನ್ನು ಮೇಲ್ನೋಟದಲ್ಲಿ ವೀಕ್ಷಿಸಿ, ಅವುಗಳನ್ನು ಧಾರ್ಮಿಕವಾಗಿ ಪಕ್ಷಪಾತದ ಹೇಳಿಕೆಗಳಾಗಿ ಪರಿಗಣಿಸುತ್ತಾರೆ. ಆದರೆ, ಈ ಪ್ರಸ್ತುತ ಅಧ್ಯಯನವು ಅಂತಹ ಆತಂಕ ಆಧಾರರಹಿತ ಎಂಬುದನ್ನು ಮತ್ತು ಜೆಸ್ಯೂಟ್ ಮೂಲಗಳು ನಂಬಲರ್ಹವಾದ ಹಲವಾರು ಐತಿಹಾಸಿಕ ವಿವರಗಳನ್ನು ಹೊಂದಿವೆ ಎಂಬುದನ್ನು ತೋರಿಸುತ್ತದೆ. ಸ್ಥಳೀಯ ಮೂಲಗಳೊಂದಿಗೆ ಈ ಮೂಲಗಳ ನಿರಂತರ ಹೋಲಿಕೆಯಿಂದ ಈ ಅಧ್ಯಯನದಲ್ಲಿ ಇದನ್ನು ಪ್ರದರ್ಶಿಸಲಾಗಿದೆ.

ಜೆಸ್ಯೂಟ್ ಪತ್ರಗಳಲ್ಲಿರುವ ದೋಷಗಳು, ಅಸ್ಪಷ್ಟತೆಗಳು ಮತ್ತು ಉತ್ಪ್ರೇಕ್ಷೆಗಳನ್ನು ಕಂಡುಹಿಡಿಯುವುದು ಸುಲಭವಾದರೂ, ಅವುಗಳನ್ನು ನಿಷ್ಪ್ರಯೋಜಕ ಧಾರ್ಮಿಕ ಮತಾಂಧತೆ ಎಂದು ತಳ್ಳಿಹಾಕುವುದು ದೊಡ್ಡ ತಪ್ಪು. ಮಿಷನರಿಗಳು ಭಾರತೀಯ ಧಾರ್ಮಿಕ ಸಂಪ್ರದಾಯಗಳಿಗೆ ಪ್ರತಿಕೂಲವಾದ ದೃಷ್ಟಿಕೋನವನ್ನು ಪ್ರದರ್ಶಿಸಿದರೂ, ಅವರ ಸ್ವಂತ ಧರ್ಮದಲ್ಲಿನ ಅವರ ನಂಬಿಕೆ ಮತ್ತು ಮತಾಂತರದ ಬಯಕೆಯು, ಈ ಮಿಷನರಿಗಳಿಗೆ ಸಮಾಜ, ಜನ, ಪದ್ಧತಿ, ಸಂಪ್ರದಾಯ ಮತ್ತು ಗತಕಾಲವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಲು ಪ್ರೇರಣೆಯಾಯಿತು. ಈ ಮೂಲಗಳು ಸ್ಥಳೀಯ ಮತ್ತು ಇತರ ವಿದೇಶಿ ಮೂಲಗಳೊಂದಿಗೆ ಬಳಸಿದರೆ ಮೈಸೂರಿನ ಇತಿಹಾಸವನ್ನು ಮೆರುಗುಗೊಳಿಸುತ್ತವೆ ಎಂದು ದಾಸ್ ನಂಬುತ್ತಾರೆ.

ಜೆಸ್ಯೂಟ್ ಮೂಲಗಳಲ್ಲಿ ಕಂಡುಬರುವ ಐತಿಹಾಸಿಕ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಲು ಮತ್ತು ಲೇಖಕರು ಸ್ಥಳೀಯ ಮೂಲಗಳನ್ನು ಬಳಸಿದ ವಿಧಾನವನ್ನು ವ್ಯಾಪಕವಾದ ಗ್ರಂಥಋಣ ತೋರಿಸುತ್ತದೆ. ಈ ಅಧ್ಯಯನವು ಜೆಸ್ಯೂಟ್ ಪತ್ರಗಳ ಮತ್ತು ಇತಿಹಾಸಕಾರರಿಗೆ ಲಭ್ಯವಾಗದ ಜೆಸ್ಯೂಟ್ ಮೂಲಗಳತ್ತ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿದೆ.

ಚರ್ಚ್ ಇತಿಹಾಸದ ಉತ್ತಮ ತಿಳಿವಳಿಕೆಗೆ ಮಾತ್ರವಲ್ಲದೆ, ದೇಶದ ನಾಗರಿಕ ಮತ್ತು ಸಾಮಾಜಿಕ ಇತಿಹಾಸದ ವರ್ಧನೆಗೂ ಕೊಡುಗೆ ನೀಡುತ್ತದೆ ಈ ಕೃತಿ. ಎಲ್ಲಕ್ಕಿಂತ ಹೆಚ್ಚಾಗಿ, ಇತರ ಇತಿಹಾಸಕಾರರಿಗೆ ಲೇಖಕರ ಸಲಹೆ ಹೆಚ್ಚು ಮಹತ್ವದ್ದಾಗಿದೆ. ಇತಿಹಾಸವನ್ನು ಬರೆಯಲು ಚರ್ಚಿನ ಮೂಲಗಳನ್ನು ಬಳಸಿಕೊಳ್ಳುವ ಅಗತ್ಯವನ್ನು ಲೇಖಕರು ಸೂಚಿಸಿದಂತೆ, ಅವರು ಈ ಕಾರ್ಯದಲ್ಲಿನ ತೊಂದರೆಗಳನ್ನು ವಿವರಿಸುತ್ತಾರೆ ಮತ್ತು ಲಭ್ಯವಿರುವ ಮೂಲಗಳ ಲಾಭವನ್ನು ಪಡೆಯಲು ವಿದ್ವಾಂಸ ಸಮುದಾಯಗಳಿಗೆ ಮನವಿ ಮಾಡುತ್ತಾರೆ. ಇದನ್ನು ಮಾಡಲು, ಈ ಮೂಲಗಳ ಪ್ರತಿಗಳನ್ನು ಇತಿಹಾಸಕಾರರು ಸುಲಭವಾಗಿ ಉಪಯೋಗಿಸಿಕೊಳ್ಳಲು ಅವುಗಳನ್ನು ಭಾರತಕ್ಕೆ ತರುವ ಅಗತ್ಯವನ್ನು ಅವರು ಮನಗಾಣುತ್ತಾರೆ. ಅವರ ಪ್ರಕಾರ, ಸೂಕ್ಷ್ಮಮಟ್ಟದಲ್ಲಿ ಮೈಸೂರಿನ ಈ ಅಧ್ಯಯನ ಮತ್ತು ಚರ್ಚ್‌ನ ಐತಿಹಾಸಿಕ ಮೂಲಗಳ ಬಗ್ಗೆ ಅವರ ಹೇಳಿಕೆಗಳು ಭಾರತದ ಉಳಿದ ಭಾಗಗಳಿಗೂ ಅನ್ವಯಿಸಬಹುದು.

ಔಪಚಾರಿಕ ಧಾಟಿಯ ಅತ್ಯುತ್ತಮ ಪ್ರಬಂಧಗಳು

ಎಸ್. ದಿವಾಕರ್

ವಿಮರ್ಶೆ

'ಇಂಗ್ಲಿಷಿನಲ್ಲಿ, ಇತರ ಅನೇಕ ಭಾಷೆಗಳಲ್ಲಿ ಇರುವುದಕ್ಕಿಂತ ಭಿನ್ನವಾಗಿ, ಪ್ರಬಂಧವೆನ್ನುವುದು ಇಪ್ಪತ್ತನೆಯ ಶತಮಾನದಲ್ಲಿ ಒಂದು ಮೈನರ್ ಪಾತ್ರವನ್ನಷ್ಟೇ ವಹಿಸಿದೆ. ಬರವಣಿಗೆಯ ಇತರ ರೂಪಗಳಿಗೆ ಹೋಲಿಸಿದರೆ, ಪ್ರಬಂಧದ ಬಗ್ಗೆ ವಿಮರ್ಶೆಯೂ ಇಲ್ಲ, ಪ್ರಬಂಧ ಹೇಗೆ ಬರೆಯಬಹುದೆಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿಸುವ ಯಾವುದೇ ಪುರಾವೆಯೂ ಇಲ್ಲ. ಪ್ರಬಂಧದ ವಸ್ತುವನ್ನು ಕುರಿತ ವ್ಯಾಖ್ಯಾನಗಳನ್ನು ಬಿಟ್ಟರೆ ಪ್ರಬಂಧವನ್ನು ಹೇಗೆ ಓದಬೇಕೆನ್ನುವುದರ ಬಗ್ಗೆ ಒಮ್ಮತವಾಗಲೀ ಭಿನ್ನಾಭಿಪ್ರಾಯವಾಗಲೀ ಇಲ್ಲವೇ ಇಲ್ಲ. ಪ್ರಸ್ತುತ ಸಂದರ್ಭದಲ್ಲಿ ಅದು ಬಹುಮಟ್ಟಿಗೆ ತನ್ನ ಉಪಪ್ರಬೇಧಗಳಿಂದ - ನೆನಪು, ಪ್ರವಾಸ ಕಥನ, ವೈಯಕ್ತಿಕ ಪತ್ರಿಕಾ ಬರಹ, ಪುಸ್ತಕ ಸಮೀಕ್ಷೆ, ಅಕಾಡೆಮಿಕ್ ವಿಮರ್ಶೆ, ಇತ್ಯಾದಿಯಿಂದ - ಪ್ರತಿನಿಧಿಸಲ್ಪಟ್ಟಿದೆ.' ಪ್ರಸಿದ್ಧ ಪ್ರಬಂಧಕಾರ ಎಲಿಯಟ್ ವೈನ್‌ಬರ್ಗರ್‌ನ ಈ ಮಾತುಗಳನ್ನು ಓದುವವರೆಗೆ ನನಗೆ ಕನ್ನಡದಲ್ಲೂ ಇದೇ ಸ್ಥಿತಿಯಿದೆಯೆಂದು ಗೊತ್ತಿರಲಿಲ್ಲ.

ಪ್ರಬಂಧಗಳಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಎಂದು ಎರಡು ಬಗೆ. ಔಪಚಾರಿಕ ಪ್ರಬಂಧದ ಮುಖ್ಯ ಲಕ್ಷಣವೆಂದರೆ ಘನೋದ್ದೇಶ, ಗಂಭೀರ ಧಾಟಿ, ವಿಚಾರಗಳ ತರ್ಕಬದ್ಧ ಪ್ರತಿಪಾದನೆ, ವಾಗ್ವಾದ, ಇತ್ಯಾದಿ. ಇಂಥ ಪ್ರಬಂಧ ಇವತ್ತು ಎಲ್ಲ ವಾಸ್ತವಿಕ ಅಥವಾ ಸೈದ್ಧಾಂತಿಕ ಗದ್ಯ ಬರಹಗಳಿಗೂ ಸಮಾನವಾಗಿದೆ. ಇದಕ್ಕೆ ಪ್ರತಿಯಾಗಿ ಅನೌಪಚಾರಿಕ ಪ್ರಬಂಧದಲ್ಲಿ ಆತ್ಮ ನಿವೇದನೆ, ವೈಯಕ್ತಿಕ ಅಭಿರುಚಿ, ಸ್ವಂತ ಅನುಭವ, ಗೌಪ್ಯವೆನಿಸುವ ಧಾಟಿ, ಇವೇ ಮೊದಲಾದ ಅಂಶಗಳು ಮುಖ್ಯವಾಗುತ್ತವೆ. ನಾವು ಲಲಿತ ಪ್ರಬಂಧ ಎಂದು ಕರೆಯುವ ಈ ಬಗೆಯ ಪ್ರಬಂಧಕ್ಕೆ ಇಂಗ್ಲಿಷಿನಲ್ಲಿ 'ಪರ್ಸೊನಲ್ ಎಸ್ಸೆ' ಎಂದೂ 'ಫೆಮಿಲಿಯರ್ ಎಸ್ಸೆ' ಎಂದೂ ಹೆಸರುಗಳಿವೆ. ಹಾಗೆ ನೋಡಿದರೆ ಇವೆರಡಕ್ಕೂ ಅಂಥ ವ್ಯತ್ಯಾಸವೇನಿಲ್ಲ. ಪರ್ಸೊನಲ್ ಎಸ್ಸೆ ಲಘು ಧಾಟಿಗೇ ಹೆಚ್ಚು ಬೆಲೆ ಕೊಟ್ಟರೆ ಫೆಮಿಲಿಯರ್ ಎಸ್ಸೆ ಅಷ್ಟು ಲಘುಧಾಟಿಯಲ್ಲಿ ಇರಬೇಕಾಗಿಲ್ಲ. ಅದರದು ಪ್ರಬಂಧಕಾರನ 'ನಾನು'ವನ್ನು ಅಥವಾ ಅವನ ಸ್ವಭಾವವಿಶೇಷವನ್ನು ಕೇಂದ್ರದಲ್ಲಿರಿಸುವ ಆಶಯ.



ಒಲವೆಂಬ ಮಾಯೆ
ಲೇ: ವೆಂಕಟೇಶ ಮಾಚಕನೂರ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಸಂ: 9481858108
ಪು: 163 ₹130

ಇಂಥ ಪ್ರಬಂಧಗಳ ಕೇಂದ್ರದಲ್ಲಿರುವುದು ಮನುಷ್ಯಾನುಭವದಲ್ಲಿ ಒಂದು ಬಗೆಯ ಸಾಮ್ಯವಿದೆ ಎಂಬ ನಂಬಿಕೆ. ಪ್ರಬಂಧ ಪ್ರಕಾರದ ಜನಕ ಮಿಶೆಲ್ ದ ಮಾಂತೇನ್ ಹೇಳಿದಂತೆ 'ಪ್ರತಿಯೊಬ್ಬ ಮನುಷ್ಯನೂ ಸ್ವತಃ ಇಡೀ ಮನುಷ್ಯ ಸ್ಥಿತಿಯೇ ಆಗಿರುತ್ತಾನೆ.'

ವೆಂಕಟೇಶ ಮಾಚಕನೂರ ತಮ್ಮ ಅನೇಕ ಪ್ರವಾಸ ಕಥನಗಳಿಂದ ಪ್ರಸಿದ್ಧರಾಗಿರುವವರು. ಹಾಗೆಂದು ಅವರು ಪ್ರಬಂಧ ಪ್ರಕಾರಕ್ಕೆ ಹೊಸಬರೇನೂ ಅಲ್ಲ. ಈಗಾಗಲೇ ಅವರ 'ಕೌದಿ ಕಂಬಳಿ', 'ಜೋಳ ಜೋಳೇಶ್ವರ' ಪ್ರಬಂಧ ಸಂಕಲನಗಳು ಹೊರಬಂದಿವೆ. ಪ್ರಸ್ತುತ ಸಂಕಲನ 'ಒಲವೆಂಬ ಮಾಯೆ'ಯಲ್ಲಿ 14 ಪ್ರಬಂಧಗಳಿವೆ. ಇವುಗಳಲ್ಲಿ ಕೆಲವು ಲಲಿತ, ಇನ್ನು ಕೆಲವು ಗಂಭೀರ. ಕೊನೆಯಲ್ಲಿ ಕೀನ್ಯಾದ ಬಹು ಪ್ರಸಿದ್ಧ ಲೇಖಕನ ಒಂದು ಲೇಖನದ ಅನುವಾದವೂ ಸೇರಿಕೊಂಡಿದೆ.

ಈ ಪ್ರಬಂಧಕಾರರೇ ಹೇಳಿರುವಂತೆ 'ಇಲ್ಲಿನ ಕೆಲವು ಪ್ರಬಂಧಗಳು ಲಘು ಓಘದಲ್ಲಿದ್ದರೆ, ಕೆಲವು ಗಂಭೀರ ಓದನ್ನು ಬಯಸುತ್ತವೆ. ಪ್ರಬಂಧ ಸಾಹಿತ್ಯ ಹೀಗೇ ಎಂದು ಹೇಳಲಾಗದ ಪ್ರಕಾರ. ಕಥೆ, ಕಾವ್ಯ, ಕಾದಂಬರಿಯಂತಹ ಎಲ್ಲ ಪ್ರಕಾರಗಳಿಂದಲೂ ಒಂದಿಷ್ಟು ಅಂಶಗಳನ್ನು ಪಡೆದು ಸ್ವತಂತ್ರವಾಗಿ ಮೈದಳೆದು ನಿಲ್ಲುವ ಸುಲಲಿತ ಪ್ರಕಾರ. ಅದರ ಹರವು ಹಿಗ್ಗಿಸಿದಷ್ಟು ಹೆಚ್ಚು. ಅದು ತಳೆಯುವ ಆಕಾರ, ಲಯಗಾರಿಕೆ ಲೇಖಕರಿಂದ ಲೇಖಕರಿಗೆ ಭಿನ್ನ.'

ಇಲ್ಲಿ ಲಘು ಓಘದಲ್ಲಿರುವ ಪ್ರಬಂಧಗಳೆಂದರೆ 'ಸರ್ಕಾರದ ಕೆಲಸ ದೇವರ ಕೆಲಸ', 'ಮೆಣಸಿನಕಾಯಿ', 'ಬಡ್ಡಿಮಕ್ಕಳು', 'ರಾಜಕೀಯ ನಿಘಂಟು' ಮತ್ತು 'ನಮ್ಮೂರ ಸೊಳ್ಳೆಗಳು'. ಈ ಕೊನೆಯ ಪ್ರಬಂಧವನ್ನೇ ನೋಡೋಣ. ಇದು ಶತಶತಮಾನಗಳಿಂದ ಮನುಷ್ಯರ ಜೊತೆ ರಕ್ತಸಂಬಂಧ ಇರಿಸಿಕೊಂಡಿರುವ ಜೀವಜಂತುಗಳ ವಿವರಗಳಿಂದ ಪ್ರಾರಂಭವಾಗುತ್ತದೆ. ಸ್ವಂತ ಅನುಭವದ ವಿವರವೊಂದನ್ನು ಕೊಟ್ಟು, ಬೇರೆ ಬೇರೆ ಪ್ರದೇಶಗಳಲ್ಲಿ ಸೊಳ್ಳೆಗಿರುವ ಹೆಸರುಗಳನ್ನು ನಮೂದಿಸಿ, ರಾಜಧಾನಿಯ ಸೊಳ್ಳೆಗಳ ಬಗ್ಗೆ ರೂಪಕವೊಂದನ್ನು ಸೃಷ್ಟಿಸಿ, ಸೊಳ್ಳೆಯ ನಿಯಂತ್ರಣಕ್ಕಿದ್ದೊಂದು ಸರ್ಕಾರಿ ಇಲಾಖೆಯ ಬಗ್ಗೆ ಹೇಳಿ, ಮಾರುಕಟ್ಟೆಯಲ್ಲಿರುವ ಸೊಳ್ಳೆ ನಿವಾರಕಗಳ ಜಾಹೀರಾತುಗಳನ್ನು ತೋರಿಸಿ, 'ಜಗತ್ತಿನ ಜನಸಂಖ್ಯೆ ಕಡಿಮೆ ಮಾಡುವಲ್ಲಿ ಸೊಳ್ಳೆಗಳ ಪಾತ್ರ ಉಪೇಕ್ಷಿಸುವಂತಿಲ್ಲ' ಎಂಬ ವ್ಯಾಖ್ಯಾನದೊಡನೆ ಮುಕ್ತಾಯಗೊಳ್ಳುತ್ತದೆ.

ಬೇಕಾದ ಹಾಗೆ ಮಣಿಯುವ, ಎಲ್ಲಿ ಬೇಕಾದರೂ ಹೊಂದಿಕೊಳ್ಳುವ ಈ ಪ್ರಬಂಧಕ್ಕೆ ಯಾವ ದಿಕ್ಕಿನಲ್ಲಿ ಬೇಕಾದರೂ ಚಲಿಸುವ ಸ್ವಾತಂತ್ರ್ಯವಿದೆ. ಇದು ಎಲ್ಲ ವಸ್ತುಗಳೂ ಸಮನಾಗಿ ಕೇಂದ್ರದ ಬಳಿಯೇ ಇದೆಯೆನ್ನುವಂತೆ, ಎಲ್ಲ ವಿಷಯಗಳೂ ಒಂದಕ್ಕೊಂದು ಸಂಬಂಧಪಟ್ಟವೆಯೆನ್ನುವಂತೆ ವರ್ತಿಸುತ್ತಿದೆ. ಇಲ್ಲಿ ಪ್ರಬಂಧಕಾರ ಗಾಸಿಪ್ಪಿನಿಂದ ಹಿಡಿದು ವಿವೇಕದವರೆಗೆ ಎಲ್ಲವನ್ನೂ ನೇರವಾಗಿ ನಮ್ಮ ಕಿವಿಗೇ ಅರುಹುತ್ತಿದ್ದಾನೆ; ವಿಚಾರಗಳನ್ನು, ನೆನಪುಗಳನ್ನು, ಆಶೋತ್ತರಗಳನ್ನು, ದೂರುದುಮ್ಮಾನಗಳನ್ನು, ಮನೋಲಹರಿಯನ್ನು ಹಂಚಿಕೊಳ್ಳುವ ಮೂಲಕ ನಮ್ಮೊಡನೆ ಒಂದು ಆತ್ಮೀಯ ಸಂಬಂಧವನ್ನು ಸ್ಥಾಪಿಸುತ್ತಿದ್ದಾನೆ.

ಇದಕ್ಕೆ ನಿದರ್ಶನವಾಗಿ ಈ ಸಾಲುಗಳನ್ನು ನೋಡಬಹುದು: 'ಸೊಳ್ಳೆಗಳಿಗಾಗಿಯೆ ದಿನಾಲು ನಾಲ್ಕು ಹನಿ ರಕ್ತವನ್ನು ಒಂದು ತಟ್ಟೆಯಲ್ಲಿ ಹಾಕಿ 'ನಿಮ್ಮ ಆಹಾರ ಇಲ್ಲಿದೆ' ಎಂದು ಒಂದು ಬೋರ್ಡ್ ತಗಲು ಹಾಕಿ ಮಲಗಿದರೆ ಹೇಗೆ ಎಂಬ ವಿಚಾರ ಕೂಡ ನಮ್ಮ ಮನದಲ್ಲಿ ಸುಳಿದುಹೋಯಿತು... ಆದರೆ ಪ್ರತಿರಾತ್ರಿ ರಕ್ತದಾನ, ರಕ್ತರಾತ್ರಿ ಆಗುವುದಕ್ಕೆ ನಮ್ಮ ಮನೆಯಲ್ಲಿ ಸಹಮತ ಮೂಡಲಿಲ್ಲ. ಬಿಸಿ ರಕ್ತಕ್ಕೆ ಒಗ್ಗಿರುವ ಸೊಳ್ಳೆಗಳಿಗೆ ತಂಗಳ ಊಟ ಸೇರಲಿಕ್ಕಿಲ್ಲ, ಅವು ಮತ್ತೆ ನಮ್ಮ ಸುತ್ತ ಸುತ್ತುತ್ತವೆ ಎಂಬ ಅಭಿಪ್ರಾಯಕ್ಕೆ ಬಂದು ಆ ಪ್ರಸ್ತಾಪ ನಕಾರಾತ್ಮಕ ಎಂದು ಬಿದ್ದುಹೋಯಿತು.'

'ಒಲವೆಂಬ ಮಾಯೆ', 'ದೇವರು, ಧರ್ಮ, ಆಧ್ಯಾತ್ಮ ಇತ್ಯಾದಿ' ಔಪಚಾರಿಕ ಧಾಟಿಯಲ್ಲಿರುವ ಅತ್ಯುತ್ತಮ ಪ್ರಬಂಧಗಳು. ಇವುಗಳಲ್ಲಿ ಮಾಚಕನೂರರ ಬಹುಶ್ರುತತ್ವ, ಜಿಜ್ಞಾಸೆ, ವಿಷಯವೊಂದನ್ನು ಹಲವು ಮಗ್ಗುಲುಗಳಿಂದ ಪರಿಶೀಲಿಸುವ ಪ್ರತಿಭೆ, ಪಾಂಡಿತ್ಯ ಪ್ರದರ್ಶನದ ಲವಲೇಶವೂ ಇಲ್ಲದ, ಓದುಗರಿಗೆ ಮನವರಿಕೆ ಮಾಡಿಕೊಡುವ ಶೈಲಿ ಎದ್ದುಕಾಣುತ್ತವೆ.

ಸಣ್ಣಕತೆಯಲ್ಲಿ ಮುಖ್ಯವಾದದ್ದು 'ಹೇಳುವುದಲ್ಲ, ತೋರಿಸುವುದು'. ಆದರೆ ಪ್ರಬಂಧಕಾರನಾದವನು ತನ್ನ ಪ್ರಬಂಧದಲ್ಲಿ ತಾನು ಯೋಚಿಸಿದ, ಗುರುತಿಸಿದ, ಅರಿತ, ಅರ್ಥಮಾಡಿಕೊಂಡ ಎಲ್ಲವನ್ನೂ ಒಂದೇ ಉಸಿರಿಗೆ 'ಹೇಳು'ತ್ತಾನೆ. ಮಾಚಕನೂರರು ಹಾಗೆ ಹೇಳುವ ಸಮರ್ಥ ಪ್ರಬಂಧಕಾರರು.

ರಾಜಶ್ರೀ ಟಿ. ರೈ ಪೆರ್ಲ
ಅವರ
ಅಕ್ವೇರಿಯಂ
https://www.prajavani.net/short-story
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಮತ ಅರಸೀಕೆರೆ
ಅವರ
ಚಿತ್ರ ಸಂಕಲ್ಪ
https://www.prajavani.net/poetry
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನೂರಾರು ನೆನಪುಗಳ ತೀನ್ ಮೂರ್ತಿ ಭವನ

8ನೇ ಪುಟದಿಂದ...

ಕಪ್ಪು ಹಲಗೆಯ ಮೇಲೆ ಎಲ್‌ಇಡಿ ಬೆಳಕಿನ ಬಿಳಿ ಅಕ್ಷರಗಳು ಗಮನ ಸೆಳೆಯುತ್ತವೆ. ಸಂವಿಧಾನ ರಚನೆಯ ಹಂತಗಳು, ಚರ್ಚೆಗಳು ಮತ್ತು ಪ್ರಕ್ರಿಯೆಗಳನ್ನು ಆಸಕ್ತಿದಾಯಕವಾಗಿ ಕಟ್ಟಿಕೊಡಲಾಗಿದೆ. ಸಂವಿಧಾನದ ಕುರಿತು ದೇಶದ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರ ಸಂದೇಶದ ಪ್ರತಿಯೊಂದಿಗೆ, ಆ ಪ್ರತಿಗೆ ಅವರೇ ಸಹಿ ಹಾಕುತ್ತಿರುವ ನೋಟ ಜೀವ ಪಡೆದು ಬಂದಂತೆ ತೋರುತ್ತದೆ. ಸಂವಿಧಾನದ ಕುರಿತು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾಷಣದ ತುಣುಕುಗಳನ್ನು ಕೂಡ ಇಲ್ಲಿ ಕಣ್ತುಂಬಿಕೊಳ್ಳಬಹುದು.

ಭಾರತ ಹಲವು ಭಾಷೆಗಳ ನೆಲೆವೀಡು. ಇಲ್ಲಿನ ಸಂವಿಧಾನ ಕೂಡ ಆಯಾ ಪ್ರಾಂತ್ಯಗಳಿಗೆ ಆಯಾ ಭಾಷೆಗಳಲ್ಲಿ ಲಭ್ಯವಿದೆ. ಕನ್ನಡವೂ ಸೇರಿದಂತೆ ಭಾರತದ ಯಾವುದೇ ಭಾಷೆಯಲ್ಲಿ ಸಂವಿಧಾನವನ್ನು ಇಲ್ಲಿ ಪರದೆ ಮೇಲೆ ಓದಬಹುದು.

ಈ ಸುಂದರ ಕಟ್ಟಡವನ್ನು ನಿರ್ಮಿಸಿದ್ದು ದೆಹಲಿಯ ಕನ್ನಾಟ್ ಪ್ಲೇಸ್ ಹಾಗೂ ಪಟೌಡಿ ಪ್ಯಾಲೇಸ್ ಅನ್ನು ನಿರ್ಮಿಸಿದ ಬ್ರಿಟಿಷ್ ಸೇನಾನಿ ರಾಬರ್ಟ್ ಟೋರ್ ರಸೆಲ್. ಹಿಂದೆ ಅದನ್ನು 'ಫ್ಲಾಗ್ ಸ್ಟಾಫ್ ಹೌಸ್' ಎಂದು ಕರೆಯಲಾಗುತ್ತಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಕಮಾಂಡರ್ ಇನ್ ಚೀಫ್ ಅವರ ಅಧಿಕೃತ ನಿವಾಸ ಇದಾಗಿತ್ತು. ವಿಕ್ಟೋರಿಯಾ ಹಾಗೂ ಫ್ರೆಂಚ್ ವಾಸ್ತುಶಿಲ್ಪ ಶೈಲಿಯಲ್ಲಿರುವ ಈ ಕಟ್ಟಡವನ್ನು ಕಲ್ಲು ಮತ್ತು ಸಿಮೆಂಟ್ ಬಳಸಿ ನಿರ್ಮಿಸಲಾಗಿದೆ.

ಕಟ್ಟಡಕ್ಕೆ ಎರಡನೇ ಮಹಾಯುದ್ಧದಲ್ಲಿ ಸಿರಿಯಾ, ಪ್ಯಾಲೆಸ್ಟೀನ್ ಮತ್ತು ಸಿನಾಯ್‌ನಲ್ಲಿ ಪರಾಕ್ರಮ ಮೆರೆದ ಜೋಧಪುರ, ಹೈದರಾಬಾದ್ ಮತ್ತು ಮೈಸೂರು ಲ್ಯಾನ್ಸರ್‌ಗಳ ಗೌರವಾರ್ಥ 'ತೀನ್‌ಮೂರ್ತಿ ಭವನ' ಎಂದು ನಾಮಕರಣ ಮಾಡಲಾಯಿತು. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿದ ಮತ್ತೊಂದು ಘಟಕವನ್ನು ಸೇರಿಸಿದ ಬಳಿಕ ಇದನ್ನು 'ಪ್ರಧಾನಮಂತ್ರಿ ಸಂಗ್ರಹಾಲಯ' ಎಂದು 2022ರ ಏಪ್ರಿಲ್‌ನಲ್ಲಿ ಮರು ನಾಮಕರಣ ಮಾಡಲಾಯಿತು.

ತೀನ್ ಮೂರ್ತಿ ಭವನದಲ್ಲಿ ಒಟ್ಟು 43 ಗ್ಯಾಲರಿಗಳಿವೆ. ಎರಡು ಕಟ್ಟಡಗಳ ಒಟ್ಟು ವಿಸ್ತೀರ್ಣ 15,619 ಚದರ ಮೀಟರ್. ಹೊಸದಾಗಿ ನಿರ್ಮಾಣವಾಗಿರುವ ವಸ್ತು ಸಂಗ್ರಹಾಲಯವನ್ನು ₹306 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ನೆಹರೂ ನೆಲೆಸಿದ್ದ ತೀನ್ ಮೂರ್ತಿ ಭವನವನ್ನು ಬ್ಲಾಕ್ 1 ಎಂದು ಹೆಸರಿಸಲಾಗಿದೆ. ಹೊಸ ಕಟ್ಟಡಕ್ಕೆ ಬ್ಲಾಕ್ 2 ಎಂದು ಹೆಸರಿಡಲಾಗಿದೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ, ಭಾರತದ ಪ್ರಧಾನಮಂತ್ರಿ ತೀನ್ ಮೂರ್ತಿ ಭವನದಲ್ಲಿ ನೆಲೆಸಬೇಕೆಂದು ನಿರ್ಧರಿಸಲಾಯಿತು. ನೆಹರೂ ಅವರು ಪ್ರಧಾನಿಯಾಗಿದ್ದ 16 ವರ್ಷಗಳ ಕಾಲವೂ ಇದೇ ಮನೆಯಲ್ಲಿ ವಾಸವಾಗಿದ್ದರು. ಸ್ವಾತಂತ್ರ್ಯದ ನಂತರದ ನವ ಭಾರತ ನಿರ್ಮಾಣಕ್ಕೆ ಈ ಮನೆಯಲ್ಲೇ ನೆಹರೂ ಕನಸು ಕಂಡರು. ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿದರು.


ತೀನ್ ಮೂರ್ತಿ ಭವನದೊಳಗೆ ನೆಹರೂ ಅವರ ಕೋಣೆ

1947ರಿಂದ ಭಾರತ ಬೆಳೆದುಬಂದ ಚಿತ್ರಣವನ್ನು ಪ್ರಧಾನಮಂತ್ರಿ ವಸ್ತುಸಂಗ್ರಹಾಲಯವು ತೋರಿಸುತ್ತಿದೆ. ಎಲ್ಲ ಮಾಜಿ ಪ್ರಧಾನಿಗಳ ಸಾಧನೆಗಳ ಕುರಿತ ವಿವರಗಳು ಗ್ಯಾಲರಿಯಲ್ಲಿವೆ. ಉದಯಿಸುತ್ತಿರುವ ಭಾರತ, ಅದರ ನಾಯಕರಿಂದ ಆಕಾರ ಪಡೆದ ಹಾಗೂ ರೂಪುಗೊಂಡ ಕಥೆಯ ಸ್ಫೂರ್ತಿಯೊಂದಿಗೆ ಮ್ಯೂಸಿಯಂ ಕಟ್ಟಡವನ್ನು ವಿನ್ಯಾಸ ಮಾಡಲಾಗಿದೆ. ದೇಶ ಮತ್ತು ಪ್ರಜಾಪ್ರಭುತ್ವವನ್ನು ಬಿಂಬಿಸುವ ಚಕ್ರವನ್ನು ಹಿಡಿದ ಜನರ ಕೈಗಳನ್ನು ಕಟ್ಟಡದ ಚಿಹ್ನೆ ಸಂಕೇತಿಸುತ್ತದೆ.

ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ ಸುಲಭವಾಗಿ ಮತ್ತು ಆಸಕ್ತಿಕರ ರೀತಿಯಲ್ಲಿ ಮಾಹಿತಿಗಳನ್ನು ನೀಡುವ ಪ್ರಯತ್ನವಾಗಿದೆ. ಇದಕ್ಕಾಗಿ ಹಾಲೋಗ್ರಾಮ್, ವರ್ಚ್ಯುವಲ್ ರಿಯಾಲಿಟಿ, ಬಹು ಸ್ಪರ್ಶ, ಬಹು-ಮಾಧ್ಯಮ, ಪ್ರತಿಕ್ರಿಯಾತ್ಮಕ ಕಿಯಾಸ್ಕ್, ಕಂಪ್ಯೂಟರೀಕೃತ ಕೈನೆಟಿಕ್ ಕೆತ್ತನೆಗಳು, ಸ್ಮಾರ್ಟ್‌ಫೋನ್ ಅಪ್ಲಿಕೇಷನ್‌ಗಳು, ಇಂಟರಾಕ್ಟೀವ್ ಪರದೆಗಳನ್ನು ಬಳಸಲಾಗಿದೆ.

ಹೊಸ ಕಟ್ಟಡದಲ್ಲಿ ಪ್ರಮುಖ ಆಕರ್ಷಣೆಯೆಂದರೆ, ಎಲ್ಲ ಪ್ರಧಾನಿಗಳ ಭಾವಚಿತ್ರ, ವಿವರ ನೀಡುವ ಬೃಹತ್ ಗ್ಯಾಲರಿ. ಇದರಲ್ಲಿ ಸಾಗುತ್ತಿದ್ದಂತೆ, ಅದು ನಿಮ್ಮನ್ನು ಹೊಸದೊಂದು ಲೋಕಕ್ಕೆ ಕರೆದೊಯ್ಯುತ್ತದೆ. ಮಾಜಿ ಪ್ರಧಾನ ಮಂತ್ರಿಗಳ ಭಾವಚಿತ್ರ ಹಾಗೂ ಸಾಧನೆಗಳ ವಿವರಗಳಿವೆ.

ಹೊಸ ಕಟ್ಟಡದಲ್ಲಿ ಮೊದಲಿಗೆ ಸಿಗುವುದು 1965ರಲ್ಲಿ ಪಾಕಿಸ್ತಾನದ ಜೊತೆಗಿನ ಯುದ್ಧದ ಸಂದರ್ಭದಲ್ಲಿ ದೇಶವನ್ನು ಮುನ್ನಡೆಸಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಗ್ಯಾಲರಿ. ಶಾಸ್ತ್ರಿ ಅವರ 'ಜೈ ಜವಾನ್ ಜೈ ಕಿಸಾನ್' ನೀತಿಯ ವಿವರಗಳು ಹಾಗೂ ಅವರು ಆಲ್ ಇಂಡಿಯಾ ರೇಡಿಯೊಗಾಗಿ ಮಾತನಾಡುತ್ತಿರುವ ಪ್ರತಿಕೃತಿಯನ್ನು ಕಾಣಬಹುದು. ನಮ್ಮೆದುರೇ ನಿಂತು ಅವರು ಮಾತನಾಡುತ್ತಿರುವಂತೆ ಅದನ್ನು ಕಟ್ಟಿ ಕೊಡಲಾಗಿದೆ.

ಇಂದಿರಾಗಾಂಧಿ ಅವರು 1971ರ ಯುದ್ಧದ ವೇಳೆ ತೆಗೆದುಕೊಂಡ ನಿರ್ಧಾರಗಳು, ಪೋಖ್ರಾನ್ 1 ಹಾಗೂ ಪಂಜಾಬ್ ಮತ್ತು ಅಸ್ಸಾಂನಲ್ಲಿನ ಅರಾಜಕತೆ, ತುರ್ತು ಪರಿಸ್ಥಿತಿಯ ಘೋಷಣೆ ಸಂದರ್ಭದ ದಾಖಲೆಗಳನ್ನು ಸಂಗ್ರಹಿಸಿಡಲಾಗಿದೆ. ಮೊರಾರ್ಜಿ ದೇಸಾಯಿ ಅವರ ವಿಭಾಗದಲ್ಲಿ ಜನತಾ ಮೋರ್ಚಾದ ಸ್ಥಾಪನೆ, ಶಾ ಆಯೋಗ ರಚನೆಯಲ್ಲಿ ಅವರ ಮುಂದಾಳತ್ವ, ಲೋಕಪಾಲ್ ಮಸೂದೆಯ ಮಂಡನೆಯ ಕುರಿತ ವಿವರಗಳಿವೆ. ಲೋಕಪಾಲ್ ಮಸೂದೆ ಕುರಿತ ಸಂಪೂರ್ಣ ಕಡತವನ್ನು ಸ್ಕ್ಯಾನ್ ಮಾಡಿದ ಪ್ರತಿಯಲ್ಲಿ ಪ್ರೊಜೆಕ್ಟರ್ ಮೂಲಕ ನೋಡುವ ಅವಕಾಶವನ್ನು ಕೂಡ ಇಲ್ಲಿ ಕಲ್ಪಿಸಲಾಗಿದೆ.

ಅಟಲ್ ಬಿಹಾರಿ ವಾಜಪೇಯಿ ಅವರ ಗ್ಯಾಲರಿಯಲ್ಲಿ ಆಪರೇಷನ್ ಶಕ್ತಿ, ಲಾಹೋರ್‌ಗೆ ಬಸ್ ಯಾತ್ರೆ, ಅವರ ಕಾಲದಲ್ಲಿನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗಳ ಕುರಿತ ಸಾಧನೆಗಳನ್ನು ವಿವರಿಸಲಾಗಿದೆ. ಮನಮೋಹನ್ ಸಿಂಗ್ ಗ್ಯಾಲರಿಯಲ್ಲಿ, ಅವರ ಕಾಲದಲ್ಲಿ ಜಾರಿಗೆ ತಂದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಆಂಧ್ರ ಪ್ರದೇಶದ ಪುನರ್ ರಚನೆ ಹಾಗೂ ಭಾರತ- ಅಮೆರಿಕ ಅಣು ಒಪ್ಪಂದದ ವಿವರಗಳಿವೆ.

ರಾಜೀವ್ ಗಾಂಧಿ ಗ್ಯಾಲರಿಯಲ್ಲಿ ಕಂಪ್ಯೂಟರ್ ಹಾಗೂ ದೂರ ಸಂಪರ್ಕ ಕ್ಷೇತ್ರದಲ್ಲಿನ ಸಾಧನೆಗಳು, ಬೋಫೋರ್ಸ್ ವಿವಾದ ಮತ್ತು ಪಂಜಾಬ್, ಅಸ್ಸಾಂ ಮತ್ತು ಮಿಜೋ ಶಾಂತಿ ಒಪ್ಪಂದಗಳ ಬಗ್ಗೆ ಮಾಹಿತಿಗಳಿವೆ. ಕಿರು ಅವಧಿಗೆ ಪ್ರಧಾನಿಗಳಾಗಿದ್ದ ಎಚ್.ಡಿ. ದೇವೇಗೌಡ, ಇಂದ್ರಕುಮಾರ್ ಗುಜ್ರಾಲ್, ಚಂದ್ರಶೇಖರ್, ಚರಣ್ ಸಿಂಗ್ ಅವರ ಕುರಿತ ವಿವರಗಳೂ ಇಲ್ಲಿವೆ. ಇದನ್ನೆಲ್ಲ ನೋಡಿಕೊಂಡು ಹೊರಕ್ಕೆ ಬರುವಾಗ ಸಂಜೆಯಾಗಿರುತ್ತದೆ. ಮ್ಯೂಸಿಯಂ ಹೊರಗೆ ಜನರ ಸಮೀಪದಲ್ಲೇ ಅಡ್ಡಾಡುವ ನವಿಲುಗಳು ಮನಕ್ಕೆ ಮುದ ನೀಡುತ್ತವೆ.

ಮೊದಲ ಓದು

ಮಧುಬಾಲ: ಘನತೆಯ ಜೀವನಕಥನ



ಮಧುಬಾಲ
ಲೇ: ರಮೇಶ ಅರೋಲಿ
ಪ್ರ: ಸಂಗಾತ ಪುಸ್ತಕ
ಸಂ: 9341757653
ಪು: 136 ₹170

ಹಿಂದಿ ಚಿತ್ರರಂಗ ರಸಿಕರೆದೆಯಲ್ಲಿ ಅಚ್ಚಳಿಯದಂತೆ ಹಾಕಿದ ಕೆಲವೇ ಸಹಿಗಳಲ್ಲಿ ಒಂದಕ್ಕೆ ಇರುವ ಹೆಸರು 'ಮಧುಬಾಲ'. ಸ್ವಾತಂತ್ರ್ಯಪೂರ್ವದಲ್ಲಿಯೇ ಹುಟ್ಟಿ, ಆಗಿನ್ನೂ ಬೆಳೆಯುತ್ತಿದ್ದ ಹಿಂದಿ ಚಿತ್ರರಂಗದಲ್ಲಿ ಉಜ್ವಲವಾಗಿ ಬೆಳಗಿದ ಅಸಾಧಾರಣ ಚೆಲುವಿನ ಖನಿ, ಅಸೀಮ ಪ್ರತಿಭೆಯ ಬನಿ ಮಧುಬಾಲ. ಅವರ ಚೆಲುವಿನ ಚಹರೆಗಳಷ್ಟೇ ಅಲ್ಲ, ನಟನೆಯ ಪಾತ್ರಗಳು ಅಸಂಖ್ಯ ಅಭಿಮಾನಿಗಳ ಎದೆಯಲ್ಲಿ ಇಂದಿಗೂ ಜೀವಂತಿಕೆಯಿಂದ ನಳನಳಿಸುತ್ತಿವೆ. ಬದುಕಿದ ಮೂವತ್ತಾರು ವರ್ಷಗಳಲ್ಲಿ, ಬಣ್ಣದ ಲೋಕದಲ್ಲಿ ಕಳೆದ ಇಪ್ಪತ್ತೆರಡು ವರ್ಷಗಳಲ್ಲಿ, ನಟಿಸಿದ ಎಪ್ಪತ್ತೆರಡು ಸಿನಿಮಾಗಳಲ್ಲಿ ಅವರು ಕೊಟ್ಟಿದ್ದು, ಬಿಟ್ಟುಹೋಗಿದ್ದು ಮಾತ್ರ ಅಗಾಧವಾದದ್ದು. ಹಲವು ಕಥೆಗಳನ್ನು ತೆರೆಯ ಮೇಲೆ ತೆರೆದಿಟ್ಟ ಈ ನಟಿಯ ಬದುಕಿನ ಕಥೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಕವಿ ರಮೇಶ ಅರೋಲಿ, 'ಮಧುಬಾಲ: ಬೆಳ್ಳಿಪರದೆಗೆ ಕಾಲ ಬರೆದ ಕಾಗದ' ಎಂಬ ಕೃತಿಯಲ್ಲಿ ಮಾಡಿದ್ದಾರೆ.

ಇದು ಮಧುಬಾಲ ಅವರ ಜೀವನಚರಿತ್ರೆಯಲ್ಲ. ಜೀವನಚರಿತ್ರೆಯನ್ನು ಇಡಿಯಾಗಿ ಕಟ್ಟಿಕೊಡುವಷ್ಟು ಮಾಹಿತಿಯೂ ಲಭ್ಯವಿಲ್ಲ. ಹಲವು ಮೂಲಗಳಿಂದ ಸಿಕ್ಕ ಮಾಹಿತಿಯ ಮೂಲಕ ಮಧುಬಾಲಳ ಬದುಕಿನ ಬಿಡಿ ಚಿತ್ರಗಳನ್ನು ನಮ್ಮ ಮುಂದಿಡುವ ಪ್ರಯತ್ನವನ್ನು ರಮೇಶ ಮಾಡಿದ್ದಾರೆ. ಅಜ್ಜ ಪೆದ್ದಿಂಟಿ ಪೆದ್ದ ಹನುಮಂತಪ್ಪ ಅವರು ಹೇಳಿದ ಕಥೆಗಳಿಂದ ಹಿಡಿದು, ಹಲವು ಪುಸ್ತಕಗಳು, ಪತ್ರಿಕಾ ಸುದ್ದಿಗಳು ಹೀಗೆ ಬಗೆಬಗೆಯ ಮೂಲಗಳಿಂದ ತೆಗೆದುಕೊಂಡ ಮಾಹಿತಿಯ ಮೂಲಕ ಈ ಕೃತಿ ಜೀವತಳೆದಿದೆ. ಹಾಗೆಂದು ಸಿಕ್ಕ ಸುದ್ದಿಗಳನ್ನೆಲ್ಲ ನಿಜವೆಂದು ಗಾಳಿಸುದ್ದಿಗಳನ್ನು ತುರುಕಿಡುವ ತೆವಲಿನ ಬರವಣಿಗೆ ಇದಲ್ಲ. ಬದಲಿಗೆ ಪ್ರತಿಭಾವಂತ ನಟಿಯೊಬ್ಬಳ ಬದುಕು-ಚಿತ್ರಬದುಕಿನ ಪ್ರಯಾಣವನ್ನು ಅರಿತುಕೊಳ್ಳುವ ಕುತೂಹಲದಿಂದ ಹುಟ್ಟಿಕೊಂಡ ಕೃತಿ ಇದು. ಈ ಅರಿಕೊಳ್ಳುವಿಕೆಯಲ್ಲಿ ಆ ನಟಿಯ ಬದುಕಿನ ಘನತೆಗೆ ಮುಕ್ಕಾಗದಂತೆ ನೋಡಿಕೊಳ್ಳಬೇಕು ಎಂಬ ವಿವೇಕವೂ ಇಲ್ಲಿ ಎದ್ದು ಕಾಣಿಸುತ್ತದೆ.

ಈ ಕೃತಿ ಮಧುಬಾಲ ಅವರ ಬದುಕಿನ ವಿವರಗಳ ಮೇಲಷ್ಟೇ ರೂಪುಗೊಂಡಿಲ್ಲ. ಅವರು ನಟಿಸಿದ ಮುಖ್ಯ ಸಿನಿಮಾಗಳು, ಪ್ರಮುಖ ಹಾಡುಗಳನ್ನು ಉಲ್ಲೇಖಿಸಿ, ಅದನ್ನು ವಿಶ್ಲೇಷಿಸಿ, ಸಹನಟರ ಕುರಿತಾಗಿಯೂ ಚರ್ಚಿಸುತ್ತ ಅದರ ಮೂಲಕವೂ ಮಧುಬಾಲ ಅವರ ಬದುಕನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇಲ್ಲಿದೆ. ಜೊತೆಗೆ ಸೊಗಸಾದ ಫೋಟೊಗಳ ಸಾಂಗತ್ಯವೂ ಇದೆ. ಆದರೆ ಈ ಚಿತ್ರಗಳ ವಿನ್ಯಾಸವನ್ನು ಇನ್ನಷ್ಟು ಅಚ್ಚುಕಟ್ಟಾಗಿ ಮಾಡಬಹುದಿತ್ತು. ಅಧ್ಯಾಯವೊಂದರ ನಡುವಿನಲ್ಲಿಯೇ ನುಸುಳುವ ಎರಡು ಮೂರು ಪುಟಗಳ ಫೋಟೊಗ್ಯಾಲರಿ ಕೆಲವೊಮ್ಮೆ ಓದಿನ ಓಘಕ್ಕೆ ಅಡ್ಡಿಮಾಡುತ್ತದೆ. ಕೆಲವು ಕಡೆಗಳಲ್ಲಿ ಮಾಹಿತಿಯ ಪುನರಾವರ್ತನೆಯನ್ನೂ ತಪ್ಪಿಸಬಹುದಿತ್ತು.

ಅಮರ ಚಿತ್ರಗೀತೆಗಳ ಮೆಲುಕು



ಒಲವೆ ಜೀವನ ಸಾಕ್ಷಾತ್ಕಾರ
ಲೇ: ಡಾ.ಜಿ. ಪ್ರಶಾಂತ ನಾಯಕ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 9449886390
ಪು: 192 ₹160

ಕೆಲವೊಂದು ಹಾಡುಗಳೇ ಹಾಗೆ. ಬಗೆದಷ್ಟು ನೆನಪುಗಳು ಅದರಲ್ಲಡಗಿಕೊಂಡಿರುತ್ತವೆ. 'ಮೆಲ್ಲುಸಿರೇ...' ಎಂದರೆ 'ಸವಿಗಾನ'ವೊಂದು ಹಾಗೆಯೇ ಸ್ಮೃತಿಪಟಲದಲ್ಲಿ ಮೂಡುತ್ತದೆ. ಇಂಥ ಅಮರ ಚಿತ್ರಗೀತೆಗಳನ್ನು ಹೊತ್ತು ತಂದಿದೆ 'ಒಲವೆ ಜೀವನ ಸಾಕ್ಷಾತ್ಕಾರ'.

70–80ರ ದಶಕದ ಸಿನಿಮಾಗಳಲ್ಲಿ ಕಥೆಗೆ ಎಷ್ಟು ಪ್ರಾಮುಖ್ಯ ಇತ್ತೋ, ಅದರಲ್ಲಿರುವ ಗೀತೆಗಳಿಗೂ ಅಷ್ಟೇ ಆದ್ಯತೆ ಇತ್ತು. ಸಿನಿಮಾಗಳ ಯಶಸ್ಸೂ ಚಿತ್ರಗೀತೆಗಳ ಮೇಲೆ ನಿಂತಿದೆ ಎನ್ನುವ ಕಾಲವಿತ್ತು. ಹೀಗಾಗಿಯೇ ಗಂಭೀರವಾದ, ಅರ್ಥಪೂರ್ಣ ಸಾಹಿತ್ಯವನ್ನು ಅಂತಹ ಚಿತ್ರಗೀತೆಗಳಲ್ಲಿ ಕಾಣಬಹುದಾಗಿತ್ತು. ಚಿತ್ರಗೀತೆಗಳ ಸಾಹಿತ್ಯ ಅದೆಷ್ಟು ಆಳವಾಗಿತ್ತೆಂದರೆ ಪ್ರತೀ ಪದ, ವಾಕ್ಯಗಳಿಗೆ ಅರ್ಥ, ವ್ಯಾಖ್ಯಾನ ಪ್ರತೀ ಕ್ಷಣಕ್ಕೂ ವಿಭಿನ್ನ. ಇಂದಿಗೂ ಹಸಿರಾಗಿ ಈ ಕವಿತೆಗಳು ಉಸಿರಾಗಿರಲು ಇದೇ ಮುಖ್ಯ ಕಾರಣ. ಈ ಕೃತಿಯಲ್ಲಿ 1963ರಿಂದ 1983ರವರೆಗಿನ ಸಿನಿಮಾಗಳ ಒಟ್ಟು ಮೂವತ್ತು ಹಾಡುಗಳನ್ನಿಲ್ಲಿ ಆಯ್ಕೆಮಾಡಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಕೇವಲ ಹಾಡುಗಳನ್ನು ದಾಖಲಿಸದೆ, ಬಿಡಿ ಬಿಡಿಯಾಗಿ ಶಬ್ದ, ಪದ, ವಾಕ್ಯಗಳನ್ನು ವಿವರಿಸುವ ಪ್ರಯತ್ನವನ್ನೂ ಈ ಕೃತಿಯಲ್ಲಿ ಕಾಣಬಹುದು. ಸಂಪೂರ್ಣ ಗೀತೆಯನ್ನು ದಾಖಲಿಸಿದ ನಂತರ ಹಾಡಿನ ರಚನೆ ಮಾಡಿದವರು, ಗಾಯಕರು, ನಟರು ಯಾರು ಎಂಬ ಪುಟ್ಟ ವಿವರದೊಂದಿಗೆ ಆರಂಭವಾಗಿ ಪ್ರತೀ ಸಾಲಿನ ವ್ಯಾಖ್ಯಾನದೊಂದಿಗೆ ಒಂದೊಂದು ಅಧ್ಯಾಯ ಮುಂದುವರಿಯುತ್ತದೆ. ವಿಶೇಷ ಏನೆಂದರೆ ಇಲ್ಲಿರುವ ಎಲ್ಲ ಗೀತೆಗಳ ನಾಯಕ ನಟ ರಾಜ್‌ಕುಮಾರ್. ಈ ಆಯ್ಕೆ ಉದ್ದೇಶಪೂರ್ವಕವೂ ಹೌದು ಎಂದಿದ್ದಾರೆ ಲೇಖಕರು. 'ರಾಜ್‌ಕುಮಾರ್ ಅವರನ್ನು ಮರೆತು ಮಾತನಾಡಿದರೆ ಅಲ್ಲಿ ಸಮಗ್ರತೆಯ ನೋಟ ಸಾಧ್ಯವೇ ಇಲ್ಲ ಎನ್ನುವುದು ಒಂದು ವಿನಮ್ರ ತಿಳಿವಳಿಕೆ' ಎನ್ನುವ ಸ್ಪಷ್ಟನೆಯನ್ನು ಲೇಖಕರು ನೀಡಿದ್ದಾರೆ. ಆಯ್ಕೆ ಮಾಡಿಕೊಂಡ ಅವಧಿಯಲ್ಲಿನ ಎಲ್ಲ ಖ್ಯಾತ ಗೀತೆಗಳನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು ಎಂದು ಓದುಗನಿಗೆ ಅನಿಸಿದರೂ, ಲೇಖಕರ ವಿವೇಚನೆಗೆ ಅದು ಮೀಸಲು. ಒಂದಿಷ್ಟು ಅಮರ ಚಿತ್ರಗೀತೆಗಳನ್ನು ಮೆಲುಕು ಹಾಕಿಕೊಳ್ಳುವ ಅವಕಾಶವನ್ನು ಕೃತಿ ಒದಗಿಸಿದೆ.

ಅಮೃತಮಹೋತ್ಸವಕ್ಕೆ 'ಅಶೋಕಚಕ್ರ ಧ್ವಜ'

ಅವಲೋಕನ



ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ
ಲೇ: ಜಿ.ಪಿ. ರಾಜರತ್ನಂ
ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ
ಸಂ: 9900750549
ಪು: 104 ₹60

ಬರವಣಿಗೆ ಮತ್ತು ಸಾಹಿತ್ಯ ಪರಿಚಾರಿಕೆಯ ಮೂಲಕ ಕನ್ನಡ ಜಗತ್ತಿಗೆ ಗಣನೀಯ ಕೊಡುಗೆ ನೀಡಿದವರು ಜಿ.ಪಿ. ರಾಜರತ್ನಂ. ದೇಶದ ಉದ್ದಗಲವನ್ನೂ ರಾಷ್ಟ್ರಧ್ವಜದ ಬಣ್ಣಗಳು ಆವರಿಸಿಕೊಂಡಿರುವ 'ಅಮೃತ ಮಹೋತ್ಸವ'ದ ಸಂದರ್ಭದಲ್ಲಿ, ರಾಜರತ್ನಂ ಅವರ 'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಕೃತಿಯನ್ನು ಬಳ್ಳಾರಿಯ 'ಲೋಹಿಯಾ ಪ್ರಕಾಶನ' ಮರುಮುದ್ರಿಸಿದೆ. ಈ ಮೂಲಕ, ಸ್ವಾತಂತ್ರ್ಯ ಸಂಭ್ರಮವನ್ನು ತಾತ್ವಿಕವಾಗಿ ಕಟ್ಟಿಕೊಡುವ ಕೆಲಸವನ್ನು ಮಾಡಿದೆ.

ಕನ್ನಡದ 'ಮೇಷ್ಟ್ರು ಪರಂಪರೆ'ಯಲ್ಲಿ ರಾಜರತ್ನಂ ಅವರದು ಮೊದಲ ಪಂಕ್ತಿಯ ಹೆಸರು. ಅಶೋಕಚಕ್ರ ಧ್ವಜ ಕೃತಿ ರಚನೆಯ ಹಿನ್ನೆಲೆಯಲ್ಲಿ ರಾಷ್ಟ್ರಧ್ವಜ–ಲಾಂಛನಗಳ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸುವ ಅವರ ಪ್ರಯತ್ನದಲ್ಲೂ 'ಮೇಷ್ಟ್ರು ಪ್ರಜ್ಞೆ'ಯನ್ನು ಕಾಣಬಹುದು.

ರಾಷ್ಟ್ರಧ್ವಜ ಮತ್ತು ರಾಷ್ಟ್ರಲಾಂಛನಗಳ ಹಿನ್ನೆಲೆಯಲ್ಲಿನ ಆಶಯಗಳನ್ನು ಜನಸಾಮಾನ್ಯರಿಗೆ ಮನದಟ್ಟು ಮಾಡಿಸುವುದು ಈ ಕೃತಿಯ ಉದ್ದೇಶ. ಇದಿಷ್ಟೇ ಆಗಿದ್ದರೆ, ಈ ಪುಸ್ತಕ ಶೈಕ್ಷಣಿಕ ವಿವರಗಳ ಕೈಪಿಡಿಯಾಗಿ ಉಳಿಯುತ್ತಿತ್ತು. ರಾಷ್ಟ್ರಧ್ವಜ–ಲಾಂಛನಗಳ ಆಶಯಗಳನ್ನು ವಿವರಿಸುವ ನೆಪದಲ್ಲಿ, ಭಾರತದ ಬಹುತ್ವವನ್ನು ಸೂತ್ರರೂಪದಲ್ಲಿ ಹಿಡಿದಿಟ್ಟಿರುವ ಸಂಗತಿಗಳು ಯಾವುವು ಎನ್ನುವುದರ ವಿಶ್ಲೇಷಣೆ ಕೃತಿಯ ಮಹತ್ವವನ್ನು ಹೆಚ್ಚಿಸಿದೆ. ಆ ವಿಶ್ಲೇಷಣೆ, ಸಮಾಜದ ಬಗ್ಗೆ ಅಪಾರ ಕಾಳಜಿಯುಳ್ಳ ಮೇಷ್ಟ್ರೊಬ್ಬರು ತಮ್ಮ ಮಕ್ಕಳಿಗೆ ಹೇಳಿರುವ ಪ್ರೇಮದ ಪಾಠದಂತಿದೆ.

ರಾಜರತ್ನಂ ಕಣ್ಣಿಗೆ ಸ್ವತಂತ್ರ ಭಾರತ 'ಬುದ್ಧ ಭಾರತ'ವಾಗಿ ಹಾಗೂ ಬುದ್ಧ ತತ್ತ್ವಗಳನ್ನು ಜನಜೀವನದ ಭಾಗವಾಗಿಸಲು ಶ್ರಮಿಸಿದ ಅಶೋಕ ಚಕ್ರವರ್ತಿಯ ಭಾರತವಾಗಿ ಕಂಡಿದೆ. ಶೋಕವಿಲ್ಲದ ಸಮಾಜವನ್ನು ರೂಪಿಸುವ ಹಂಬಲದ ಅಶೋಕನ ಆಶಯಗಳು ರಾಷ್ಟ್ರಧ್ವಜ ಮತ್ತು ಲಾಂಛನದಲ್ಲಿ ಅನುರಣಿಸುತ್ತಿರುವುದನ್ನು ರಾಜರತ್ನಂ ವಿವರವಾಗಿ ಚಿತ್ರಿಸಿದ್ದಾರೆ. ರಾಜರತ್ನಂ ಅವರ ಬರವಣಿಗೆಯಷ್ಟೇ ಪುಸ್ತಕದಲ್ಲಿ ಬಳಸಿಕೊಂಡಿರುವ ರೇಖಾಚಿತ್ರಗಳೂ ಚೆಲುವಾಗಿವೆ.

'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಕೃತಿ ಓದುಗರಿಗೆ ರಾಷ್ಟ್ರಧ್ವಜ–ಲಾಂಛನದ ಬಗ್ಗೆ ಅಭಿಮಾನ ಹಾಗೂ ಅರಿವು ಮೂಡಿಸುವ ಕೆಲಸವನ್ನಷ್ಟೇ ಮಾಡುವುದಿಲ್ಲ; ಬಹುತ್ವ ಭಾರತದ ಸೌಂದರ್ಯ ಹಾಗೂ ಸ್ವತಂತ್ರ ಭಾರತದ ಮನೋಧರ್ಮ ಯಾವುದಾಗಿರಬೇಕು ಎನ್ನುವುದನ್ನು ಮನದಟ್ಟು ಮಾಡಿಸುತ್ತದೆ. ಸ್ವತಂತ್ರ ಭಾರತಕ್ಕೆ ಎಪ್ಪತ್ತೈದು ವರ್ಷಗಳು ತುಂಬಿರುವ ಸಂದರ್ಭದಲ್ಲಿ, 'ಅಮೃತ ಮಹೋತ್ಸವ' ಪಯಣವನ್ನು ಪರಿಶೀಲಿಸುವುದು ಹೇಗೆ ಎನ್ನುವ ವಿಮರ್ಶಾತ್ಮಕ ನೋಟವೂ ಈ ಕೃತಿಯಿಂದ ದೊರೆಯುತ್ತದೆ. ರಾಷ್ಟ್ರೀಯ ಲಾಂಛನಗಳ ಆಶಯಗಳಿಗೆ ವಿರುದ್ಧವಾದ ಪರಿಕಲ್ಪನೆಯೊಂದು ದೇಶಪ್ರೇಮದ ಹೆಸರಿನಲ್ಲಿ ರೂಪುಗೊಂಡಿದೆಯೇ ಎನ್ನುವುದರ ಅವಲೋಕನಕ್ಕೂ ಕೃತಿ ಒತ್ತಾಯಿಸುತ್ತದೆ.

1948ರ ಜುಲೈ 22ರಂದು ಮೊದಲ ಆವೃತ್ತಿಯಾಗಿ ಪ್ರಕಟಣೆಗೊಂಡ ಕೃತಿ ಈಗ ಎಪ್ಪತ್ತೈದು ವರ್ಷಗಳ ನಂತರ ಸಹೃದಯರಿಗೆ ತಲುಪಿಸುವ ಕೆಲಸವನ್ನು ಲೋಹಿಯಾ ಪ್ರಕಾಶನ ಮಾಡಿದೆ. ಅಶೋಕಚಕ್ರ ಧ್ವಜ ಕೃತಿಯ ಬಗ್ಗೆ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಬರಹವೊಂದು ಪ್ರಕಟವಾಗಿತ್ತು. ಆ ಬರಹವನ್ನು ಓದಿ, ಪುಸ್ತಕ ಹುಡುಕಿ ಓದಿರುವ 'ಲೋಹಿಯಾ ಪ್ರಕಾಶನ'ದ ಚನ್ನಬಸವಣ್ಣ, ಈ ಪುಸ್ತಕ ಕನ್ನಡದ ಈ ತಲೆಮಾರಿಗೆ ಅಗತ್ಯವೆಂದು ಮನಗಂಡು ಮರುಮುದ್ರಿಸಿದ್ದಾರೆ. ಅಮೃತ ಮಹೋತ್ಸವ ಸಂದರ್ಭದಲ್ಲಿದು ಕನ್ನಡದ ಓದುಗರಿಗೆ, ವಿಶೇಷವಾಗಿ ವಿದ್ಯಾರ್ಥಿಗಳಿಗೆ ದೊರೆತಿರುವ ಉಡುಗೊರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಎರಡು ಅರ್ಥಗಳ ಪದಗಳಿಗೆ ಒಂದು ಅರ್ಥ ಕೊಡಲಾಗಿದೆ. ಇನ್ನೊಂದು ಅರ್ಥ ಹೊಂದಿಸಿ

1.	ದೊರೆ	=	1. ಸಿಗು	A.	ನದಿ
2.	ಹೆಸರು	=	1. ನಾಮ	B.	ಸಾಯು
3.	ಕರಿ	=	1. ಆನೆ	C.	ಬಾಗು
4.	ಕಾಡು	=	1. ಅರಣ್ಯ	D.	ಪ್ರವಹಿಸು
5.	ಹರಿ	=	1. ವಿಷ್ಣು	E.	ಅನ್ನದೊಂದಿಗೆ ಬಳಸುವ ವ್ಯಂಜನ ಪದಾರ್ಥ
6.	ಮಣಿ	=	1. ಮುತ್ತು	F.	ಅರಸ
7.	ಸಾರು	=	1. ಹೇಳು	G.	ಪೀಡಿಸು
8.	ಹೊಳೆ	=	1. ಮಿಂಚು	H.	ಒಂದು ಧಾನ್ಯ
9.	ಕಳೆ	=	1. ಕಸ	I.	ಕಪ್ಪು
10.	ಮಡಿ	=	1. ರೇಷ್ಮೆ ಸೀರೆ	J.	ಹುಮ್ಮಸ್ಸು

B. ಇಲ್ಲಿ ಕೊಟ್ಟಿರುವ ಪದಗಳಿಗೆ ಅರ್ಥ ಹೊಂದಿಸಿರಿ

1.	ಗಡೆ	A.	ಚಲಿಸು
2.	ಜರಿ	B.	ಒಡೆಯ
3.	ಡುಮುಕಿ	C.	ಕೊಳ
4.	ಜಖಂ	D.	ನಪಾಸಾಗುವುದು
5.	ಗುಣ	E.	ನಷ್ಟ
6.	ಗೀಳು	F.	ನಡತೆ
7.	ಕಾಸು	G.	ಬಾವಿಯ ರಾಟೆ
8.	ಕೇಣಿ	H.	ಹಿಂಜರಿ
9.	ದಾತ	I.	ಬಿಸಿ ಮಾಡು
10.	ನಡೆ	J.	ಚಟ

ಅಕ್ಷರ ಆಟ

ಇಲ್ಲಿ ಕೊಟ್ಟಿರುವ 'ರಳು' ಅಕ್ಷರಗಳ ಹಿಂದೆ ಒಂದು ಅಕ್ಷರ ಸೇರಿಸಿ ಅರ್ಥಬದ್ಧ ಪದ ಮಾಡಿ

1. __ ರಳು
2. __ ರಳು
3. __ ರಳು
4. __ ರಳು
5. __ ರಳು
6. __ ರಳು
7. __ ರಳು
8. __ ರಳು
9. __ ರಳು
10. __ ರಳು
11. __ ರಳು
12. __ ರಳು
13. __ ರಳು

ಅದಲು ಬದಲು ಕಂಚಿ ಕದಲು

1. ನಕುಲ ಮಾವ ________
2. ಕುಕ್ಕಿ ಅಟ್ಟು ________
3. ಪ್ರತಿಗರಿ ತೋಸು ________
4. ಕಾಡಿದಾ ನರಿ ________

ದಶ್ಯ ಚಿತ್ರಕೀರ್ತಿ ಶ್ರೇಷ್ಠ ಕಥೆಯ — ಚಾರ್ಲಿ ಚಾಪ್ಲಿನ್

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಚಾರ್ಲಿ ಚಾಪ್ಲಿನ್ ಚಲನಚಿತ್ರದ ಜಗತ್ತು ಕಂಡ ಮಹಾನ್ ನಟ, ನಿರ್ದೇಶಕ, ನಿರ್ಮಾಪಕ ಮತ್ತು ಸಂಭಾಷಣೆಕಾರ. ಚಾಪ್ಲಿನ್ ನಟಿಸಿದ ಹಾಸ್ಯ ಪಾತ್ರಗಳಲ್ಲಿ, ಅವುಗಳ ಅಂತರಾಳದಲ್ಲಿದ್ದ ವಿಷಾದ, ಸಂದೇಶಗಳು ಅದ್ಭುತವಾದವು

ಚಾಪ್ಲಿನ್ ಹುಟ್ಟಿದ್ದು ಲಂಡನ್‌ನ ವಾಲ್ವರ್ತ್‌ನಲ್ಲಿ. 'ದಿ ಟ್ರಂಪ್', 'ಮಾಡರ್ನ್ ಟೈಮ್ಸ್', 'ದಿ ಗ್ರೇಟ್ ಡಿಕ್ಟೇಟರ್', 'ಸಿಟಿ ಲೈಟ್ಸ್', 'ದಿ ಸರ್ಕಸ್', 'ಗೋಲ್ಡ್ ರಷ್' ಅವನು ಅಭಿನಯಿಸಿದ, ಜನರ ನೆನಪಿನಲ್ಲಿರುವ ಪ್ರಮುಖ ಚಿತ್ರಗಳು

ಕಿತ್ತು ಹೋದ ಶೂ, ಹಳೆ ಕೋಟು, ಟೋಪಿ, ಕಾಲಿಗೆ ಚಕ್ರ ಕಟ್ಟಿಕೊಂಡು ಚಿನಕುರುಳಿಯಂತೆ ಅಡ್ಡಾಡುವುದು, ಚೇಷ್ಟೆ, ವಿಚಿತ್ರ ಮುಖಭಾವ ಇವು ಚಾಪ್ಲಿನ್ ಸಿನಿಮಾಗಳಲ್ಲಿ ನಗೆಯುಕ್ಕಿಸುವ ದೃಶ್ಯಗಳು. ಇದು 'ಸಿಟಿ ಲೈಟ್ಸ್' ಚಿತ್ರದಲ್ಲಿ ಚಾಪ್ಲಿನ್ ಕಣ್ಣಿಲ್ಲದ ಹೂವು ಮಾರುವ ಹುಡುಗಿಗೆ ಸಹಾಯ ಮಾಡುವ ದೃಶ್ಯ

ಬಡತನ, ನೋವು ಅದರೊಳಗಿನ ನಲಿವನ್ನೂ ಸಮರ್ಥವಾಗಿ ಕಟ್ಟಿಕೊಟ್ಟ ಚಾಪ್ಲಿನ್, ಸುಮಾರು 88 ವರ್ಷ ಬದುಕಿದ. ಈ ದೃಶ್ಯ 'ಎ ಡಾಗ್ಸ್ ಲೈಫ್' ಚಿತ್ರದ್ದು. ನಗುವನ್ನು, ಬದುಕಿನ ಅರ್ಥವನ್ನು ಸಾಮಾನ್ಯ ರೀತಿಯಲ್ಲಿ ಬಿಂಬಿಸಿದವ. 1977ರ ಡಿ. 25ರಂದು ಸ್ವಿಟ್ಜರ್ಲೆಂಡಿನಲ್ಲಿ ನಿಧನನಾದ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರಕ್ಕೆ 2ರ ಮಗ್ಗಿ ಸಾಕು

23	x	34
11		68
5		136
2		272
1		544

(ಚಿತ್ರ 1)

23	x	34
11		68
5		136
2		272
1		544
		782

(ಚಿತ್ರ 2)

23x34 ಅಡ್ಡಲಾಗಿ ಹಚ್ಚಿಕೊಳ್ಳಿ. ಎಡಭಾಗದ ಸಂಖ್ಯೆಯನ್ನು 2ರಿಂದ ಭಾಗಿಸುತ್ತಾ ಹೋಗಿ. ಅದರ ಅರ್ಧ 2ರಿಂದ ಕಡತ ಹೊಡೆಯುತ್ತಾ ಹೋಗಿರಿ. ಉಳಿಯುವ ಶೇಷವನ್ನು ಬಿಡುತ್ತಾ ಹೋಗಿ. ಹಾಗೇ ಮುಂದುವರಿದು 1 ಬರುವವರೆಗೂ ಸಾಗಿರಿ. ಈಗ ಬಲಭಾಗದ ಸಂಖ್ಯೆಯನ್ನು ಅಂದರೆ 34ನ್ನು 2ರಿಂದ ಗುಣಿಸಿರಿ. ಬಂದ ಉತ್ತರವನ್ನು ಮತ್ತೆ 2ರಿಂದ ಗುಣಿಸಿರಿ. ಹೀಗೆ ಎಡಭಾಗದ ಸಂಖ್ಯೆಗೆ ಸಮನಾಗುವಷ್ಟು ಸಾರಿ (ಅಂದರೆ 1ರವರೆಗೆ) ಗುಣಿಸಿರಿ. ಈಗ ಚಿತ್ರ 2ರಲ್ಲಿರುವಂತೆ 2 ಭಾಗದಲ್ಲಿರುವ ಸಮ ಸಂಖ್ಯೆಗುಂಟ ಬಲಭಾಗದ ಸಂಖ್ಯೆಯನ್ನು ಕಾಟು ಹೊಡೆಯಿರಿ. ಅಂದರೆ ಎಡಭಾಗದಲ್ಲಿ 2 ಮಾತ್ರ ಸಮಸಂಖ್ಯೆಯನ್ನು ಕಾಟು ಹೊಡೆದು ಬಲಭಾಗದ ಉಳಿದ ಸಂಖ್ಯೆಗಳನ್ನು ಕೂಡಿಸಿರಿ. ಉತ್ತರ 782 ಬರುತ್ತದೆ. ಮೂಲ ಕ್ರಮದಂತೆ ಗುಣಿಸಿ ಉತ್ತರ ಖಾತ್ರಿ ಮಾಡಿಕೊಳ್ಳಿ. ಹೀಗೆ ಎಷ್ಟು ದೊಡ್ಡ ಸಂಖ್ಯೆ ಇದ್ದರೂ ಕೇವಲ 2ರ ಮಗ್ಗಿಯ ಸಹಾಯದಿಂದ ಲೆಕ್ಕ ಮಾಡಬಹುದು.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಗ	ರ	ಸುಳಿವು
1			ಬೆಟ್ಟ
2			ಧ್ಯೇಯ
3			ರೇಖೆ
4			ರೆಕ್ಕೆ
5			ಒಂದು ಹಣ್ಣು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ -20 ಮ್ಯಾಚ್

1-D	2- F	3-B	4-C	5-E
6-A	7-K	8-I	9-L	10-J
11-H	12-G	13-Q	14-R	15-O
16-P	17-N	18-M	19-T	20-S

ಕ್ವಿಜ್ ಇಂಡಿಯಾ ಉತ್ತರಗಳು

1. 1982	2. 2 ವರ್ಷ
3. ಪಶ್ಚಿಮ ಬಂಗಾಳ	4. 35 ವರ್ಷ
5. ಡಬ್ಲ್ಯೂ.ಸಿ. ಬ್ಯಾನರ್ಜಿ	6. 5 ವರ್ಷ
7. 1935	8. ಸಮಾನತೆ
9. 1914	10. ಮಧ್ಯಪ್ರದೇಶ

ಯಕ್ಷಲೋಕ @ ಆನ್‌ಲೈನ್

ಕೊರೊನಾ ಕಾಲದಲ್ಲಿ ವ್ಯವಸ್ಥಿತ ರೂಪ ಪಡೆದ ಆನ್‌ಲೈನ್ ಯಕ್ಷಗಾನ ಕಲಿಕೆ ಕೊರೊನೋತ್ತರ ಕಾಲದಲ್ಲಿ ವೃತ್ತಿಪರ ಎಂಬ ಹಂತಕ್ಕೆ ತಲುಪಿದೆ. ಕಂಪ್ಯೂಟರ್ ಮುಂದೆ ಕುಳಿತು ಅಥವಾ ಮೊಬೈಲ್ ಫೋನ್ ಕೈಯಲ್ಲಿ ಹಿಡಿದು ತಾಳ-ಹಾವ-ಭಾವ-ನಾಟ್ಯವನ್ನು ಕಲಿತ ಅನೇಕರು ವಿವಿಧ ಮೇಳಗಳಲ್ಲಿ ವೇಷ ತೊಡುವಷ್ಟು ಪ್ರಾವೀಣ್ಯ ಮತ್ತು ಸ್ಥೈರ್ಯ ಗಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಭಾಗವತಿಕೆ ಕಲಿತು ವೇಷಗಾರಿಕೆಯಲ್ಲೂ ಪಳಗಿದ ಸ್ಮಿತಾ

ವಿಕ್ರಂ ಕಾಂತಿಕೆರೆ

ಚಂಡೆ-ಮದ್ದಳೆಯ ಸೊಗಸು ಹಿನ್ನೆಲೆಯಲ್ಲಿ ಮೇಳೈಸುತ್ತಿತ್ತು. ಸುಧನ್ವಾರ್ಜುನ ಕಥಾಮೃತ ಪ್ರಮುಖ ಘಟ್ಟ ತಲುಪಿತ್ತು. ಬೆಂಗಳೂರಿನ ಬಡಾವಣೆಯೊಂದರ ಫ್ಲ್ಯಾಟ್‌ನ ಟೆರೇಸ್ ಮೇಲೆ ಹೂಕುಂಡಗಳ ನಡುವೆ ನಿಂತಿದ್ದ ಸುಧನ್ವನು ಅತ್ಯುತ್ಸಾಹದಲ್ಲಿದ್ದ. ಅತ್ತ ಉಡುಪಿಯ ಮನೆಯೊಂದರ ಕೋಣೆಯಲ್ಲಿ ನಿಂತಿದ್ದ ಅರ್ಜುನ ಛಲ ಬಿಡದೆ ಕಾಯುತ್ತಿದ್ದ. ಮಂಗಳೂರಿನ ಮನೆಯ ಮಹಡಿ ಮೇಲೆ, ಡಿಟಿಎಚ್‌ನ ಡಿಶ್‌ಗಳ ನಡುವೆ ನಿಂತಿದ್ದ ಸುಧನ್ವನೂ ಹೋರಾಟದ ಹುರುಪಿನಲ್ಲಿದ್ದ. ಅಮೆರಿಕದ ಮಹಾನಗರದ ಡ್ರಾಯಿಂಗ್ ರೂಂನಲ್ಲಿದ್ದ ಅರ್ಜುನನೂ ಚಿಕ್ಕಮಗಳೂರು, ಮೈಸೂರು ಮತ್ತು ಇತರ ನಗರಗಳಲ್ಲಿದ್ದ ಸುಧನ್ವರೂ ಯುದ್ಧಕ್ಕೆ ಸನ್ನದ್ಧರಾಗಿದ್ದರು.



ಆನ್‌ಲೈನ್‌ನಲ್ಲಿ ಕಲಿತ ಪಾಠ... ಮದ್ದಳೆಯಲ್ಲಿ ರಫೀಕುದ್ದೀನ್

ಪಾರ್ಥ-ಸುಧನ್ವರ ಮುಖಾಮುಖಿಯ ಈ ಸನ್ನಿವೇಶದಲ್ಲಿ ರೋಷಾವೇಶದಲ್ಲಿದ್ದ ಸುಧನ್ವನ ಧ್ವನಿ ಜೋರಾಗಿ ಮೊಳಗುತ್ತಿತ್ತು. ಪಾರ್ಥನತ್ತ ನೋಡುತ್ತ ಎದೆಸೆಟೆದು ನಿಂತಿದ್ದ ಆತ 'ಪಾರ್ಥ, ಇನ್ನೇಕೆ ತಡ ತೊಡು ಬಾಣ ಎನ್ನುತ್ತಿದ್ದಂತೆ ಆ ಧ್ವನಿ ಬೆಂಗಳೂರಿನಿಂದಲೂ ಮಂಗಳೂರಿನಿಂದಲೂ ಉಡುಪಿಯಿಂದಲೂ ವಿದೇಶದಿಂದಲೂ ಪ್ರತಿಧ್ವನಿಸಿದಂತಾಯಿತು. ಹೂಡು ಶರ, ತೊಡು ಶರ, ಹೂಡು ಬಾಣ....' ಎಂಬ ಸವಾಲು ಎಲ್ಲ ಕಡೆಯಿಂದ ಕೇಳಿತು. ಕಂಪ್ಯೂಟರ್ ಪರದೆಯ ಮೇಲೆ ಇಡೀ ಪ್ರಸಂಗ ವಿಜೃಂಭಿಸಿತು. ಗುರುವಿನ ಮುಖದಲ್ಲಿ ಮುಗುಳು ನಗೆ ಮೂಡಿತು.

ಇದು ಒಂದು ಪ್ರಸಂಗ. ಇಂಥ ಹತ್ತಾರು ಪ್ರಸಂಗಗಳು ಆನ್‌ಲೈನ್‌ನಲ್ಲೇ ಸೃಷ್ಟಿಯಾಗಿ, ನೂರಾರು ಕಲಾವಿದರು ಬೆಳಕಿಗೆ ಬರುತ್ತಾರೆ, ಆನ್‌ಲೈನ್ ಯಕ್ಷಗಾನ ಕಲಿಕೆಯ ಮಹಿಮೆಯಿಂದ.

ಕೊರೊನಾ ಕಾಲದಲ್ಲಿ ವ್ಯವಸ್ಥಿತ ರೂಪ ಪಡೆದ ಆನ್‌ಲೈನ್ ಯಕ್ಷಗಾನ ಕಲಿಕೆ ಕೊರೋನೋತ್ತರ ಕಾಲದಲ್ಲಿ ವೃತ್ತಿಪರ ಎಂಬ ಹಂತಕ್ಕೆ ತಲುಪಿದೆ. ಕಂಪ್ಯೂಟರ್ ಮುಂದೆ ಕುಳಿತು ಅಥವಾ ಮೊಬೈಲ್ ಫೋನ್ ಕೈಯಲ್ಲಿ ಹಿಡಿದು ತಾಳ-ಹಾವ-ಭಾವ-ನಾಟ್ಯವನ್ನು ಕಲಿತ ಅನೇಕರು ವಿವಿಧ ಮೇಳಗಳಲ್ಲಿ ವೇಷ ತೊಡುವಷ್ಟು ಪ್ರಾವೀಣ್ಯ ಮತ್ತು ಸ್ಥೈರ್ಯ ಗಳಿಸಿದ್ದಾರೆ. ಮೊದಲು ಬಾಯಿಗೆ, ಅಲ್ಲಿಂದ ಕೈಗೆ, ನಂತರ ಕಾಲಿಗೆ ಎಂಬ ಧ್ಯೇಯವಾಕ್ಯದೊಂದಿಗೆ ಕಲಿತು ಕಲಾವಿದರಾದ ಅನೇಕರು ಆನ್‌ಲೈನ್ ಕಲಿಕೆಯ ಸ್ವಾದವನ್ನು ಅನುಭವಿಸಿ ಧನ್ಯರಾಗಿದ್ದಾರೆ.

ತಾಂ..ತತ್ತ ತತ್ತ...ತಾಂ...ತತ್ತ ತಾಂ; ತಿತ್ತಿಥೈ...ತಕಧಿಮಿ ತಕಜಣು... ಮುಂತಾದ ತಾಳಗಣನೆಯ ಪಾಠದಿಂದ 'ಧಿಗಿಣ' ಸುತ್ತುವ ವರೆಗೂ ಆರು ತಿಂಗಳ ಪ್ರಾಥಮಿಕ ಪಾಠ ಆನ್‌ಲೈನ್ ಯಕ್ಷಗಾನ ಅಭ್ಯಾಸದಲ್ಲಿ ಇರುತ್ತದೆ. ನಂತರ ಪ್ರಸಂಗ ಅಭ್ಯಾಸ ನಡೆಯುತ್ತದೆ. ಪ್ರಸಾದ್ ಚೇರ್ಕಾಡಿ, ಸತೀಶ್ ಅಗ್ವಾಲ, ಸುಷ್ಮಾ ಮಯ್ಯ, ಪ್ರಿಯಾಂಕಾ ಮೋಹನ್ ಮುಂತಾದವರು ಆನ್‌ಲೈನ್ ಪಾಠ ಮಾಡುವುದರಲ್ಲಿ ಸಕ್ರಿಯರಾಗಿದ್ದಾರೆ. ವಿದೇಶದಲ್ಲಿ ಉದ್ಯೋಗದಲ್ಲಿರುವವರು, ದೇಶದ ನಾನಾ ಭಾಗಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರು ಮಾತ್ರವಲ್ಲದೆ, ಯಕ್ಷಗಾನದ ಬಗ್ಗೆ ಕೇವಲ ಕೇಳಿರುವವರು ಮತ್ತು ಆ ಕಲೆಯನ್ನು ನೋಡಿಯೇ ಗೊತ್ತಿಲ್ಲದವರು ಕೂಡ ಆನ್‌ಲೈನ್ ಪಾಠ ಕೇಳಲು ಆಸಕ್ತಿ ವಹಿಸುತ್ತಿದ್ದಾರೆ. ಕೆಲವರು ಆನ್‌ಲೈನ್‌ನಲ್ಲೇ ಕಲಿತು ಪರಿಣತಿ ಹೊಂದಿ ವಿವಿಧ ಯಕ್ಷಗಾನ ಮೇಳಗಳಲ್ಲಿ ಸೇರಿಕೊಂಡಿದ್ದಾರೆ.

ರಂಗಕ್ಕಿಳಿಯಲು ಸಜ್ಜಾಗುತ್ತಿರುವ ವೇಷಗಾರ ಸುಮನ್‌ರಾಜ್

'ಒಂಬತ್ತು ತಿಂಗಳು ಕಲಿತರೆ ಕಲಾವಿದರಾಗಿ ಹೊರಹೊಮ್ಮುವಷ್ಟು ಪಕ್ವವಾಗುತ್ತಾರೆ. ನಮ್ಮಲ್ಲಿ ಕೋರ್ಸ್ ಪೂರೈಸಿದ ಅನೇಕ ಮಂದಿ ಅವರವರ ಊರ ಯಕ್ಷಗಾನ ಮೇಳಗಳಲ್ಲಿ ವೇಷಗಾರಿಕೆ ಮತ್ತು ಭಾಗವತಿಕೆ ಮಾಡುತ್ತಿದ್ದಾರೆ' ಎನ್ನುತ್ತಾರೆ ಕಥೆಗಾರರು ತಂಡದ ಬೋಧಕ ಪ್ರಸಾದ್ ಚೇರ್ಕಾಡಿ.

ಬಾಲ್ಯದ ಹಂಬಲಕ್ಕೆ ತಡವಾಗಿ ಲಭಿಸಿದ ಪೋಷಣೆ: ದಕ್ಷಿಣ ಕನ್ನಡ ಜಿಲ್ಲೆ ವಿಟ್ಲದ ಕೊಲ್ಯ ನಿವಾಸಿ ಸ್ಮಿತಾ ಅವರು ಬಾಲ್ಯದಲ್ಲಿ ಯಕ್ಷಗಾನ ನೋಡಿಯೇ ಬೆಳೆದವರು. ಈ ಕಲೆಯನ್ನು ಕಲಿಯಬೇಕೆಂಬ ಹಂಬಲ ಅವರಲ್ಲಿ ಆಗಲೇ ಮೂಡಿತ್ತು. ಆದರೆ ಅದಕ್ಕೆ ಕಾಲ ಕೂಡಿರಲಿಲ್ಲ. ಈಗ ಅವರು ಮಂಗಳೂರಿನ ಶ್ರೀನಿವಾಸ ಫಾರ್ಮಸಿ ಕಾಲೇಜಿನಲ್ಲಿ ಫಾರ್ಮಕಾಲಜಿ ವಿಭಾಗದ ಉಪನ್ಯಾಸಕಿ.

'ಆನ್‌ಲೈನ್‌ನಲ್ಲಿ ಮೊದಲು ಕಲಿತದ್ದು ನಾಟ್ಯ. ನಂತರ ಭಾಗವತಿಕೆಯತ್ತ ಆಕರ್ಷಿತಳಾದೆ. ಮೂರು ತಿಂಗಳು ಬೇಸಿಕ್ ತರಬೇತಿ ಪಡೆದೆ. ನಂತರ ಮೂರು ತಿಂಗಳು ಅಡ್ವಾನ್ಸ್‌ಡ್ ತರಬೇತಿಯಲ್ಲಿ ಪಾಲ್ಗೊಂಡೆ. ಮೂರು ಪ್ರಸಂಗಗಳಲ್ಲಿ ಭಾಗವಹಿಸಿದ್ದೇನೆ. ಆನ್‌ಲೈನ್ ತರಗತಿಯಲ್ಲಿ ಕಲಿಯುವಾಗ ಗುರುಗಳು ಹತ್ತಿರದಲ್ಲೇ ಇದ್ದು ನಮಗೊಬ್ಬರಿಗೆ ಮಾತ್ರ ಹೇಳಿಕೊಡುತ್ತಿದ್ದಾರೆ ಎಂಬ ಭಾವನೆ ಮೂಡುತ್ತದೆ. ಇದು ಕಲಿಕೆಗೆ ಅನುಕೂಲ ಆಗುತ್ತದೆ' ಎನ್ನುತ್ತಾರೆ ಸ್ಮಿತಾ.

ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಮೈಕ್ರೊಬಯಾಲಜಿ ಪದವಿ ವಿದ್ಯಾರ್ಥಿಯಾಗಿರುವ ಕಾಸರಗೋಡು ನೀರ್ಚಾಲಿನ ಸುಮನ್‌ರಾಜ್ ನೀಲಂಗಳ ಅವರು ಆನ್‌ಲೈನ್ ತರಗತಿಗೆ ಹಾಜರಾಗಿ ಭಾಗವತಿಕೆ ಮತ್ತು ವೇಷಗಾರಿಕೆ ಎರಡನ್ನೂ ನಿಭಾಯಿಸುತ್ತಿದ್ದಾರೆ. ಕೊಲ್ಲಂಗಾನ ಮೇಳದಲ್ಲಿ 'ಪಾತ್ರಧಾರಿ'ಯಾಗಿದ್ದಾರೆ.

'ರಾಗ-ಸ್ವರ ಸಂಚಾರವನ್ನು ಸೂಕ್ಷ್ಮವಾಗಿ ಕಲಿಯಲು ಆನ್‌ಲೈನ್ ತರಗತಿಗಳು ಅನುಕೂಲ ಮಾಡಿವೆ. ಭಾಗವತಿಕೆಗೆ ಆನ್‌ಲೈನ್ ತರಗತಿಗಳು ಹೆಚ್ಚು ಉತ್ತಮ ಎಂದೆನಿಸುತ್ತದೆ. ಆಫ್‌ಲೈನ್ ತರಗತಿಗಳಲ್ಲಿ ತುಂಬ ಜನರು ಇರುವುದರಿಂದ ಗೊಂದಲ ಆಗುತ್ತದೆ. ಆನ್‌ಲೈನ್‌ನಲ್ಲಿ ವೈಯಕ್ತಿಕವಾಗಿ ಕಾಳಜಿ ವಹಿಸಿ ಕಲಿಸಿಕೊಡುತ್ತಾರೆ' ಎಂಬುದು ಸುಮನ್‌ರಾಜ್ ಅಭಿಪ್ರಾಯ.

ರಫೀಕುದ್ದೀನ್ ಆಸೆಗೆ ಜೀವ ತುಂಬಿದ ಆನ್‌ಲೈನ್ ಪಾಠ: ದಕ್ಷಿಣ ಕನ್ನಡದ ಮಡಂತ್ಯಾರು ನಿವಾಸಿ, ಕುವೈತ್‌ನಲ್ಲಿ ಉದ್ಯೋಗದಲ್ಲಿರುವ ರಫೀಕುದ್ದೀನ್ ಅವರು ಬಾಲ್ಯದಿಂದಲೇ ಯಕ್ಷಗಾನದ ಒಡನಾಟ ಇರಿಸಿಕೊಂಡವರು. ನಾಟ್ಯ ಮತ್ತು ಮದ್ದಳೆ ನುಡಿಸುವಿಕೆಯಲ್ಲಿ ಪಳಗಿರುವ ಅವರ ಭಾಗವತಿಕೆ ಕಲಿಯುವ ಆಸೆ ಈಡೇರಿಸಿದ್ದು ಆನ್‌ಲೈನ್ ತರಬೇತಿ. ತಂದೆ ಅಬ್ದುಲ್ ಶುಕೂರ್ ಜೊತೆ ಬಾಲ್ಯದಿಂದಲೇ ಯಕ್ಷಗಾನ, ಭೂತದ ಕೋಲ ಮುಂತಾದವುಗಳನ್ನು ನೋಡುತ್ತ ಬೆಳೆದ ರಫೀಕುದ್ದೀನ್ ಅವರಿಗೆ ನೆಲದ ಕಲೆಯ ಬಗ್ಗೆ ಆಗಲೇ ಆಸಕ್ತಿ ಮೂಡಿತ್ತು. ಬಿ.ಕಾಂ. ಪದವಿ ಗಳಿಸಿದ ನಂತರ ಕಂಪ್ಯೂಟರ್ ಜ್ಞಾನದಲ್ಲೂ ಪರಿಣತಿ ಪಡೆದ ಅವರು ಕಾಲೇಜು ದಿನಗಳಲ್ಲೇ ಹೆಜ್ಜೆಗಾರಿಕೆ ಕಲಿತಿದ್ದರು. ಕಾಲೇಜು ವಾರ್ಷಿಕೋತ್ಸವದಲ್ಲಿ ಮೊದಲ ಬಾರಿ ವೇಷವನ್ನೂ ತೊಟ್ಟಿದ್ದರು.

ಈ ನಡುವೆ ಹಿಮ್ಮೇಳದಲ್ಲೂ ಆಸಕ್ತಿ ಹುಟ್ಟಿ ಮದ್ದಳೆ ನುಡಿಸಲು ಕಲಿತರು. ವಿವಿಧ ಮೇಳಗಳಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳಲ್ಲಿ ಕಾಣಿಸಿಕೊಂಡಿದ್ದಾರೆ. ಒಂದೂವರೆ ದಶಕದಿಂದ ಕುವೈತ್‌ನಲ್ಲಿರುವ ಅವರು ಅಲ್ಲಿ ತುಳುಕೂಟವನ್ನು ಹುಟ್ಟುಹಾಕಿ ಯಕ್ಷಗಾನ ಸೇವೆ ಮಾಡುತ್ತಿದ್ದಾರೆ. ಈ ನಡುವೆ ಭಾಗವತಿಕೆಯನ್ನೂ ಕಲಿಯುತ್ತಿದ್ದಾರೆ. 'ಆನ್‌ಲೈನ್ ತರಗತಿಯಿಂದಾಗಿ ಭಾಗವತಿಕೆ ಕಲಿಯುವ ಆಸೆಗೆ ಬಣ್ಣ ತುಂಬಲು ಸಾಧ್ಯವಾಗಿದೆ. ಭಾಗವತಿಕೆಯಲ್ಲಿ ಬಹಳ ಬೇಗ ಪಾರಮ್ಯ ಸಾಧಿಸಲು ಆನ್‌ಲೈನ್ ತರಗತಿ ನೆರವಾಗಿದೆ' ಎಂದು ಹೇಳಿದರು.

ರಾಜಕುಮಾರ...

8ನೇ ಪುಟದಿಂದ...

ಭಾರತದ ಮೊದಲ ಪ್ರಧಾನಿಯನ್ನು ಅವರ ಆದರ್ಶಗಳಿಗಾಗಿ, ಸ್ವಾತಂತ್ರ್ಯ ಚಳವಳಿಗೆ ನೀಡಿದ ಕೊಡುಗೆಗಾಗಿ ಮತ್ತು ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವಿಕಾಸಹೊಂದಲು ಹಾಕಿದ ಶ್ರಮಕ್ಕಾಗಿ ಅವರು ಮುಕ್ತವಾಗಿ ಪ್ರಶಂಸಿಸಿದ್ದರು.

ನೆಹರೂ ಅವರ ಹಲವು ನೀತಿಗಳ ಕುರಿತು ಬಿಜೆಪಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ ಅಡ್ವಾಣಿ ಅವರು, 'ಭಾರತೀಯ ಸ್ವಾತಂತ್ರ್ಯ ಯುಗದ ಅಪ್ರತಿಮ ವ್ಯಕ್ತಿಗಳಲ್ಲಿ ನೆಹರೂ ಕೂಡ ಒಬ್ಬರು. ಆ ವೈಭವದ ಯುಗದ ಕಲ್ಪನೆಗಳು ಮತ್ತು ಆದರ್ಶಗಳನ್ನು ಅವರ ಪಕ್ಷದ ನಾಯಕರೇ ಸಂಪೂರ್ಣವಾಗಿ ಕೈಬಿಟ್ಟಿರುವ ಈ ಸಮಯದಲ್ಲಿ, ನೆಹರೂ ಅವರ ಬದುಕು ಮತ್ತು ಸಾಧನೆಯ ಸಕಾರಾತ್ಮಕ ಅಂಶಗಳನ್ನು ನೆನಪಿಸಿಕೊಳ್ಳುವುದು ಭಾರತದ ರಾಜಕೀಯ ಸಂಸ್ಕೃತಿಯ ಅವನತಿಯನ್ನು ತಡೆಯಲು ಸಹಾಯ ಮಾಡುವುದೆಂದು ಬಿಜೆಪಿ ನಂಬುತ್ತದೆ' ಎಂದು ಸ್ಮರಿಸಿದ್ದರು.

ದುಃಖಕರ ಸಂಗತಿ ಎಂದರೆ, ಭಾರತದ ರಾಜಕೀಯ ಸಂಸ್ಕೃತಿಯು ಕಳೆದ ಎಂಟು ವರ್ಷಗಳಲ್ಲಿ ಹಿಂದೆಂದೂ ಕಾಣದಷ್ಟು ಅವನತಿಯನ್ನು ಕಂಡಿದೆ. ನೆಹರೂ ಅವರು ಕಟ್ಟಿ ಬೆಳೆಸಿದ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ಸಂಸತ್ತು ನಿಧಾನವಾಗಿ ನಿಷ್ಕ್ರಿಯಗೊಳ್ಳುತ್ತಿದೆ. ಮೋದಿ ರಾಜ್‌ನಲ್ಲಿ ಸಂಸತ್ತಿನ ಕಾರ್ಯವೈಖರಿಯು ನೆಹರೂ ಕಾಲದ ಕಾರ್ಯವೈಖರಿಗಿಂತ ಸಂಪೂರ್ಣ ವ್ಯತಿರಿಕ್ತವಾಗಿದೆ. ಸಂಸತ್ತಿನಲ್ಲಿ ನಡೆಯುವ ಚರ್ಚೆಗಳ ಸಮಯದಲ್ಲಿ ಮೋದಿ ಕೂರುವುದು ತುಂಬಾ ವಿರಳ ಮತ್ತು ಅವರು ಚರ್ಚೆಯಲ್ಲಿ ಭಾಗವಹಿಸುವುದು ಅಷ್ಟೇ ಅಪರೂಪ. ಆದರೆ, ನೆಹರೂ ಅವರ ಹೃದಯ ಮತ್ತು ಆತ್ಮ ಎರಡೂ ಸಂಸದೀಯ ಚರ್ಚೆಗಳಲ್ಲೇ ಇರುತ್ತಿದ್ದವು. ಪ್ರತಿಪಕ್ಷಗಳ ಜತೆಗಿನ ಸಂವಾದ ಮೋದಿ ಅವರ ಕಾಲದಲ್ಲಿ ಸಂಪೂರ್ಣ ಸ್ಥಗಿತವಾಗಿದೆ.

ಕಾಶ್ಮೀರ ಸಮಸ್ಯೆಯನ್ನು ಸೃಷ್ಟಿಸಿದ್ದಕ್ಕಾಗಿ ಮತ್ತು 1962ರಲ್ಲಿ ಚೀನಾದೊಂದಿಗಿನ ಯುದ್ಧದಲ್ಲಿ ಭಾರತ ಸೋತಿರುವುದಕ್ಕಾಗಿ ನೆಹರೂ ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಲಾಗಿದೆ. ನಿಜ, ಅವರು ಕೆಲವು ತಪ್ಪುಗಳನ್ನು ಮಾಡಿದ್ದಾರೆ. ಜಗತ್ತಿನ ಇತಿಹಾಸದಲ್ಲಿ ತಪ್ಪು ಮಾಡದ ಒಬ್ಬನೇ ಒಬ್ಬ ಮಹಾನ್ ನಾಯಕನಿದ್ದಾನೆಯೇ? ಆದರೆ, ನೆಹರೂ ಅವರ ಕುರಿತು ಹರಿಬಿಡಲಾದ ಹಲವು ಸಂಗತಿಗಳು ಸುಳ್ಳಿನಿಂದ ಕೂಡಿವೆ ಅಥವಾ ಅತೀ ಸರಳೀಕೃತವಾಗಿವೆ.

ರಾಜರ ಅಧೀನದಲ್ಲಿದ್ದ ಸಂಸ್ಥಾನಗಳನ್ನು ಭಾರತೀಯ ಒಕ್ಕೂಟದಲ್ಲಿ ಸೇರಿಸುವ ಹೊಣೆಯನ್ನು ನಿಭಾಯಿಸುತ್ತಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಜುನಾಗಡವನ್ನು ಪಡೆಯುವುದಕ್ಕಾಗಿ ಇಡೀ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಲು ಬಯಸಿದ್ದರು ಎನ್ನುವುದು ಎಷ್ಟು ಜನರಿಗೆ ಗೊತ್ತು? ಚೀನಾ ಪ್ರಧಾನಿ ಚೌ ಎನ್‌ಲಾಯ್ ಅವರು 1960ರಲ್ಲಿ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಪ್ರತಿಪಕ್ಷಗಳು ನೆಹರೂ ಅವರಿಗೆ ಸಹಕಾರ ಕೊಟ್ಟಿದ್ದರೆ ಗಡಿ ಸಮಸ್ಯೆಯನ್ನು ಮಾತುಕತೆಯ ಮೂಲಕವೇ ಬಗೆಹರಿಸಬಹುದಿತ್ತು ಎನ್ನುವುದಾದರೂ ಎಷ್ಟು ಜನರಿಗೆ ಗೊತ್ತು? ಈಗಲಾದರೂ, ಮೋದಿ ಅವರಾಗಲಿ ಅಥವಾ ಭವಿಷ್ಯದ ಯಾವುದೇ ಪ್ರಧಾನಿಗಾಗಲಿ ಕೊಡು–ಕೊಳ್ಳುವಿಕೆಯ ವಿಧಾನವನ್ನು ಹೊರತುಪಡಿಸಿ ಗಡಿ ವಿವಾದವನ್ನು ಬಗೆಹರಿಸಲು ಬೇರೆ ಮಾರ್ಗವಿದೆಯೇ?

ಕೊನೆಯಲ್ಲಿ ಒಂದು ಮಾತು. ಬೇರೆಯವರ ದೀಪವನ್ನು ಆರಿಸಿಬಿಟ್ಟ ಮಾತ್ರಕ್ಕೆ ನಮ್ಮ ದೀಪ ಹೆಚ್ಚು ಬೆಳಕು ಕೊಡುವುದಿಲ್ಲ. ನೆಹರೂ ಅವರನ್ನು ತೆಗಳಿದ ಮಾತ್ರಕ್ಕೆ ಉಳಿದ ನಾಯಕರು ಅವರಿಗಿಂತ ಮಹಾನ್ ಆಗುವುದಿಲ್ಲ.

ವಿಶ್ವ ಜೂನಿಯರ್ ಕುಸ್ತಿ: ಅಗ್ರಸ್ಥಾನ ಗಳಿಸಿದ ಭಾರತದ ಮೊದಲ ಮಹಿಳೆ

ಅಂತಿಮ್ ಪಂಘಾಲ್‌ಗೆ ಚಾರಿತ್ರಿಕ ಚಿನ್ನ

ನವದೆಹಲಿ: ಭಾರತದ ಅಂತಿಮ್ ಪಂಘಾಲ್ ಅವರು ಬಲ್ಗೇರಿಯಾದ ಸೋಫಿಯಾದಲ್ಲಿ ನಡೆದ ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಐತಿಹಾಸಿಕ ಸಾಧನೆ ಮಾಡಿದ್ದಾರೆ.

20 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಮಹಿಳೆ ಎಂಬ ಶ್ರೇಯವನ್ನು ಅವರು ಗಳಿಸಿದ್ದಾರೆ.

53 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅಂತಿಮ್, ಫೈನಲ್ ಬೌಟ್‌ನಲ್ಲಿ 8-0ಯಿಂದ ಕಜಕಸ್ತಾನದ ಅಟ್ಲಿನ್ ಶಗಾಯೆವಾ ವಿರುದ್ಧ ಗೆಲುವು ಸಾಧಿಸಿದರು. ಈ ವಿಭಾಗದ ಕಂಚಿನ ಪದಕವು ಅಮೆರಿಕದ ಕೇಟಿ ಬ್ರಿಯಾನ್ನಾ ಮತ್ತು ಜಪಾನ್‌ನ ಆಯಾಕಾ ಕುಮಾರಾ ಅವರ ಪಾಲಾಯಿತು.

ಅರ್ಹತಾ ಸುತ್ತಿನಲ್ಲಿ ಅಂತಿಮ್ 11-0ಯಿಂದ ಜರ್ಮನಿಯ ಆ್ಯಂಡ್ರಿಚ್ ಅಮೊರಿ ಒಲಿವಿಯಾ ಎದುರು ಗೆದ್ದಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್‌ನ ಆಯಾಕಾ ಅವರನ್ನು ಮಣಿಸಿದ್ದರು.

ಬಳಿಕ ಸೆಮಿಫೈನಲ್‌ನಲ್ಲಿ ಉಕ್ರೇನ್‌ನ ನತಾಲಿಯಾ ವಿರುದ್ಧ 11-2ರಿಂದ ಗೆದ್ದು ಚಿನ್ನದ ಪದಕದ ಸುತ್ತಿಗೆ ತಲುಪಿದ್ದರು.

17 ವರ್ಷದ ಅಂತಿಮ್ ಹರಿಯಾಣದ ಹಿಸಾರ್ ಜಿಲ್ಲೆಯವರು.

ಅಂತಿಮ್ ಪಂಘಾಲ್ ಸಂಭ್ರಮ– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಮುಖ್ಯಾಂಶಗಳು

- 53 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಪದಕ ಸಾಧನೆ
- ಕಂಚು ಜಯಿಸಿದ ಪ್ರಿಯಾಂಶಿ, ರಿತಿಕಾ, ಸಿಟೊ

ಸೋನಂ, ಪ್ರಿಯಾಂಕಾಗೆ ಬೆಳ್ಳಿ: ಭಾರತದ ಸೋನಂ 62 ಕೆ.ಜಿ. ವಿಭಾಗದಲ್ಲಿ ಮತ್ತು 65 ಕೆ.ಜಿ. ವಿಭಾಗದಲ್ಲಿ ಪ್ರಿಯಾಂಕಾ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಹಾಗೆಯೇ 57 ಕೆ.ಜಿ. ವಿಭಾಗದಲ್ಲಿ ಸಿಟೊ ಮತ್ತು 72 ಕೆ.ಜಿ ವಿಭಾಗದಲ್ಲಿ ರಿತಿಕಾ ಕಂಚಿನ ಪದಕ ಜಯಿಸಿದರು. 50 ಕೆಜಿ ವಿಭಾಗದಲ್ಲಿ ಪ್ರಿಯಾಂಶಿ ರಾಜಾವತ್ ಕೂಡ ಕಂಚು ಗೆದ್ದುಕೊಂಡರು. ರಿಪೆಜ್ ಸುತ್ತುಗಳಲ್ಲಿ ಅವರು ಗೆಲುವು ಸಾಧಿಸಿದರು.

ಭಾರತಕ್ಕೆ ಎರಡನೇ ಸ್ಥಾನ: ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ಏಳು ಪದಕಗಳನ್ನು ಜಯಿಸಿದ ಭಾರತ, ತಂಡ ವಿಭಾಗದಲ್ಲಿ ಎರಡನೇ ಸ್ಥಾನ ಗಳಿಸಿತು. ಜಪಾನ್ ತಂಡ ಅಗ್ರಸ್ಥಾನ ತನ್ನದಾಗಿಸಿಕೊಂಡರೆ, ಮೂರನೇ ಸ್ಥಾನವು ಅಮೆರಿಕದ ಪಾಲಾಯಿತು.

ಈಜು: ಜೆಡಿಡಾ ಚಿನ್ನ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭಾನ್ವಿತ ಈಜುಪಟು ಜೆಡಿಡಾ ಅಜಿತ್ ಶನಿವಾರ ಆರಂಭವಾದ ಖೇಲೊ ಇಂಡಿಯಾ ಮಹಿಳೆಯರ ಸರಣಿ ಈಜು ಸೀನಿಯರ್ ವಿಭಾಗದಲ್ಲಿ ಚಿನ್ನ ಡಬಲ್ ಸಾಧನೆ ಮಾಡಿದರು.

ಮಹಿಳೆಯರ 100 ಮೀ ಬಟರ್‌ಫ್ಲೈ ಹಾಗೂ 200 ಮೀ ಮೆಡ್ಲೆ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಶಾಲಿನಿ ದೀಕ್ಷಿತ್ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಪ್ರಥಮರಾದರು.

ಫಲಿತಾಂಶಗಳು ಮಹಿಳೆಯರು: 200 ಮೀ ಫ್ರೀಸ್ಟೈಲ್: ಅಸ್ಮಿತಾ ಚಂದ್ರಾ (2ನಿ,16.46ಸೆ)-1, ಅನ್ವಯಿ ಎಸ್ ಮಸ್ಕಿ -2, ಆದ್ಯ ನಾಯಕ -3 (ಎಲ್ಲರೂ ಕರ್ನಾಟಕದವರು).

200 ಮೀ ಬ್ರೆಸ್ಟ್‌ಸ್ಟ್ರೋಕ್: ಎಸ್. ಲಕ್ಷ್ಯಾ ಶಿವಾನಂದ (2ನಿ,53.44ಸೆ)-1, ವಿ. ಹಿತೈಷಿ -2, ಮೇಘಾಂಜಲಿ ಬಿರಾದಾರ -3 (ಮೂವರು ಕರ್ನಾಟಕದರು).

100 ಮೀ ಬ್ಯಾಕ್‌ಸ್ಟ್ರೋಕ್: ಶ್ರೇಯಾ ಮೇರಿ ಕಮಲ್ (ಕೇರಳ; 1ನಿ,12.28ಸೆ)-1, ಇಮಾನಿ ಪ್ರಭಂಜನ್ ಜಾಧವ್ (ಕರ್ನಾಟಕ)-2, ಮೋನಿತಾ ಹರೀಶ್ (ಕರ್ನಾಟಕ)-3

100 ಮೀ ಬಟರ್‌ಫ್ಲೈ: ಜೆಡಿಡಾ ಅಜಿತ್ (1ನಿ,05.03ಸೆ)-1, ನೈಶ ಶೆಟ್ಟಿ -2, ಲತೀಶಾ ಮಂದಣ್ಣ-3 (ಕರ್ನಾಟಕದವರು)

200 ಮೀ ಮೆಡ್ಲೆ: ಜೆಡಿಡಾ ಅಜಿತ್ -1 (2ನಿ,32.52ಸೆ), ಎಸ್. ಲಕ್ಷ್ಯ ಶಿವಾನಂದ-2, ನೈಶಾ ಶೆಟ್ಟಿ -3.

ಜೆಡಿಡಾ ಅಜಿತ್

ಬಾಲಕಿಯರು: 200 ಮೀ ಫ್ರೀಸ್ಟೈಲ್: ಶಿರಿನ್ (2ನಿ.14.93ಸೆ)-1, ಖುಜುಲಾ ಶಶಿಧರ -2, ಶಾಲಿನಿ ಆರ್ ದೀಕ್ಷಿತ್ -3 (ಮೂವರು ಕರ್ನಾಟಕದವರು)

200 ಮೀ ಬ್ರೆಸ್ಟ್‌ಸ್ಟ್ರೋಕ್: ಲಿನೇಸಾ ಅನಿಲಕುಮಾರ್ (2ನಿ,47.22ಸೆ)-1, ರಿಯಾನಾ ಧೃತಿ ಫರ್ನಾಂಡಿಸ್ -2, ತಾನ್ಯಾ ಷಡಕ್ಷರಿ -3 (ಕರ್ನಾಟಕದವರು).

100 ಮೀ ಬ್ಯಾಕ್‌ಸ್ಟೋಕ್: ಶಾಲಿನಿ ದೀಕ್ಷಿತ್ (1ನಿ,9.54ಸೆ)-1, ಸಿದ್ಧಿ ಗೌತಮ್ ಶಾಹ -2, ಆರುಷಿ ಅಗರವಾಲ್ -3 (ಕರ್ನಾಟಕದವರು)

100 ಮೀ ಬಟರ್‌ಫ್ಲೈ: ತನಿಷಿ ಗುಪ್ತಾ (1ನಿ,04.70ಸೆ)-1, ದಿನಿಧಿ ದೇಶಿಂಗು-2, ರಿತಿಕಾ ಬೆಂಗಳೂರು -3 (ಕರ್ನಾಟಕದವರು).

200 ಮೀ ಮೆಡ್ಲೆ: ದಿನಿದಿ ದೇಶಿಂಗು (2ನಿ,33.81ಸೆ)-1, ಲಿನೇಶಾ ಅನಿಲಕುಮಾರ್ -2, ಶಿರಿನ್ ಶಿರನ್ -3 (ಎಲ್ಲರೂ ಕರ್ನಾಟಕದವರು)

ಮಹಾರಾಜ ಟ್ರೋಫಿ: ಶಿವಮೊಗ್ಗ ತಂಡಕ್ಕೆ ಜಯ

ಗೌತಮ್–ಸ್ಟಾಲಿನ್ ಜೊತೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಕೃಷ್ಣಪ್ಪ ಗೌತಮ್ ಆಲ್‌ರೌಂಡ್ ಆಟದ ಬಲದಿಂದ ಶಿವಮೊಗ್ಗ ಸ್ಟ್ರೈಕರ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಪಂದ್ಯದಲ್ಲಿ ಶಿವಮೊಗ್ಗ, 8 ವಿಕೆಟ್‌ಗಳಿಂದ ಮಂಗಳೂರು ಯುನೈಟೆಡ್ ಎದುರು ಗೆದ್ದಿತು.

ಟಾಸ್ ಗೆದ್ದ ಶಿವಮೊಗ್ಗ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಿಕಿನ್ ಜೋಸ್ (38 ; 37ಎ) ಹಾಗೂ ಅಭಿನವ್ ಮನೋಹರ್ (36; 25ಎ) ಅವರು ಆಸರೆ ನೀಡಿದ್ದರಿಂದ ಮಂಗಳೂರು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 136 ರನ್ ಗಳಿಸಲು ಸಾಧ್ಯವಾಯಿತು. ಗೌತಮ್, ಕಾರಿಯಪ್ಪ ಹಾಗೂ ಡಿ.ಅವಿನಾಶ್ ತಲಾ ಎರಡು ವಿಕೆಟ್ ಗಳಿಸಿ ಮಂಗಳೂರು ತಂಡಕ್ಕೆ ಕಡಿವಾಣ ಹಾಕಿದರು.

ಗುರಿ ಬೆನ್ನಟ್ಟಿದ ಶಿವಮೊಗ್ಗ ತಂಡವು ಮೊದಲ ಓವರ್‌ನಲ್ಲಿಯೇ ಆಘಾತ ಅನುಭವಿಸಿತು. ಬಿ.ಆರ್. ಶರತ್ ವಿಕೆಟ್ ಗಳಿಸಿದ ಎಚ್.ಎಸ್. ಶರತ್ ಸಂಭ್ರಮಿಸಿದರು. ಆದರೆ ನಂತರದ ಆಟದಲ್ಲಿ ಮಂಗಳೂರು ಬೌಲರ್‌ಗಳಿಗೆ ಖುಷಿ ಪಡುವ ಸಂದರ್ಭ ಒದಗಿಬರಲು ಸ್ಟಾಲಿನ್ (ಔಟಾಗದೆ 53; 35ಎ, 4X3, 6X4) ಹಾಗೂ ಗೌತಮ್ (72; 32ಎ. 4X7, 6X4) ಬಿಡಲಿಲ್ಲ. ಎರಡನೇ ವಿಕೆಟ್‌ಗೆ 129 ರನ್ ಸೇರಿಸಿದರು. ಇದರಿಂದಾಗಿ ತಂಡವು 12.2 ಓವರ್‌ಗಳಲ್ಲಿ ಜಯದ ದಡ ಸೇರಿತು.

ಮತ್ತೊಂದು ಪಂದ್ಯದಲ್ಲಿ ಜಗದೀಶ ಸುಚಿತ್ (40ರನ್, 19ಕ್ಕೆ 2) ಆಲ್‌ರೌಂಡ್ ಆಟದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ 23 ರನ್‌ಗಳಿಂದ ಮೈಸೂರು ವಾರಿಯರ್ಸ್ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಯುನೈಟೆಡ್: 20 ಓವರ್‌ಗಳಲ್ಲಿ 8ಕ್ಕೆ136 (ನಿಕಿನ್ ಜೋಸ್ 38, ಅಭಿನವ್ ಮನೋಹರ್ 36, ಕೃಷ್ಣಪ್ಪ ಗೌತಮ್ 11ಕ್ಕೆ2, ಕಾರಿಯಪ್ಪ 33ಕ್ಕೆ2, ಡಿ. ಅವಿನಾಶ್ 32ಕ್ಕೆ2) ಶಿವಮೊಗ್ಗ ಸ್ಟ್ರೈಕರ್ಸ್: 12.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 137 (ಸ್ಟಾಲಿನ್ ಹೂವರ್ ಔಟಾಗದೆ 53, ಕೃಷ್ಣಪ್ಪ ಗೌತಮ್ 72, ಎಚ್.ಎಸ್. ಶರತ್ 3ಕ್ಕೆ1, ಕೆ. ಶಶಿಕುಮಾರ್ 28ಕ್ಕೆ1) ಫಲಿತಾಂಶ: ಶಿವಮೊಗ್ಗ ತಂಡಕ್ಕೆ 8 ವಿಕೆಟ್‌ಗಳ ಜಯ.

ಭಾನುವಾರದ ಪಂದ್ಯಗಳು: ಮೈಸೂರು ವಾರಿಯರ್ಸ್–ಗುಲ್ಬರ್ಗಾ ಮಿಸ್ಟಿಕ್ಸ್ (ಮಧ್ಯಾಹ್ನ 3). ಹುಬ್ಬಳ್ಳಿ ಟೈಗರ್ಸ್–ಬೆಂಗಳೂರು ಬ್ಲಾಸ್ಟರ್ಸ್ (ರಾತ್ರಿ 7)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕೆ. ಗೌತಮ್ ಹಾಗೂ ಸ್ಟಾಲಿನ್ ಹೂವರ್ ಸಂಭ್ರಮ–ಪ್ರಜಾವಾಣಿ ಚಿತ್ರ/ರಂಜು ಪಿ

ಮಹಾರಾಜ ಟ್ರೋಫಿ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು	8	5	3	10	+1.154
ಮೈಸೂರು	8	5	3	10	+0.47
ಗುಲ್ಬರ್ಗಾ	8	5	3	10	+0.449
ಹುಬ್ಬಳ್ಳಿ	8	4	4	8	-0.153
ಮಂಗಳೂರು	9	4	5	8	-0.999
ಶಿವಮೊಗ್ಗ	9	2	7	4	-0.735

ಫುಟ್‌ಬಾಲ್: ಗೋಕುಲಂ ತಂಡಕ್ಕೆ ತಟ್ಟಿದ ಫಿಫಾ ಬಿಸಿ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆಗಳ ಒಕ್ಕೂಟವು (ಫಿಫಾ) ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮೇಲೆ ನಿಷೇಧ ಹೇರಿರುವ ಕಾರಣ ಗೋಕುಲಂ ಕೇರಳ ಮಹಿಳಾ ತಂಡಕ್ಕೆ ಎಎಫ್‌ಸಿ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ಅವಕಾಶ ಲಭಿಸಿಲ್ಲ.

ಉಜ್ಬೆಕಿಸ್ತಾನದಲ್ಲಿ ನಿಗದಿಯಾಗಿರುವ ಚಾಂಪಿಯನ್‌ಷಿಪ್‌ನಲ್ಲಿ ಅನುಮತಿ ಸಿಗದ ಹಿನ್ನೆಲೆಯಲ್ಲಿ ಆಶಾಲತಾ ದೇವಿ ನಾಯಕತ್ವದ ತಂಡವು ಸೋಮವಾರ ಭಾರತಕ್ಕೆ ಮರಳಲಿದೆ.

‘ಮೂರನೇ ವ್ಯಕ್ತಿಗಳ ಅನಗತ್ಯ ಹಸ್ತಕ್ಷೇಪ’ದ ಕಾರಣ ನೀಡಿ ಫಿಫಾ, ಆ.16 ರಂದು ಎಐಎಫ್‌ಎಫ್‌ಅನ್ನು ಅಮಾನತು ಮಾಡಿತ್ತು.

ಗೋಕುಲಂ ಕೇರಳ ತಂಡ ಮೊದಲ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಆ.23 ರಂದು ಇರಾನ್‌ನ ಕ್ಲಬ್‌ಅನ್ನು ಎದುರಿಸಬೇಕಿತ್ತು.

‘ಎಐಎಫ್‌ಎಫ್ ಮೇಲೆ ಅಮಾನತು ಇದ್ದರೂ ಗೋಕುಲಂ ಕೇರಳ ಮತ್ತು ಎಟಿಕೆ ಮೋಹನ್ ಬಾಗನ್ ಕ್ಲಬ್‌ಗಳಿಗೆ ಮುಂಬರುವ ಟೂರ್ನಿಗಳಲ್ಲಿ ಆಡಲು ಅವಕಾಶ ನೀಡಬೇಕು’ ಎಂದು ಕೇಂದ್ರ ಕ್ರೀಡಾ ಸಚಿವಾಲಯವು ಫಿಫಾ ಹಾಗೂ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ಗೆ (ಎಎಫ್‌ಸಿ) ಮನವಿ ಮಾಡಿತ್ತು.

ಇಂದಿನಿಂದ ಮಹಿಳಾ ಫುಟ್‌ಬಾಲ್

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಐದನೇ ಆವೃತ್ತಿಯ ಮಹಿಳಾ ಸೂಪರ್ ಡಿವಿಷನ್ ಲೀಗ್ ಟೂರ್ನಿಯು ಭಾನುವಾರ ಇಲ್ಲಿ ಆರಂಭವಾಗಲಿದೆ.

ಮೂರು ಬಾರಿಯ ಚಾಂಪಿಯನ್ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್, ಮಿಸಾಕ ಯುನೈಟೆಡ್, ಕೆಂಪ್ ಎಫ್‌ಸಿ, ಮಾತೃ ಪ್ರತಿಷ್ಠಾನ, ಪರಿಕ್ರಮ, ರೆಬೆಲ್ಸ್ ವುಮೆನ್ಸ್, ಮಾಡರ್ನ್ ಗರ್ಲ್ಸ್, ಪಿಂಕ್ ಪ್ಯಾಂಥರ್ಸ್ ಮತ್ತು ರೂಟ್ಸ್ ಎಫ್‌ಸಿ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಪ್ರಮೋದ್–ಸುಕಾಂತ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಪ್ರಮೋದ್ ಭಗತ್ ಮತ್ತು ಸುಕಾಂತ್ ಕದಂ ಅವರು ಥಾಯ್ಲೆಂಡ್‌ನ ಪಟ್ಟಾಯಾದಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

ಶನಿವಾರ ನಡೆದ ಎಸ್‌ಎಲ್3–ಎಸ್‌ಎಲ್4 ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21-18 21-13ರಿಂದ ಇಂಡೊನೇಷ್ಯಾದ ದ್ವಿಯೊಕೊ ದ್ವಿಯೊಕೊ- ಪ್ರೆಡಿ ಸೆತಿ ವಾವಾನ್ ಅವರನ್ನು ಪರಾಭವಗೊಳಿಸಿತು.

ಪ್ರಮೋದ್ ಮತ್ತು ಸುಕಾಂತ್ ಸಿಂಗಲ್ಸ್ ವಿಭಾಗದ ಫೈನಲ್‌ಗಳಲ್ಲಿ ಸೋತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಮಹಿಳಾ ಸಿಂಗಲ್ಸ್‌ನಲ್ಲಿ ಮಂದೀಪ್ ಕೌರ್ (ಎಸ್‌ಎಲ್3 ವಿಭಾಗ), ಮನೀಷಾ ರಾಮದಾಸ್ (ಎಸ್‌ಯು5), ನಿತ್ಯಾಶ್ರೀ ಸುಮತಿ (ಎಸ್‌ಎಚ್6) ಕೂಡ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ಮಿಶ್ರ ಡಬಲ್ಸ್‌ನಲ್ಲಿ ಋತ್ವಿಕ್ ರಘುಪತಿ– ಮಾನಸಿ ಜೋಷಿ (ಎಸ್‌ಎಲ್3–ಎಸ್‌ಯು5), ಮಹಿಳಾ ಡಬಲ್ಸ್‌ನಲ್ಲಿ ಮಾನಸಿ– ಶಾಂತಿಯಾ ವಿಶ್ವನಾಥನ್ (ಎಸ್‌ಎಲ್3–ಎಸ್‌ಯು5) ಬೆಳ್ಳಿ ಪದಕ ಜಯಿಸಿದರು.

ಕೆಜಿಎಫ್ ವೂಲ್ವ್ಸ್ ತಂಡದ ಹೇಮಂತ್ ಗೌಡ (ಎಡ) ಮತ್ತು ಪ್ರಕಾಶ್ ರಾಜ್ ಆಟದ ವೈಖರಿ– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಬ್ಯಾಡ್ಮಿಂಟನ್: ಮಲ್ನಾಡ್ ಫಾಲ್ಕನ್ಸ್, ಶಾರ್ಕ್ಸ್‌ಗೆ ಸೋಲು

ಫೈನಲ್‌ಗೆ ವೂಲ್ವ್ಸ್– ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭರ್ಜರಿ ಆಟವಾಡಿದ ಕೆಜಿಎಫ್ ವೂಲ್ವ್ಸ್ ತಂಡದವರು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಫೈನಲ್ ತಲುಪಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ವೂಲ್ವ್ಸ್ 8- (-1)ರಿಂದ ಮಲ್ನಾಡ್ ಫಾಲ್ಕನ್ಸ್ ತಂಡವನ್ನು ಪರಾಭವಗೊಳಿಸಿದರು.

ವೂಲ್ವ್ಸ್ ತಂಡದ ಗ್ಲೋರಿಯಾ ವಿಜಯಕುಮಾರ್ ಅವರು ಮಹಿಳಾ ಸಿಂಗಲ್ಸ್‌ನ ಹಣಾಹಣಿಯಲ್ಲಿ 15-7, 15-2ರಿಂದ ಜಾಹ್ನವಿ ಶೆಟ್ಟಿ ಅವರನ್ನು ಮಣಿಸಿ ಮುನ್ನಡೆ ಗಳಿಸಿಕೊಟ್ಟರು. ಪುರುಷರ ಡಬಲ್ಸ್‌ನಲ್ಲಿ ಹೇಮಂತ್ ಎಂ. ಗೌಡ ಮತ್ತು ಪ್ರಕಾಶ್ ರಾಜ್ ಜೋಡಿಯು 8-15, 15-12, 13-15ರಿಂದ ಮಿಥುನ್ ಮಂಜುನಾಥ್–ಪೃಥ್ವಿ ಅವರನ್ನು ಸೋಲಿಸಿದಾದ ತಂಡದ ಮುನ್ನಡೆ ಹೆಚ್ಚಿತು.

ಪುರುಷರ ಸಿಂಗಲ್ಸ್ ಸೆಣಸಾಟದಲ್ಲಿ ವೂಲ್ವ್ಸ್‌ನ ನರೇನ್ ಎಸ್. ಅಯ್ಯರ್ 9-15, 15-14, 15-13ರಿಂದ ಶಮಂತ್ ರಾವ್ ಕಿದಿಯೂರ್ ಎದುರು ಜಯ ಸಾಧಿಸಿದರು. ಮೊದಲ ಗೇಮ್‌ನಲ್ಲಿ ಸೋತರೂ ಛಲಬಿಡದೆ ಗೆಲುವು ಒಲಿಸಿಕೊಂಡರು. ಮಿಶ್ರ ಡಬಲ್ಸ್‌ನಲ್ಲಿ ಸುಹಾಸ್ ವಿ. ಮತ್ತು ಅಮೃತಾ ಪಿ. 15-8, 15-8ರಿಂದ ಅರವಿಂದ್ ಕೊಂಗಾರ– ಜಾಹ್ನವಿ ಶೆಟ್ಟಿ ಎದುರು ಗೆದ್ದಾಗ ತಂಡದ ಮುನ್ನಡೆ 4-0ಗೆ ಏರಿತು. ಸೂಪರ್ ಪಂದ್ಯದಲ್ಲಿ ವೂಲ್ವ್ಸ್ ತಂಡದ ಹೇಮಂತ್ ಗೌಡ, ಪ್ರಕಾಶ್ ಮತ್ತು ಸಹಾಸ್ ಅವರು 21-14ರಿಂದ ಮಿಥುನ್, ಪೃಥ್ವಿ ಮತ್ತು ಶಮಂತ್ ರಾವ್ ಅವರನ್ನು ಸೋಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಮಂಡ್ಯ ಬುಲ್ಸ್ 6-3ರಿಂದ ಮಂಗಳೂರು ಶಾರ್ಕ್ಸ್ ಎದುರು ಗೆದ್ದು ಫೈನಲ್ ತಲುಪಿತು.

ಫೈನಲ್: ಕೆಜಿಎಫ್ ವೂಲ್ವ್ಸ್–ಮಂಡ್ಯ ಬುಲ್ಸ್. ಆರಂಭ: ರಾತ್ರಿ 7

1956ರ ಒಲಿಂಪಿಕ್ ಕೂಟದಲ್ಲಿ ಭಾರತ ತಂಡದ ಸಾರಥ್ಯ ವಹಿಸಿದ್ದ ಸಮರ್

ಫುಟ್‌ಬಾಲ್ ಒಲಿಂಪಿಯನ್ ‘ಬದ್ರು’ ಇನ್ನಿಲ್ಲ

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ, ಒಲಿಂಪಿಯನ್ ಸಮರ್ ‘ಬದ್ರು’ ಬ್ಯಾನರ್ಜಿ (92) ದೀರ್ಘಕಾಲದ ಅನಾರೋಗ್ಯದಿಂದಾಗಿ ಶನಿವಾರ ನಿಧನರಾದರು.

ಫುಟ್‌ಬಾಲ್ ಕ್ಷೇತ್ರದಲ್ಲಿ ‘ಬದ್ರು ದಾ’ ಎಂದೇ ಚಿರಪರಿಚಿತರಾಗಿದ್ದ ಬ್ಯಾನರ್ಜಿ ಅವರು ಜುಲೈ 27ರಂದು ಕೋವಿಡ್ ಚಿಕಿತ್ಸೆಗಾಗಿ ಎಂಆರ್ ಬಂಗೂರ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಬಹುಕಾಲದಿಂದ ಅಲ್ಜೀಮರ್, ಅಜೊತೆಮಿಯಾ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದರು. ಅವರಿಗೆ ಸೊಸೆ ಇದ್ದಾರೆ.

‘ಅವರ ಆರೋಗ್ಯ ಹದಗೆಡುತ್ತಿದ್ದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ರಾಜ್ಯ ಸರ್ಕಾರದ ಎಸ್‌ಎಸ್‌ಕೆಎಂ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ರಾಜ್ಯ ಕ್ರೀಡಾ ಸಚಿವ ಅನೂಪ್ ಬಿಸ್ವಾಸ್ ಅವರು ಮೇಲ್ವಿಚಾರಣೆ ನಿರ್ವಹಿಸಿದರು. ಬೆಳಗಿನ ಜಾವ 2.10ಕ್ಕೆ ಬ್ಯಾನರ್ಜಿಯವರು ಕೊನೆಯುಸಿರೆಳೆದರು. ಅವರು ನಮಗೆಲ್ಲರಿಗೂ ಅಚ್ಚುಮೆಚ್ಚಿನ ಬದ್ರು ದಾ ಆಗಿದ್ದರು. 2009ರಲ್ಲಿ ಅವರಿಗೆ ಮೋಹನ್ ಬಾಗನ್ ರತ್ನ ಪುರಸ್ಕಾರ ನೀಡಿ ಗೌರವಿಸಿದ್ದೆವು. ಅವರ ನಿಧನದಿಂದಾಗಿ ಕ್ರೀಡೆಗೆ ದೊಡ್ಡ ನಷ್ಟವಾಗಿದೆ ’ ಎಂದು ಮೋಹನ್ ಬಾಗನ್ ಕಾರ್ಯದರ್ಶಿ ದೇವಾಶಿಶ್ ದತ್ತಾ ಹೇಳಿದ್ದಾರೆ.


ಸಮರ್ ಬ್ಯಾನರ್ಜಿ (ಬದ್ರು)– ಮೋಹನ್ ಬಾಗನ್ ಫೇಸ್‌ಬುಕ್ ಚಿತ್ರ

ಬ್ಯಾನರ್ಜಿಯವರ ಪಾರ್ಥಿವ ಶರೀರವನ್ನು ಕ್ಲಬ್‌ನಲ್ಲಿ ಇರಿಸಲಾಗಿತ್ತು. ಅಭಿಮಾನಿಗಳು, ಫುಟ್‌ಬಾಲ್ ಆಟಗಾರರು, ಬೇರೆ ಬೇರೆ ಕ್ಲಬ್‌ಗಳ ಪದಾಧಿಕಾರಿಗಳು ಅಂತಿಮ ನಮನ ಸಲ್ಲಿಸಿದರು.

ಒಲಿಂಪಿಕ್ಸ್ ನಾಯಕ: ಭಾರತ ಫುಟ್‌ಬಾಲ್ ತಂಡವು ಇದುವರೆಗೆ ಮೂರು ಒಲಿಂಪಿಕ್ಸ್‌ಗಳಲ್ಲಿ ಸ್ಪರ್ಧಿಸಿದೆ. 1956ರ ಒಲಿಂಪಿಕ್ ಕೂಟದಲ್ಲಿ ಆಡಿದ್ದ ಭಾರತ ತಂಡಕ್ಕೆ ಬ್ಯಾನರ್ಜಿ ನಾಯಕತ್ವ ವಹಿಸಿದ್ದರು. ಈ ಕೂಟದಲ್ಲಿ ಕಂಚಿನ ಪದಕ ಸುತ್ತಿನಲ್ಲಿ ಭಾರತ ತಂಡವು 0–3ರಿಂದ ಬಲ್ಗೇರಿಯಾ ಎದುರು ಸೋತಿತ್ತು. ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಭಾರತದ ಮಟ್ಟಿಗೆ ಇದು ಸರ್ವಶ್ರೇಷ್ಠ ಸಾಧನೆಯಾಗಿ ಉಳಿದಿದೆ. ಈ ಅವಧಿಯನ್ನು ದೇಶದ ಫುಟ್‌ಬಾಲ್ ಕ್ರೀಡೆಯ ಸುವರ್ಣ ಯುಗವೆಂದೇ ಬಣ್ಣಿಸಲಾಗಿದೆ.

ಆಗ ತಂಡಕ್ಕೆ ಸೈಯದ್ ಅಬ್ದುಲ್ ರಹೀಮ್ ಕೋಚ್ ಆಗಿದ್ದರು. ಪಿ.ಕೆ. ಬ್ಯಾನರ್ಜಿ, ನೆವಿಲ್ ಡಿಸೋಜಾ, ಜೆ. ಕೃಷ್ಣಸ್ವಾಮಿ (ಕಿಟ್ಟು) ಅವರು ತಂಡದಲ್ಲಿದ್ದರು. ಕೂಟದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತವು 4–2ರಿಂದ ಆಸ್ಟ್ರೇಲಿಯಾ ಎದುರು ಗೆದ್ದಿತ್ತು. ಡಿಸೋಜಾ ಹ್ಯಾಟ್ರಿಕ್ ಸಾಧನೆ ಮಾಡಿದ್ದರು. ಆದರೆ ನಾಲ್ಕರ ಘಟ್ಟದಲ್ಲಿ ಯುಗೊಸ್ಲಾವಿಯಾ ಎದುರಿನ ಪಂದ್ಯದಲ್ಲಿ ಸೋತಿದ್ದ ಭಾರತಕ್ಕೆ ಫೈನಲ್ ಪ್ರವೇಶಿಸಲು ಸಾಧ್ಯವಾಗಲಿಲ್ಲ.

ಅವರ ಅಮೋಘ ಆಟದಿಂದಾಗಿ ಮೋಹನ್ ಬಾಗನ್ ತಂಡವು ಡುರಾಂಡ್ ಕಪ್ (1953), ರೋವರ್ಸ್ ಕಪ್ (1955), ಸಂತೋಷ್ ಟ್ರೋಫಿ (1953, 1955) ಜಯಿಸಿತ್ತು. ಅವರ ತರಬೇತಿಯಲ್ಲಿಯೂ ಬಾಗನ್ ತಂಡವು 1962ರಲ್ಲಿ ಸಂತೋಷ್ ಟ್ರೋಫಿ ಗೆದ್ದಿತ್ತು.

ಪ್ರಗ್ನಾನಂದಗೆ ಸೋಲು

ಮಿಯಾಮಿ (ಪಿಟಿಐ): ಭಾರತದ ಆರ್. ಪ್ರಗ್ನಾನಂದ ಅವರು ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯಲ್ಲಿ ಮೊದಲ ಸೋಲು ಅನುಭವಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಸತತ ನಾಲ್ಕು ಸುತ್ತುಗಳಲ್ಲಿ ಜಯ ಸಾಧಿಸಿದ್ದ ಪ್ರಗ್ನಾನಂದ, ಐದನೇ ಹಣಾಹಣಿಯಲ್ಲಿ ಚೀನಾದ ಕುವಾಂಗ್ ಲಿಯಮ್ ಲೆ ಎದುರು ಎಡವಿದರು. ಲಿಯಮ್ 2.5–0.5ರಿಂದ ಭಾರತದ ಆಟಗಾರನನ್ನು ಮಣಿಸಿದರು.

ಪಂದ್ಯದ ಮೊದಲ ಗೇಮ್‌ನಲ್ಲಿ ಡ್ರಾ ಸಾಧಿಸಿದ್ದ ಪ್ರಗ್ನಾನಂದ, ಎರಡು ಮತ್ತು ಮೂರನೇ ಗೇಮ್‌ಅನ್ನು ಕೈಚೆಲ್ಲಿದರು.

ಇನ್ನೊಂದು ಪಂದ್ಯದಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 2–4ರಿಂದ ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ ಎದುರು ಮುಗ್ಗರಿಸಿದರು. ಐದನೇ ಸುತ್ತಿನ ಬಳಿಕ ಕಾರ್ಲ್‌ಸನ್ (13 ಪಾಯಿಂಟ್ಸ್) ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

12 ಪಾಯಿಂಟ್ಸ್ ಗಳಿಸಿರುವ ಪ್ರಗ್ನಾನಂದ ಎರಡನೇ ಸ್ಥಾನದಲ್ಲಿದ್ದಾರೆ.